ಕರ್ನಾಟಕ ವಿಧಾನಸಭೆ

ಗುರುವಾರ 29ನೇ ಜೂನ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 8 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಶ್ರೀಮತಿ ಜಯಮಾಲರವರಿಗೆ ಸಂಬಂಧಪಟ್ಟಂತೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಸಭಾಧ್ಯಕ್ಷರೆ, ಬಹಳ ಮಹತ್ವದ ವಿಷಯ ಇದೆ, ಇವತ್ತು ಹೆಣ್ಣನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದಾರೆ. ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲೆ ಜಯಮಾಲ ಎನ್ನುವ ನಟಿ ಹೋಗಿ ಮುಟ್ಟಿದ್ದಕ್ಕೆ.......

ಅಧ್ಯಕ್ಷರು : ಇದನ್ನು ಆಮೇಲೆ ತೆಗೆದುಕೊಳ್ಳೋಣ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ದಯವಿಟ್ಟು ಇದು ಬಹಳ ಮಹತ್ವದ ವಿಚಾರ ಇದೆ.

ಅಧ್ಯಕ್ಷರು : ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಇದು ಯಾವ ಕಾಲ ಅಧ್ಯಕ್ಷರೆ, ಅಸ್ಪೃಶ್ಯರಂತೆ ನಡೆದುಕೊಳ್ಳುವುದು?

ಅಧ್ಯಕ್ಷರು : ಈಗ ಪಾಟೀಲರೆ, ನಾನು ಅವಕಾಶ ಮಾಡಿ ಕೊಡುತ್ತೇನೆ, ದಯಮಾಡಿ.....

ಶ್ರೀ ಎಸ್.ಎಸ್. ಪಾಟೀಲ್ : ದಯಮಾಡಿ ನನಗೆ ಅವಕಾಶ ಮಾಡಿಕೊಡಬೇಕು ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಮಾಡಿಕೊಡುತ್ತೇನೆ. ಈಗ 69ರ ನಿಯಮದ ಮೇಲೆ ಚರ್ಚೆ. ಶ್ರೀರಾಮರೆಡ್ಡಿಯವರು.

ಶ್ರೀ ಬಿ.ಎ. ಜೀವಿಜಯ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಮಹತ್ವದ ವಿಷಯ ಇದೆ.

ಅಧ್ಯಕ್ಷರು : ಜೀವಿಜಯರವರೇ, ನಿಮಗೂ ಅವಕಾಶ ಮಾಡಿಕೊಡುತ್ತೇನೆ. ಆ ವಿಷಯ ಅತೀ ಮಹತ್ವದ್ದು ಇದೆ. ಅವಕಾಶ ಮಾಡಿಕೊಡುತ್ತೇನೆ.

2. ನಿಯಮ 69ರ ಮೇರೆಗೆ

ವಿಷಯ : ಬಿ.ಎಂ.ಐ.ಸಿ. ಯೋಜನೆಯ ವಿಚಾರದ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಿಯಮ 69ರ ಕೆಳಗಡೆ ಬಿ.ಎಂ.ಐ.ಸಿ. ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನಿಮಗೆ ಧನ್ಯವಾದಗಳು. ಈ ಚರ್ಚೆ ಪ್ರಾರಂಭವಾಗುವುದಕ್ಕೆ ಮೊದಲು ನನ್ನದು ಸದನಕ್ಕೆ ಒಂದು ವಿನಂತಿ ಇದೆ. ನನ್ನ ವಿನಂತಿ ಏನೆಂದರೆ,

ಈ ಸುಪ್ರೀಂ ಕೋರ್ಟ್ ತೀರ್ಮಾನ ಬಂದಮೇಲೆ ಅದರ ಪರಿಸ್ಥಿತಿ ಬದಲಾವಣೆಯಾಯಿತು. ಹಾಗಾಗಿ ನಾವು ಇದನ್ನು ಚರ್ಚೆ ಮಾಡಬೇಕಾಯಿತು. ಬಹಳ ಪ್ರಮುಖವಾಗಿ ಬಂದಿರತಕ್ಕಂಥ ಅನುಮಾನ ಏನೆಂದರೆ ಸುಪ್ರೀಂ ಕೋರ್ಟ್‌ನಲ್ಲಿ ನನಗೂ ಮತ್ತು ಮಾನ್ಯ ಮಾಧುಸ್ವಾಮಿಯವರಿಗೂ ದಂಡ ಹಾಕಿದ್ದಾರೆ. ಹಾಗಾಗಿ ಬಿ.ಎಂ.ಐ.ಸಿ. ನಲ್ಲಿ ನೈಸ್ ಕಂಪನಿ ಕೇಸನ್ನು ಎತ್ತಿ ಹಿಡಿದಿದ್ದಾರೆ ಎನ್ನುವಂತಹ ಅಭಿಪ್ರಾಯ ವ್ಯಾಪಕವಾಗಿ ಹರಡಿದೆ ಹಾಗೂ ಪತ್ರಿಕೆಗಳಲ್ಲೂ ಕೂಡ ಅದೇರೀತಿಯಲ್ಲಿ ಪ್ರಚಾರವಾಗಿದೆ. ಆದರೆ ಅದು ಅಲ್ಲ, ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ, ನೋಡಿ ಮಾನ್ಯ ಅಧ್ಯಕ್ಷರೆ, ನಮಗೆ ದಂಡ ಹಾಕಿರುವುದಲ್ಲ.

"In the result we find that the judgment of the High Court dtd. 3.5.2005 impleading before us in main matter is not liable to be interfered with. There is no merit in appeal and they are hereby dismissed considering the frivolous argument and mala-fide with which the STate of Karnataka and its instrumentalities have conducted this litigation before the High Court and us. It shall pay Nandi costs quanitified at Rs. 5 lakhs within four weeks of this order. Appellants in CA No. 3497/2005 Madhu Swamy and Others in addition to the costs already ordered by the High Court, shall pay to the Supreme Court Legal Service Authority costs quantified at Rs. 50,000/- within four weeks of this Order".

ಇದು ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್, ಹಾಗಾಗಿ ನಮಗೆ ಹಾಕಿರುವಂಥಾದ್ದು ಫೈನ್ ಅಲ್ಲ. ಬದಲಿಗೆ petition has been dismissed with costs. ನೀವು ಲೀಗಲ್ ಚಾರ್ಜ್ ಕೊಡಿ ಎಂದು. ಆದರೆ ನಮ್ಮ ಮೇಲೆ ಬಂದಿರುವಂಥಾದ್ದು, ನಮಗೆ ದಂಡ ಹಾಕಿದ್ದಾರೆ, ದಂಡ ಹಾಕಿಸಿಕೊಂಡಿದ್ದೀರಿ, ಎಂದು ಇಲ್ಲಿ ವಾದ ಬಂದಿದೆ. ಅದೇ ರೀತಿಯಲ್ಲಿ ಹೈಕೋರ್ಟ್‌ನಲ್ಲಿ ಆರ್ಡರ್ ಆಗಿದೆ. ಈ ಹೈಕೋರ್ಟ್ ಆರ್ಡರ್ ಏನಾಗಿದೆಯೆಂದರೆ Writ Petition No. 45386/2004 filed by J.C. Madhu Swamy and Others is dismissed with costs which are assessed at Rs. 50,000/-. It is dismissed with costs. It is not a fine. ಮತ್ತೆ ಇದರ ಜೊತೆಗೆ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಎರಡೂ ಬಾರಿ ಸ್ಪಷ್ಟವಾಗಿ ಏನು ಹೇಳಿದೆಯೆಂದರೆ, ನಾವು ಸೋಮಶೇಖರ ರೆಡ್ಡಿಯವರ ಕೇಸ್‌ನ ಜಡ್ಜ್‌ಮೆಂಟ್‌ನಲ್ಲಿ ನಾವು ಇಂಟರ್‌ಫಿಯರ್ ಆಗುವಂತಹ ಅವಶ್ಯಕತೆ ಇಲ್ಲ. ಅಲ್ಲಿ ಏನು ತೀರ್ಮಾನವಾಗಿದೆಯೋ, ಅದರ ಪ್ರಕಾರ ಹೋಗಬೇಕು, ಮತ್ತು according to the framework agreement of 1997, letter and spirit ನಲ್ಲಿ Implement ಎಂದು ಹೇಳಿದ್ದಾರೆ, ಹಾಗಾಗಿ then what is the framework agreement? ಫ್ರೇಮ್ ವರ್ಕ್ ಅಗ್ರಿಮೆಂಟ್‌ಗೆ ಬೇಸಿಸ್ ಏನು? ದಿ: 20.5.1995

ರಲ್ಲಿ Memorandum of Understanding Government ಬರುತ್ತದೆ. ಈ Memorandum of Understanding ಬರುವಂತಹ ಸಂದಭದಲ್ಲಿ, ಅಮೇರಿಕಾದ ಮೂರು ಮೂಲ ಕಂಪೆನಿಗಳ ಜೊತೆ ಅದು ಸಹಿ ಮಾಡುತ್ತದೆ, ಅದು ಎಂ.ಒ.ಯು ನಲ್ಲಿ, ಆದರೆ ಇದರಲ್ಲಿ ನೈಸ್ ಕಂಪೆನಿಯ ಪ್ರಸ್ತಾಪ ಇಲ್ಲ. ಆದರೆ "ನೈಸ್ ಕಂಪೆನಿ" ಯಾವಾಗ ಆಯಿತು? When NICE Company came into the picture? ಅದು ಬಹಳ ಮುಖ್ಯವಾದದ್ದು. MOU has clearly directed. ಹೈ ಲೆವಲ್ ಕಮಿಟಿಯನ್ನು ಮಾಡಿ, ಅದರ ವರದಿಯ ಪ್ರಕಾರ ಈ ಪ್ರಾಜೆಕ್ಟ್ ಅನ್ನು ಇಂಪ್ಲಿಮೆಂಟ್ ಮಾಡುವಂಥಾದ್ದು, ಎಂದು ಎಂ.ಒ.ಯು.ನಲ್ಲಿ ಆದಂತಹ ಅಗ್ರಿಮೆಂಟ್ ಪ್ರಕಾರ then agreement was decided. ಅವತ್ತು ಏನು ಹೈ ಲೆವಲ್ ಕಮಿಟಿ ರೆಕಮೆಂಡ್ ಮಾಡಿದೆಯೆಂದರೆ, ನಾನು ಅದನ್ನು ಭ್ರೀಫ್ ಆಗಿ ಹೇಳುತ್ತೇನೆ. What was the recommendation of the high-level Committee then?

No. 1) There is absolutely no financial investmen/commitment, whatsoever, by the Government of Karnataka. This is No.1. No.2) Private land will be purchased on the fair price by the consortium. No.3) Government land should also be sold to consortium on the value price fixed by the Government as per rules. No.4) After lease period of 30 years from the date of completion of the express highway including the link and peripheral roads, the express highway facility for which toll has been collected will revert back its entirety into the Government. ಇದು ಆ ಹೈ ಲೆವಲ್ ಕಮಿಟಿ ರೆಕಮೆಂಡೇಷನ್ ಮಾಡಿರುವಮಥಾದ್ದು. ಈ ಹೈ ಲೆವಲ್ ಕಮಿಟಿ ರೆಕಮಂಡೇಷನ್‌ನಲ್ಲಿ for whole project ಲ್ಯಾಂಡ್ ಎಷ್ಟು ಬೇಕೆಂದು ಹೇಳುತ್ತಾರೆಂದರೆ. Land required for express and peripheral roads will be 5,195.37 acres and for 7 townships, the land required will be 20,092 acres. ಇದು ಹೈ ಲೆವೆಲ್ ಕಮಿಟಿ ರೆಕಮೆಂಡೇಷನ್ ಮಾಡಿರುವಂಥಾದ್ದು. What is the quantum of land needed by the BMIC. No.2) Out of the 7 townships proposed, the combination of express highway and 5 townships or with the 7 townships would economically viable. ಇದು ಎರಡನೆಯದು ಹೈ ಲೆವಲ್ ಕಮಿಟಿ ಕೊಟ್ಟಿರುವಂಥಾದ್ದು, ಮತ್ತೆ ಇಡೀ ಪ್ರಾಜೆಕ್ಟ್‌ಗೆ ಹಣ ಎಷ್ಟು ಆಗುತ್ತದೆಂದು ಎಸ್ಟಿಮೇಟ್ ಮಾಡಿದ್ದಾರೆಂದರೆ, the cost aspect : The cost of the express highway projected comprising of the main expresway, peripheral road and elevated link road is Rs. 1,583.76 Crore. ಇದು ಹೋಲ್ ಪ್ರಾಜೆಕ್ಟ್ ರೋಡಿಗೆ ಇಷ್ಟು ಹಣ ಆಗುತ್ತದೆ. 'This is proposed to be financed......' ಇದಕ್ಕೆ ಹಣ ಹೇಗೆ ಮಾಡಬೇಕೆಂದು ಅದರಲಿ ಇದೆ. ಈ ಹೈಪವರ್ ಕಮಿಟಿಯ ಸಜೆಕ್ಷನ್‌ನಲ್ಲಿ ಹೇಗಿದೆಯೆಂದರೆ, ಇದಕ್ಕೆ ಹಣವನ್ನು ನೀವು 'This is proposed to be financed

by equity at Rs. 522 crore and that at Rs. 1,063.65 crore; the townships are expected to be developed on a self-financing basis'.

ಇದು ಹೈ ಪವರ್ ಕಮಿಟಿಯ ರೆಕಮೆಂಡೇಷನ್ ಇರುವಂಥಾದ್ದು. ಈ ಆಧಾರದ ಮೇಲೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಅವರು ಒಪ್ಪಿಗೆಗೆ ಕಳುಹಿಸಿದ್ದಾರೆ. ಅದನ್ನು ಯಾವತ್ತು ಕಳುಹಿಸಿದ್ದಾರೆ. ಅದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಏನು ಒಪ್ಪಿಗೆಯನ್ನು ಕೊಟ್ಟಿದ್ದಾರೆ? whole viability ಮಾಡಿ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಏನು ಒಪೀನಿಯನ್ ಕೊಟ್ಟಿದ್ದಾರೆಂದರೆ, 'On 20.11.95, Finance Department has recommended'. ಏನೆಂದು ಮಾಡಿದೆ? 'It is on the basis of the above recommendation of the high-level committee and the note prepared by the the Finance Department that the project was approved by permitting development of 5 townships instead of 7, as that would be economically viable as the Finance Department has noted that with 5 townships, the consortium will have a reasonable return of 17 to 18% per annum". ಹಾಗಾಗಿ 7 ಟೌನ್ ಶಿಫ್ ಇದ್ದುದ್ದನ್ನು 5ಕ್ಕೆ ರೆಡ್ಯೂಸ್ ಮಾಡಿ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ರೆಕಮೆಂಡ್ ಕಳುಹಿಸಿದರು. ಈ ಎರಡು ಟೌನ್‌ಶಿಫ್‌ಅನ್ನು ಡಿಲೀಟ್ ಮಾಡಿದ ಮೇಲೆ, ನಿಮಗೆ ಲ್ಯಾಂಡ್ ಎಷ್ಟು ಬೇಕಾಯಿತು? ಹಿಂದೆ 7 ಟೌನ್‌ಶಿಫ್ ಇದ್ದಂಥ ಸಂದರ್ಭದಲ್ಲಿ, 20;092 ಎಕರೆ ಬೇಕೆಂದು ಇತ್ತು. ಅದರಲ್ಲಿ ಎರಡು ಟೌನ್‌ಶಿಫನ್ನು ರೆಡ್ಯೂಸ್ ಮಾಡಿ, 5 ಟೌನ್‌ಶಿಫ್‌ಅನ್ನು ತೆಗೆದುಕೊಂಡ ಸಂದರ್ಭದಲ್ಲಿ, ಲ್ಯಾಂಡ್ ಎಷ್ಟು ಬೇಕಾಗುತ್ತದೆ. ಎಂಬ ಬಗ್ಗೆ ರೆಕಮೆಂಡ್ ಮಾಡುತ್ತಾರೆಂದರೆ, "It is only 13,134 acres of 5 townships and 5,195.37 accres for roads. Altogether putting it is 21,193". ಅದರ ಜೊತೆಗೆ, apart from this Government sanctions 111 Km. expressway between Bangalore to Mysore and around Bangalore only 41 Kms. peripheral road and 9.8 Kms. link road requiring 5,195.37 acres. ಇಷ್ಟು ಬೇಕಾಗುತ್ತದೆ. ಇದು ಆದಮೇಲೆ, ಪ್ರೇಮ್ ವರ್ಕ್ ಅಗ್ರಿಮೆಂಟ್‌ಗೆ ಬಂದಾಗ, 29.1.96 ಮುಗಿತು. ಪ್ರೇಮ್ ವರ್ಕ್ ಅಗ್ರಿಮೆಂಟ್‌ಗೆ ಯಾವಾಗ ಸೈನ್ ಆಗಿದ್ದು? ದಿ: 3.4.1997ರಲ್ಲಿ ಪ್ರೇಮ್‌ವರ್ಕ್ ಅಗ್ರಿಮೆಂಟ್ ಆಯಿತು. ಈ ಪ್ರೇಮ್‌ವರ್ಕ್ ಅಗ್ರಿಮೆಂಟ್, ಇದು ಇಡೀ ಕರ್ನಾಟಕ ರಾಜ್ಯದ ಬಡ ಜನತೆಯ ಭೂಮಿಯನ್ನು, ಇಡೀ ಕರ್ನಾಟಕ ರಾಜ್ಯದ ಅವ್ಯವಸ್ಥೆಗೆ ಮೂಲ ಕಾರಣ ಈ ಫ್ರೇಮ್ ವರ್ಕ್ ಅಗ್ರಿಮೆಂಟ್. ಇದು ಜನತಾ ಸರ್ಕಾರದ ಕೊಡಿಗೆ. ಈ ಪ್ರೇಮ್ ವರ್ಕ್ ಅಗ್ರಿಮೆಂಟ್‌ಅನ್ನು ಜನತಾ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಮಾಡಿತು. ಈ ಫ್ರೇಮ್ ವರ್ಕ್ ಅಗ್ರಿಮೆಂಟ್‌ನಲ್ಲಿ ಯಾವ ರೀತಿಯ ಅನಾಹುತ ನಡೆದಿದೆಯೆಂದರೆ, ನಾನು ಅದರ ಡಿಟೈಲ್ಸ್ ಎಲ್ಲಕ್ಕೂ ಹೋಗುವುದಿಲ್ಲ. Framework agreement, virtually the whole project and land concerning

to that project is sold out to the Nandi Company. ಎಲ್ಲಾ absolute power ಅವನಿಗೆ, ಅದರಲ್ಲಿ ಎಲ್ಲಿಯವರೆಗೆ ಅಧಿಕಾರವನ್ನು ಕೊಟ್ಟಿದ್ದಾರೆಂದರೆ, ಇನ್‌ಸ್ಪೆಕ್ಷನ್ ಮಾಡುವಂತಹ ಅಧಿಕಾರ ಕೂಡ ಸರ್ಕಾರಕ್ಕೆ ಇಲ್ಲ. ಆ ರೋಡಿನ ಕ್ವಾಲಿಟಿಯ ಬಗ್ಗೆ ಇನ್‌ಸ್ಪೆಕ್ಷನ್ ಮಾಡುವಂತಹ ಅಧಿಕಾರ ಕೂಡ ಸರ್ಕಾರಕ್ಕೆ ಇಲ್ಲ. ಇದನ್ನು ಸೂಪರ್‌ವಿಷನ್ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕಿಲ್ಲ. ಯಾವುದನ್ನೂ ಸರ್ಕಾರ ಮಾಡುವ ಹಾಗಿಲ್ಲ. Everything is done by NICE Company only. ಅವರು ರಿಪೋರ್ಟ್ ಮಾಡುತ್ತಾರೆ. ರಿಪೋರ್ಟ್ ಮಾಡಿದ 60 ದಿವಸಗಳೊಳಗೆ ಸರ್ಕಾರ ಅದರ ಬಗ್ಗೆ ಅನುಮತಿ ಕೊಡುವುದನ್ನೋ, ನಿರಾಕರಣೆ ಮಾಡುವುದನ್ನೋ ಮಾಡದಿದ್ದರೆ it is deemed to be accepted, ಎಂದು ಫ್ರೇಂವರ್ಕ್ ಅಗ್ರಿಮೆಂಟ್‌ನಲ್ಲಿ ಮಾಡುತ್ತಾರೆ. ಅಂದರೆ, ನೈಸ್ ಕಂಪನಿ ರಿಪೋರ್ಟ್ ಸಬ್ಮಿಟ್ ಮಾಡಿದ 60 ದಿವಸಗಳೊಳಗೆ ಸರ್ಕಾರ ಅದರ ಬಗ್ಗೆ ಒಪೀನಿಯನ್ ಕೊಡದಿದ್ದರೆ it is deemed to be agreed. ಇಂತಹ ಒಪ್ಪಂದವನ್ನು ಈ ದೇಶದಲ್ಲಿ ಎಲ್ಲಾದರೂ ನೋಡಿದ್ದೀರಾ ಸ್ವಾಮಿ? ಇದು ಫ್ರೇಂವರ್ಕ್ ಅಗ್ರಿಮೆಂಟ್‌ನಲ್ಲಿ ಮಾಡಿರತಕ್ಕಂಥಾದ್ದು. ಬೇಕಾದರೆ, ಇಡೀ ಫ್ರೇಂವರ್ಕ್ ಅಗ್ರಿಮೆಂಟನ್ನು ಓದಿ. It is a complete sell-out. ಅದು ಅಲ್ಲಿಗೇ ನಿಂತು ಹೋಯಿತೇ? ಆ ಸೆಲ್ ಔಟ್ ಬಿಸಿನೆಸ್ ಫ್ರೇಂವರ್ಕ್ ಅಗ್ರಿಮೆಂಟಿಗೇ ನಿಂತುಹೋಗಲಿಲ್ಲ. ಈ ಫ್ರೇಂವರ್ಕ್ ಅಗ್ರಿಮೆಂಟ್ ಆದ ಮೇಲೆಯೇ ಸೋಮಶೇಖರ ರೆಡ್ಡಿ ಎನ್ನತಕ್ಕಂಥ ಒಬ್ಬ ರಿಟೈರ್ಡ್ ಇಂಜಿನಿಯರ್ ಹೈಕೋರ್ಟ್‌ಗೆ ಕೇಸ್ ಹಾಕಿದರು. ಏನೆಂದು ಕೇಸ್ ಹಾಕಿದರೆಂದರೆ, because of this framework agreement, the whole 29,000 acres of land will be sold out to NICE company for real estate business, ಅಂತ. ಆದ್ದರಿಂದ, ಇಡೀ ಪ್ರಾಜೆಕ್ಟನ್ನು ಡ್ರಾಪ್ ಮಾಡಬೇಕು ಎಂದು the retired engineer filed a petition in the High Court. ಸೋಮಶೇಖರ ರೆಡ್ಡಿಯವರ ಈ ಪಿಟೀಷನ್‌ಗೆ ಸಂಬಂಧಿಸಿದಂತೆ ಹೈಕೋರ್ಟ್ ಏನು ತೀರ್ಮಾನ ಮಾಡುತ್ತದೆಂದರೆ, ಹೈಕೋರ್ಟ್ ಇದರ ಎಲ್ಲಾ ಪ್ರೋಸ್ ಅಂಡ್ ಕಾನ್ಸ್ ಚರ್ಚೆ ಮಾಡಿ, under the project, Respondent No.2 ಅಂದರೆ ನಂದಿ, has to costruct 162 KMs of road requiring 6,999 acres of land, details of which are as follows:

(1) Express way 111 KMs including inter-changes, Toll Plazas, etc. totalling 4,528 acres pheripheral Road 41 kms. 2,193 Acres link road 9.6 KMs-278 acres; Total - 6,999 acres.

ರೋಡ್‌ಗೆ ಎಷ್ಟು ಭೂಮಿ ಬೇಕು ಎನ್ನುವುದರ ಬಗ್ಗೆ ಹೈಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಕ್ಲಿಯರ್‌ಆಗಿ ಕೊಟ್ಟಿರತಕ್ಕಂಥ ತೀರ್ಮಾನ. ಹಿಂದೆ, 5,119.37 ಎಕರೆ ಭೂಮಿ ಬೇಕು ಎಂದು ಹೈ ಲೆವೆಲ್ ಕಮಿಟಿ ರೆಕಮೆಂಡ್ ಮಾಡಿತ್ತು. ಫ್ರೇಂವರ್ಕ್ ಅಗ್ರಿಮೆಂಟ್‌ಗೆ ಬರುವಾಗ it has gone upto 6,999 acres. Even for that, the High Court has agreed. ಇದಕ್ಕೆ ಹೈಕೋರ್ಟ್ ಒಪ್ಪಿಕೊಂಡು

ರಸ್ತೆಗಳಿಗೆ 6,999 ಎಕರೆ ಮತ್ತು ಟೌನ್‌ಶಿಪ್‌ಗೆ 13 ಸಾವಿರ ಚಿಲ್ಲರೆ ಎಕರೆ ಭೂಮಿ ಬೇಕು ಎಂದು ಹೇಳಿ, ಫೈನಲಿ ಒಟ್ಟು 21,193 ಎಕರೆ ಭೂಮಿ ಬೇಕು ಎಂದು ಹೈಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಹೀಗೆ ಹೈಕೋರ್ಟ್‌ನಲ್ಲಿ ತೀರ್ಮಾನವಾದ ಮೇಲೆ ಆದಂಥ ಗ್ರೇಟೆಸ್ಟ್ ಫ್ರಾಡ್ ಬಗ್ಗೆ ಹೇಳುತ್ತೇನೆ. ಫ್ರೇಂವರ್ಕ್ ಅಗ್ರಿಮೆಂಟೇ ಒಂದು ದೊಡ್ಡ ಫ್ರಾಡ್. ಆ ಫ್ರೇಂವರ್ಕ್ ಅಗ್ರಿಮೆಂಟ್ ಮೇಲೆ ಹೈಕೋರ್ಟ್ ಎಷ್ಟು ಭೂಮಿ ಬೇಕು ಎಂದು ತೀರ್ಮಾನ ಕೊಟ್ಟಿರತಕ್ಕಂಥಾದ್ದು ಆಯಿತು. ಫ್ರೇಂವರ್ಕ್ ಅಗ್ರಿಮೆಂಟ್ ಆದಮೇಲೆ, ಹೈಕೋರ್ಟ್ ತೀರ್ಮಾನವಾದ ಮೇಲೆ, the greatest fraud committed on the State was this "Tripartite aGreement". ಟ್ರೈ-ಪಾರ್ಟಿಯೇಟ್ ಅಗ್ರಿಮೆಂಟ್ ಮಾಡುತ್ತಾರೆ. ಫ್ರೇಂವರ್ಕ್ ಅಗ್ರಿಮೆಂಟ್ ಹೋಯಿತು, ಹೈಕೋರ್ಟ್ ಜಡ್ಜ್‌ಮೆಂಟ್ ಹೋಯಿತು, ನಂತರ, 9-8-2002 ರಲ್ಲಿ ಟ್ರೈ-ಪಾರ್ಟಿಯೇಟ್ ಅಗ್ರಿಮೆಂಟನ್ನು ಮಾಡಿಕೊಳ್ಳುತ್ತಾರೆ. 1997ರಲ್ಲಿ ಫ್ರೇಂವರ್ಕ್ ಅಗ್ರಿಮೆಂಟ್ ಆಗುತ್ತದೆ. 2002ರಲ್ಲಿ ಸೋಮಶೇಖರ ರೆಡ್ಡಿ ಕೇಸ್‌ನಲ್ಲಿ ಡಿಸಿಷನ್ ಆಗುತ್ತದೆ. ನಂತರ, 2002ರಲ್ಲಿ ಅಂದರೆ, ಫೇಂವರ್ಕ್ ಅಗ್ರಿಮೆಂಟ್ ಆದಮೇಲೆ, ಹೈಕೋರ್ಟ್ ಜಡ್ಜ್‌ಮೆಂಟ್ ಆದಮೇಲೆ, ಹೈಕೋರ್ಟ್ ಆಜ್ಞೆಯನ್ನೂ ಉಲ್ಲಂಘನೆ ಮಾಡಿ, ಫ್ರೇಂವರ್ಕ್ ಅಗ್ರಿಮೆಂಟನ್ನೂ ಉಲ್ಲಂಘನೆ ಮಾಡಿ, ಟ್ರೈ-ಪಾರ್ಟಿಯೇಟ್ ಅಗ್ರಿಮೆಂಟನ್ನು 9-8-2002 ರಲ್ಲಿ ಬೆಂಗಳೂರಿನಲ್ಲಿ ಮಾಡಿಕೊಳ್ಳುತ್ತಾರೆ. ಆ ಇಡೀ ಅಗ್ರಿಮೆಂಟ್‌ನಲ್ಲಿ ಏನೇನಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. But, how they have sold out the whole land in the Tripartite Agreement? ಇದಕ್ಕೆಲ್ಲಾ ಯಾರು ಕಾರಣರಾಗಿದ್ದಾರೆ, ಅವರು ಅಧಿಕಾರಿಗಳಾಗಲೀ, ರಾಜಕಾರಣಿಗಳಾಗಲೀ, they must be criminally prosecuted. ಯಾವ ರೀತಿ ಟ್ರೈ-ಪಾರ್ಟಿಯೇಟ್ ಅಗ್ರಿಮೆಂಟ್ ಮಾಡಿದ್ದಾರೆ ಗೊತ್ತೇ? ನಾನು ಪೂರ್ತಿ ಓದುವುಲ್ಲ. ಮುಖ್ಯವಾದುದನ್ನು ಮಾತ್ರ ಹೇಳುತ್ತೇನೆ.

No.I- Framework Agreement means the areement dated 3rd April 1997 entered into between.........

Sri K.R. Ramesh Kumar : In the Tripartite Agreement, who is the 'Third' Party?

ಶ್ರೀ ಜೆ.ಸಿ. ಮಾಧುಸ್ವಾಮಿ : ನೈಸ್ ಕಂಪನಿಯವನು ನೈಸೆಲ್ ಎನ್ನುವ ಒಂದು ಕಂಪನಿಯನ್ನು ಮಾಡಿ ಅವರಿಬ್ಬರೂ ಮಾಡಿದಂಥ ಅಗ್ರಿಮೆಂಟನ್ನು ಗವರ್ನಮೆಂಟ್ ಒಪ್ಪಿಕೊಂಡಂಥಾದ್ದು ಟ್ರೈ-ಪಾರ್ಟಿಯೇಟ್ ಅಗ್ರಿಮೆಂಟ್. He himself has created on more company called-NICEL. ಆ ಕಂಪನಿ, ನೈಸ್ ಕಂಪನಿ ಮತ್ತು ಸರ್ಕಾರದ ಮಧ್ಯೆ ಆದ ಅಗ್ರಿಮೆಂಟ್ ಅದು. ಸರ್ಕಾರ ಎಂದರೆ ಸೆಕ್ರೆಟರಿ ಮತ್ತು ಆ ಕಂಪನಿಗಳ ಮಧ್ಯೆ ಆದಂಥಾದ್ದು ಟ್ರೈಪಾರ್ಟಿಯೇಟ್ ಅಗ್ರಿಮೆಂಟ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು. ನೈಸ್ ಕಂಪನಿಯವನು one more ಕಂಪನಿಯನ್ನು ಕ್ರಿಯೇಟ್ ಮಾಡುತ್ತಾರೆ. ಅದನ್ನೂ ಸೇರಿಸಿ ಟ್ರೈಪಾರ್ಟಿಯೇಟ್ ಅಗ್ರಿಮೆಂಟ್ ಎಂದು ಮಾಡುತ್ತಾರೆ.

ಈ ಟ್ರೈಪಾರ್ಟಿಯೇಟ್ ಅಗ್ರಿಮೆಂಟ್ ಏನೆಂದರೆ, this is a total fraud committed on the Karnataka people and the poor peasants, It is nothing but looting. BOOT-Build, Own, Operate and Transfer. But the whole MoU is booted-out by this NICE company. The intention of MoU is BOOT. But the NICE company booted the whole MoU, Framework Agreement and High Court Judgement. Finally, they came to the Tripartite Agreement.

"Framework Agreement means, Agreement dated 3re April, 1997 entered into between Government supplemented by a ratification deed dated 27th August, 1997. Supplementary Agreement dated 31st March 2000, in each case between GoK and NICE and to the extent assigned to the NICE under the assigned agreement unless the context otherwise requires".

That is No. 1 fraud. Then Second important frauds :-

"Stage I of the infrastructure corridor shall mean toll road Section A. Acquisition of the land, such rise, title and interest thereupon as may be necessary for the abovementioned road and develop and sale of land.....

ಲ್ಯಾಂಡನ್ನು ಡೆವಲಪ್ ಮಾಡಬಹುದು ಮತ್ತು ಸೇಲ್ ಮಾಡಬಹುದು ಎಂದು ಟ್ರೈಪಾರ್ಟಿಯೇಟ್ ಅಗ್ರಿಮೆಂಟಿನಲ್ಲಿ ಕೊಟ್ಟಿದ್ದಾರೆ; basic development and sale of land including the tenet of inter-changes and townships.

No.3.- "Stage I of the infrastructure corridor has been demarcated, segregated and dealienated from other stages of the infrastructure road".

Why it has been demarcated dealienated from other parts of the road? Because here lies the fraud. 41 ಕಿ.ಮೀ. ಪೆರಿಫೆರಲ್ ರೋಡಿಗೆ 2 ಸಾವಿರ ಚಿಲ್ಲರೆ ಎಕರೆ ಭೂಮಿ ಬೇಕು ಎಂದು ಹೇಳಿದಂಥ ಸಂದರ್ಭದಲ್ಲಿ, ಆ ಪ್ರದೇಶದಲ್ಲಿ ಹೆಚ್ಚು ಲ್ಯಾಂಡನ್ನು ಪಡೆಯಬೇಕು ಎನ್ನುವ ಉದ್ದೇಶದಿಂದ ಇದನ್ನು ಸೆಪರೇಟ್ ಮಾಡಿದ್ದಾರೆ. ಹೀಗೆ ಸೆಪರೇಟ್ ಮಾಡಿ, ಹೈಕೋರ್ಟ್ ಜಡ್ಜ್‌ಮೆಂಟ್ ನಂತರವು ಕೂಡ ಅವನಿಗೆ 243 ಎಕರೆ ಜಮೀನನ್ನು ಹೆಚ್ಚಿಗೆ ಕೊಟ್ಟಿದ್ದಾರೆ. ಆದರೆ ಇನ್ನೂ 8 ಸಾವಿರ ಎಕರೆ ಬೇಕು ಎಂದು ಅವನು ಕೇಳುತ್ತಿದ್ದಾನೆ. ಅದಕ್ಕೆ ನಂತರ ಬರುತ್ತೇನೆ. ಯಾವುದಾದರೂ 'ಒಂದು ಸರ್ಕಾರ ಈ ರೀತಿಯ ಟ್ರೈ ಪಾರ್ಟಿಯೇಟ್ ಅಗ್ರಿಮೆಂಟ್

ಮಾಡುತ್ತದೆಯೇ? Government, whichever may the government, is stick to the rule? What they have done is:

> "NICE shall be entitled exclusively and solely to design, to develop, to construct, maintain, operate the toll road and collection of toll in respect thereof and to acquire, develop, sell and dispose in accordance with the applicable laws".

ಮಾರಾಟ ಮಾಡಿಕೊಳ್ಳಬಹದು, dispose ಮಾಡಬಹುದು, ಇನ್ನೊಂದು All terms conditions of the framework of agreement, ಇದು ಬಹಳ ಮುಖ್ಯವಾದುದು. All terms and conditions of the framework agreement and toll concessions, agreement shall be deemed to have been incorporated in this agreement by reference and the same shall apply to the NICE to the extent of stage I of the Infrastructure corridor. This agreement shall be read in conjunction with the framework agreement, the concession agreement and assigment agreement. ಏನೇನು concession ಕೊಟ್ಟಿದ್ದಾರೆನ್ನುವುದು ಗೊತ್ತಾಗುತ್ತದೆ. 1422 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಭೂಮಿಯನ್ನು ಅವನಿಗೆ ಕೊಟ್ಟಿದ್ದೀರಿ. ನೈಸ್ ಕಂಪನಿಗೆ 158 ಕೋಟಿ ರೂಪಾಯಿಗಳನ್ನು tax exemption ರೂಪದಲ್ಲಿ ಕೊಟ್ಟಿದ್ದೀರಿ. Conversion charges ಎಂದು 85 ಕೋಟಿ ರೂಪಾಯಿಗಳನ್ನು concession ಕೊಟ್ಟಿರಿ. This is the gift given to the Nice Company by the Government. ಈ tripartite agreement ಏನಿದೆ this is the greatest fraud committed on Karnataka people. ಈ tripartite agreement ಆಗಿರುವುದು frame work agreement ಆದಮೆಲೆ. ಅದರ ಆಧಾರದ ಮೇಲೆ High Court Judgement ಬಂದು High Cort specific ಆಗಿ ಇಷ್ಟೇ ಭೂಮಿ ಬೇಕೆಂದು ಹೇಳಿದ ಮೇಲೆ ಆ frame work agreement ನಲ್ಲಿ ಏನಿದೆ? Express Highway ಏನಿದೆ, Express Highway ಸಂಬಂಧ ಯಾವುದೇ ಜಮೀನನ್ನು ಮಾರಾಟ ಮಾಡತಕ್ಕಂಥ ಹಕ್ಕು ನಿಮಗಿಲ್ಲವೆಂದು framework agreement ನಲ್ಲಿದೆ. As per the framework agreement the only concession given to the NICE company was five townships ಅನ್ನು ಏನು ನೀವು develop ಮಾಡುತ್ತೀರಿ, ಅಲ್ಲಿ 45 ಪರ್ಸೆಂಟ್ ಅನ್ನು ನೀವು ಬೇಕಾದರೆ ಏನಾದರೂ ಮಾಡಿಕೊಳ್ಳಬಹುದು ನಿಮ್ಮ own ಎನ್ನುವಂಥದ್ದು ಇದೆ. Five town ships ನಲ್ಲಿ ಮಾತ್ರ, not in the road side. ಆದರೆ road side ನಲ್ಲಿ ಯಾವುದೇ ಜಮೀನನ್ನು ನೀನು ಮಾರಾಟ ಮಾಡುವುದಕ್ಕಾಗಲಿ, ಬೇರೆ ಯಾವುದೇ ವ್ಯವಹಾರ ಮಾಡಲಿಕ್ಕೆ ನಿನಗೆ ಬಿಡುವುದಿಲ್ಲವೆಂದು framework agreement ನಲ್ಲಿ ಹೇಳಿದೆ. So, frame work agreement has been upheld by the HIgh Court. Supreme court upheld ಮಾಡಿದೆ. Framework agreement ಆದಮೇಲೆ ಈ tripartite agreement ಆಗಿದೆ.

Framework agreement, High Court Judgment ಆದಮೇಲೆ ಈ tripartite agreement ಆಗಿದೆಯೆಂದು ಹೇಳಿದರೆ ಒಂದು ಕಡೆ frame work agreement ನಲ್ಲೂ ಉಲ್ಲಂಘನೆ ಮಾಡಿದ್ದಾರೆ, ಇನ್ನೊಂದು ಕಡೆ high court ತೀರ್ಪು ಕೂಡ ಉಲ್ಲಂಘನೆ ಮಾಡಿ ಈ ರೀತಿಯಾದಂಥ tripartite agreement ನ್ನು ಮಾಡಿಕೊಂಡಿದ್ದಾರೆ.

Sri K.R. Ramesh Kumar : Whether Tripartite Agreement is one of the issues before the Court in the Writ Petition?

Sri G.V. Sreeramareddy : No. That is not at all brought to the notice of the court. ಯಾವುದೇ ವಿಚಾರದಲ್ಲಿ Supreme Court interfere ಆಗಿಲ್ಲ. Except ಏನೆಂದರೆ contractual agreement ಮೇಲೆ ನಿಮಗೇನೋ dispute ಬಂದರೆ, that can be settled without interfering in the judgement of the Somashekar Reddy case ಅಂತ Supreme court ಅಷ್ಟೇ ಹೇಳಿರುವುದು. The Tripartite Agreement has not been brought either to the notice of the High Court or Supreme Court. ಏಕೆಂದರೆ, ಇದಾದಮೇಲೆ framework agreement, High Court agreement ಆದ ಮೇಲೆ tripartite agreement before the Supreme court Judgement ಆಗಿರತಕ್ಕಂಥದ್ದು 9th August 2002 ರಲ್ಲಿ tripartite agreement ಆಗಿರತಕ್ಕಂಥದ್ದು.

ಶ್ರೀ ಡಿ.ಆರ್. ಪಾಟೀಲ್ : ಸರ್, Tripartite agreement, was favourable to theNICE company. Why did you not bring it to the notice of the Supreme Court? ಏಕೆ ತರಲಿಲ್ಲ? ಉದ್ದೇಶ ಏನು?

Sri G.V. Srirama Reddy : That is not my duty. ಅವರನ್ನು ಕೇಳಿ. ನನ್ನನ್ನು ನೀವು ಕೇಳಿದರೆ ಹೇಗೆ? ಮಾನ್ಯ ಡಿ.ಆರ್. ಪಾಟೀಲರೆ, ದಯವಿಟ್ಟು ಹೇಳಿ. Is it a question to be put to me? That is not a correct way.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ತರದಿದ್ದುದರಿಂದ ಅವರೇನೋ ಅದನ್ನು ಮುಚ್ಚಿಟ್ಟಿದ್ದಾರೆಂದಾಯಿತು. Before the Court they have not disclosed this matter.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರ ಜೊತೆಗೆ finally tripartite agreement ಗೆ ಸಹಿ ಮಾಡಿರತಕ್ಕ ಸರ್ಕಾರ ಮತ್ತು ಈ ಪಾರ್ಟಿಗಳೆರಡು, ಇಂಥ ಒಂದು agreement ಮಾಡತಕ್ಕಂಥ ಸಂದರ್ಭದಲ್ಲಿ it has not been brought to the notice of the legislature or at least it has not been decided in the cabinet. This is most important ಅಂದರೆ ಸರ್ಕಾರ ಹೇಗೆ ಈ ವ್ಯವಹಾರವನ್ನು ನಡೆಸಿದೆ ಎನ್ನುವುದಕ್ಕೆ ಇದು most important.ಇಂಥ serious ಆದಂಥ ವಿಚಾರವನ್ನು ಸಾವಿರಾರು ಕೋಟಿ ರೂಪಾಯಿಗಳ ವಿಚಾರವನ್ನು ನಾವು ಒಪ್ಪಂದ ಮಾಡತಕ್ಕಂಥ ಸಂದರ್ಭದಲ್ಲಿ legislature has not been taken into confidence or cabinet has not taken into confidence. Instead of that, just by an administrative order it has been done. ಅದಾದನಂತರ, ಈ ಜಮೀನಿನ ಎಲ್ಲಾ

ರೀತಿಯಾದಂಥ ಅವ್ಯವಹಾರ ಪ್ರಾರಂಭವಾಗಿರತಕ್ಕಂಥದ್ದು ಅಲ್ಲಿಂದ ಇದರ ಪ್ರಕಾರ Government land ಅನ್ನು ಎಷ್ಟು ಕೊಟ್ಟಿದ್ದಾರೆ ಎನ್ನುವುದು ನೋಡೋಣ. Frame work agreement ನಲ್ಲಿ ಏನು ಹೇಳಿದೆಯೆಂದರೆ – Total Government Land 1499 ಎಕರೆ. Private Land 5550. ಒಟ್ಟಿಗೆ 6999 ಎಕರೆ, Townsip-1 ಗೆ 328 ಎಕರೆ ಸರ್ಕಾರಿ ಜಮೀನು ಮತ್ತು ಖಾಸಗಿ ಜಮೀನು 2447 ಎಕರೆ ಒಟ್ಟು 2775 ಎಕರೆ. Town ship-2 Government Land 614 acres, Private land 1222 acres, Total 1836 acres. Townsip-4: Government Land 684 acres, private land 931 acres, Totally 1615 acre. Township-5: Government land 2593 and Private land 19 acres Totally 2682 acres. ಟೌನ್‌ಶಿಫ್ ಐದಕ್ಕೆ 1181 ಎಕರೆ Government land, 3047 ಎಕರೆ private land, ಒಟ್ಟಿಗೆ 4228 ಎಕರೆ. ಅಲ್ಲಿ ಒಟ್ಟಿಗೆ 6540 ಎಕರೆ road ಗೆ, townships ಗೆ 13,127 ಎಕರೆ, ಒಟ್ಟು 20,193 ಎಕರೆ ಜಮೀನು ಬೇಕೆಂದು ಹೇಳತಕ್ಕಂಥದ್ದು framework agreement ನಲ್ಲಿ ಮತ್ತು High Court ತೀರ್ಮಾನದಲ್ಲಿರತಕ್ಕಂಥದ್ದು. ಇಡೀ framework agreement ಬರುವಾಗಲೇ fraud ಆಗಿದೆ. ಯಾವುದೆಂದರೆ, High level committee recommendation is only for 5,199 acres. ಅದು ಹೋಗಿ ಈಗ ಹತ್ತಿರ ಒಂದು ಎಕರೆ ಕಡಿಮೆ ಬಿಟ್ಟು 7000 ಎಕರೆ ಆಯಿತು. ಅಂದರೆ almost nearing to one thousand and odd acres frame work agreement ಗೆ ಬರುವಾಗ ಹೆಚ್ಚಿಗೆ ಆಯಿತು. ಈ framework agreement ಆದಮೇಲೆ ನೀವು ಅವರಿಗೆ already ಕೊಟ್ಟಿರುವ land ಈಗಾಗಲೇ peripheral road, link road, inter exchange road ಗೆ ನೀವೇನು land ಕೊಟ್ಟಿದ್ದಿರಿ, ಅವನಿಗೆ ಬೇಕಾಗಿರುವ 4271 ಎಕರೆಗಳಲ್ಲಿ already ನೀವು 5000 ಎಕರೆ ಜಮೀನನ್ನು ಕೊಟ್ಟಿದ್ದೀರಿ. ಇನ್ನೂ 423 ಎಕರೆ ಜಾಗ ಹೆಚ್ಚಿಗೆ ಅವನ ಹತ್ತಿರ ಇದೆ. ಆದರೆ ಅವನು ಇನ್ನು 5300 ಚಿಲ್ಲರೆ ಎಕರೆ ಜಮೀನು ಏಕೆಂದು ಹೇಳಿದ್ದಾನೆ. ಅದರ ಬಗ್ಗೆ KIADB has made an agreement with NICE company. ಅದನ್ನು ಆಮೇಲೆ ನಾನು ಹೇಳುತ್ತೇನೆ. ಈ ಎಲ್ಲಾ ವಿಚಾರಗಳು 28–08–0997 ರಲ್ಲಿ Assembly ಯಲ್ಲಿ ಚರ್ಚೆಗೆ ಬರುತ್ತದೆ. ಯಾವತ್ತು? The then PWD Minister Hon'ble Udasi is sitting here. ಅವರು House ನಲ್ಲಿ ಏನು Statement ಮಾಡಿದ್ದಾರೆಂದರೆ, "The then PWD Minister Mr. Udasi rettuting the allegation that the project is only means to carry out the business of real estate, made a categorical statement on the floor of the HOuse that entire land is not be sold. Road requirement is 6,990 acres. Township requirement is 13,194 acres. For common facilities, infrastructure within township limits requires 3,700 acres, which cannot be sold". That is your statement in the House. "It

cannot be sold". Thus, the Minister in charge of the Public works Department, after signing of the framework agreement, categorically represented that no, an inch of land was required to be developed, 5,900 acres can be sold. It is only on this basis that the confidence of the legislature was taken by the Government of that day. Am I right? This is your own statement. ಆದರೆ, ಆಗಿದ್ದೇನು? Subsequently, whle thing has been reverted. Subsequently, I am telling. Subsequently, ಏನಾಯಿತು? ಇಡೀ ಎಲ್ಲಾ ಒಪ್ಪಂದಗಳು judgment ಹೋಯಿತು. ಹೋಗಿ, ಇವತ್ತು ನೀವೇನು ಈ ಜಮೀನು ಕೊಡಬೇಕೆಂದು ಹೇಳಿದ್ದೀರಿ, ಅದಕ್ಕಿಂತ ಹೆಚ್ಚು ಜಮೀನು ಬೇಕೆಂದು ಹೇಳಿದ್ದಾರೆ. ಇದನ್ನೇ ಅವರು ಸೋಮಶೇಖರರೆಡ್ಡಿ case ನಲ್ಲಿ High Court ನಲ್ಲಿ challenge ಮಾಡಿದ್ದು. ಆವಾಗ ಈ ಪ್ರಶ್ನೆ ಬಂಧಂಥ ಸಂದರ್ಭದಲ್ಲಿ High Court Judgement ಏನು ಹೇಳುತ್ತದೆಂದರೆ, "The Hon'ble High Court of Karnataka dismissed the PIL filed by Mr.Somashekar Reddy vide judgement dated 21.9.1998 choosing not to interfere in the policydecision of the Government to sign the framework agreement. At the same time, holding that legislature of the state, ಇದು ಭಾರೀ important. Holding that the legislature of the state has not been bound by the agreement and the legislature has powers to nullify the agreement entered into by the executive. ಕಾರ್ಯಾಂಗ ಏನು ಒಪ್ಪಂದಕ್ಕೆ ಸಹಿ ಹಾಕಿದೆ, ಅದಕ್ಕೆ ಶಾಸಕಾಂಗ ಬದ್ಧವಾಗಿರಬೇಕಾದಂಥ ಅವಶ್ಯಕತೆ ಇಲ್ಲ. It can be nullified. It is not bound by the executive order. It is a clear judgement of the High Court. This has been upheld by the Supreme Court. Now, it is up to the present Government, whether it is intended to make legislature to interfere or not. That is up to you now. But this is the clear case. This is the whole thing. Then what is that? ಮತ್ತೇನಾಯಿತು? In violation of the Hon'ble High Court judgement's order, the Karnataka Industrial Area Development Board and NICE entered to and agreement to acquire land for the project where it stated the company has applied to the Board to make available about 21,000 acres of land more fully described in the Schedule. Annexure-II. The schedule surprisingly indicates that land to be acquired is 23,846 acres'. ಉದಾಸಿಯವರೆ, ಅರ್ಥವಾಯಿತೆ? ಹೇಗಿದೆ fraud? 21,000 acres

available ಇದೆ ಎಂದು ಹೇಳಿ finally notify ಮಾಡಿ, the schedule surprisingly indicates that the land to be acquired as 23,846 acres. Acquire ಮಾಡಿದೆ. Notify ಮಾಡಿಬಿಟ್ಟಿದೆ. ಅವನು ಈ land ಅನ್ನು ನನಗೆ ಕೊಡಿ ಎಂದು ಕೇಳುತ್ತಿರುವುದು. ಈ land ಅನ್ನು ಕೊಡದೇ ಇದ್ದರೆ ನೀವು Supreme Court ತೀರ್ಮಾನವನ್ನು violate ಮಾಡಿದಹಾಗಾಗುತ್ತದೆ. ಹೈಕೋರ್ಟ್ ತೀರ್ಮಾನವನ್ನು violate ಮಾಡಿದ ಹಾಗಾಗುತ್ತದೆ. ಅದಕ್ಕೋಸ್ಕರ ನಿಮ್ಮ ಮೇಲೆ ಸುಪ್ರೀಂ ಕೋರ್ಟ್‌ನಲ್ಲಿ contempt case ಹಾಕುತ್ತೇನೆ ಎಂದು ಅವನು ಸರ್ಕಾರವನ್ನು ಬೆದರಿಸುತ್ತಿದ್ದಾನೆ. ಇದಕ್ಕಿಂತ ದೊಡ್ಡ fraud ಈ ಜಗತ್ತಿನಲ್ಲಿಲ್ಲ. ಇದನ್ನು ನಾನು ಹೇಳಲಿಲ್ಲ. ಮತ್ತೆ ಬರುತ್ತೇನೆ. ಜಗತ್ತಿನಲ್ಲಿ ದೊಡ್ಡ fraud ಎಂದು ಹೇಳಿದಂಥವರು ಯಾರು ಎಂದು ಮತ್ತೆ ನಾನು ಹೇಳುತ್ತೇನೆ. The KIADB agreement ಏನು ಹೇಳುತ್ತದೆ? ನೀವು ಯಾವ ರೀತಿ agreement ಮಾಡಿಕೊಂಡಿರಿ? Date of the agreement ಹೇಳುತ್ತೇನೆ. Karnataka Industrial Area Development Board, a statutory body established under the provisions of the Karnataka Industrial Area Development Act 1966 having its Head Office so and so... Executed on this day, 14th day of October 1998 at Bangalore. This is the date. This is the date of agreement between KIADB and the NICE Company. 14th day of October 1998. ಯಾವ ಸರ್ಕಾರವೆಂದು ಹೇಳುತ್ತಿಲ್ಲ. ನಾನು ಯಾವ ಸರ್ಕಾರದ ವಿಚಾರವನ್ನೂ ಇಲ್ಲಿ ಪ್ರಸ್ತಾಪ ಮಾಡಿಲ್ಲ. ಎಲ್ಲಾ ಸರ್ಕಾರಗಳೂ ಏನೇನು ಮಾಡಿದೆ ಎಂದು ಅಷ್ಟೇ ನಾನು ಹೇಳುತ್ತಿರುವುದು. ಆದರೆ, ನಾನು ಇದೆಲ್ಲವನ್ನೂ ಓದುವುದಿಲ್ಲ. Agreement ಪೂರ್ತಿ ನಾನು ಓದುವುದಿಲ್ಲ. Important points ಇದೆ. "Whereas the company has applied to the Board to make available about 21,000 acres of land more fully described in the schedule, Annexure here to , hereinafter referred to as the said land for the purpose of Infrastructure Corridor project. After carrying out acquisition under the Karnataka Industrial Area Development Act 1966: Whereas the Board after being satisfied," ಇದು important. "Whereas the Board after being satisfied that acquisition of thesaid land is necessary for the purpose referred to above as consented to cause the provisions of the said Act. Being put in force, in order to acquire and make available the said land to the company subject to the terms and conditions hereinafter appear". This is the most important point of that part of the agreement. ಅದರಲ್ಲಿ ಇನ್ನೊಂದು ಹೇಳುತ್ತಾರೆ. Point No.3 ಯಲ್ಲಿ ಏನು ಹೇಳುತ್ತಾರೆ? "The cost of the said land ಯಾವುದೆಂದರೆ, acquired ಆಗತಕ್ಕಂಥ ಭೂಮಿ, ನೀವೇನು agreement ಮಾಡಿಕೊಳ್ಳುತ್ತಿದ್ದೀರಿ, ಆ ಭೂಮಿಯ 'The

cost of the said land payable by the company shall be the actual cost of the acquisition that means, the cost of land paid by the Government to the client's owners.' ಇದರಲ್ಲಿ ಇಷ್ಟು ಹಣ ಕೊಡಬೇಕೆಂದು agreement ಇರುವುದು. ಇದಾದಮೇಲೆ, frame work agreement ನಲ್ಲೇನು ಹೇಳಿದೆ? Market rate ಕೊಟ್ಟು ನೀನು ಸರ್ಕಾರದ ಜಮೀನನ್ನು ಕೊಂಡುಕೊಳ್ಳಬೇಕೆಂದು ಹೇಳಿದೆ. KIADB agreement ಏನು ಹೇಳುತ್ತದೆ? More or less same ಅದನ್ನೇ ಹೇಳುತ್ತದೆ. But what is the administrative order passed by the Government order ನಲ್ಲಿ market rate ಕೊಟ್ಟು ಭೂಮಿ ತೆಗೆದುಕೊಳ್ಳಬೇಕು ಎಂದು frame work agreement plus ಇದೆಲ್ಲಾ ಹೇಳತಕ್ಕಂಥ ಸಂದರ್ಭದಲ್ಲಿಯೇ, the then government dated 7th October 1999. Proceedings of the Government of Karnataka, Transfer of Government land on lease for the Bangalore Infrastructure Corridor Road. The framework agreement entered by the Government of Karnataka with NICE dated 3rd April 1997. The minutes of the Third Empowered Committee meeting held on 10th February 1999. The company represented to the Government to grant on a lease about 5,000 acres of government land that will be utilized for the purpose of construction of the Express Highway, peripheral road, and link road together, with interchanges and area that will be utilized for the purpose of providing toll colection equipment etc. as well as the land that shall be used to provide common utilities and amenities in the township at the cost. ಈ ಭೂಮಿಯನ್ನು ಸನ್ಮಾನ್ಯ ಅಧ್ಯಕ್ಷರೆ, after careful examination of the proposal, the Government is pleased to accord approval to the lease Government land in favour of Karnataka Industrial Area Development Board for onward transfer in favour of M/s Nandi. KIADB ಗೆ ಕೊಟ್ಟ ಉದ್ದೇಶ ಏನು ಅಂದರೆ, onward transfer to the Nandi Company. Onward transfer in favour of M/s Nandi Infrastructure Corridor Express Limited, that will be utilized for the construction of express highway, peripheral road, and link road together with the interchanges and other facilities as well as the land that will be utilized to provide common facilities and amenities in the townships as per the Annexure endorsed on the following condition. ಏನು ಕಂಡೀಷನ್?

1. The period of lease shall not exceed 40 years. ನೀವು ಮೂವತ್ತು ವರ್ಷಕ್ಕೆ ಟೋಲ್ ಕಲೆಕ್ಷನ್ ಮಾಡಿ ಅಂದಿರಿ, ಇಲ್ಲಿ ಏನ ಮಾಡುತ್ತಾರೆ? ನಲವತ್ತು ವರ್ಷಗಳಿಗೆ ಕಡಿಮೆ ಆಗದ ಹಾಗೆ ಲೀಸ್ ಕೊಡಬೇಕು ಎಂದು ತೀರ್ಮಾನ ಮಾಡುತ್ತೀರಿ. ಅದಕ್ಕಿಂತ most important is, the lease rental shall be Rs. 10/- per acre per anum. ನೋಡಿ ಎಂಥಾ fraud ಇದು! ಸರ್ಕಾರಿ ಲ್ಯಾಂಡ್ ಅನ್ನು ನೈಸ್ ಕಂಪನಿಯವರಿಗೆ ಹತ್ತು ರೂಪಾಯಿಗೆ ಒಂದು ವರ್ಷದ ಪ್ರಕಾರ ಲೀಸ್‌ಗೆ ಕೊಟ್ಟಿರತಕ್ಕಂಥಾದ್ದು. Framework agreement ನಲ್ಲಿ ಹೇಳಿದ್ದು? You have to purchase ಅಂತ ಹೈಕೋರ್ಟ್ ತೀರ್ಮಾನ ಏನು ಹೇಳಿದೆ? Framework agreement ನಲ್ಲಿ interfere ಆಗಬೇಡಿ. ಅದನ್ನು ಎತ್ತಿ ಹಿಡಿಯಬೇಕು ಎಂದು ಹೈಕೋರ್ಟ್ judgment ನಲ್ಲಿ ಹೇಳಿದೆ. ಆದರೆ ಈ ಆರ್ಡರ್‌ನಲ್ಲಿ ನೀವೇನು ಮಾಡಿದಿರಿ? ಒಂದು ಎಕರೆಗೆ ಹತ್ತು ರೂಪಾಯಿ ಪ್ರಕಾರ ನಲವತ್ತು ವರ್ಷಕ್ಕೆ ಲೀಸ್‌ಗೆ ಕೊಟ್ಟಿರಿ. ಮತ್ತೆ ಇನ್ನೊಂದು. The land shall revert to the government on completion of ten years of construction period and thereafter 30 years concession period. ಇದು G..O ನಲ್ಲಿರತಕ್ಕಂಥ ಇನ್ನೊಂದು aspect. The construction period and together 30 years concession period. ಈ ರೀತಿಯಲ್ಲಿ ಒಂದು Government Order ಮಾಡಿ without bringing to the notice of the legislature, without approval of the Cabinet, ಒಂದು G.O ಮಾಡಿ ಐದು ಸಾವಿರ ಎಕರೆ ಸರ್ಕಾರಿ ಭೂಮಿಯನ್ನು ಒಂದು ಎಕರೆಗೆ ಹತ್ತು ರೂಪಾಯಿಗಳ ಪ್ರಕಾರ ಲೀಸ್‌ಗೆ ಕೊಟ್ಟಿದ್ದೀರಿ. Framework agreement ಮತ್ತು ಹೈಕೋರ್ಟ್ ಏನು ಹೇಳುತ್ತದೆ It cannot be sold. ನಿಜವೇ ಉದಾಸಿಯವರೇ, according to framework agreement? Or it cannot be leased or it cannot be mortgaged. But ನೈಸ್ ಕಂಪನಿ ಏನು ಮಾಡಿತು? ಈ ಭೂಮಿಯನ್ನು ICICI Bank ಗೆ mortgage ಮಾಡಿ ನೂರೈವತ್ತು ಕೋಟಿ ರೂಪಾಯಿ ಸಾಲ ಪಡೆದಿದೆ. ಇದಕ್ಕೆ ಸರ್ಕಾರ counter guarantee ಕೊಟ್ಟಿದೆ. ICICI Bank ನಲ್ಲಿ ತೆಗೆದುಕೊಂಡಿರತಕ್ಕಂಥ ಸಾಲಕ್ಕೆ ಸರ್ಕಾರ counter guarantee ಕೊಟ್ಟಿದೆ. ಇದಕ್ಕಿಂತ fraud ಏನು ಬೇಕು? This is also against the High Court judgment. This is also against the framework agreement. This is also against the Supreme Court judgment. ಹಾಗಾಗಿ ಕೋರ್ಟ್ ಆಜ್ಞೆಗಳನ್ನೆಲ್ಲಾ ಉಲ್ಲಂಘನೆ ಮಾಡಿ ಇದನ್ನೆಲ್ಲಾ ನಂದಿಯವರಿಗೆ ಕೊಟ್ಟು ಕೋರ್ಟ್ ಆಜ್ಞೆಯನ್ನು ನೀವು ಉಲ್ಲಂಘನೆ ಮಾಡಿದರೆ ನಿಮ್ಮ ಮೇಲೆ defamation case ಹಾಕುತ್ತೇನೆಂದು ಕೂತಿದ್ದಾನೆ. ಹೇಗಿದೆ ನೋಡಿ. ಇದಕ್ಕೆ ಪೂರಕವಾಗಿ, ಆ Nandi Infrastructure Corridor ನವರು ಸೋಮಶೇಖರರೆಡ್ಡಿ ಕೇಸ್‌ನಲ್ಲಿ ಒಂದು ಅಫಿಡವಿಟ್ ಫೈಲ್ ಮಾಡಿದ್ದಾರೆ. ಅಫಿಡವಿಟ್ ಫೈಲ್ ಮಾಡಿರತಕ್ಕಂಥಾದ್ದು, it

is none other than the NICE company. ಆ ಅಫಿಡವಿಟ್‌ನಲ್ಲಿ ಏನೆಲ್ಲಾ ಹೇಳುತ್ತಾರೆಂದರೆ, ಅವನೇ, ಆ ಕಂಪನಿಯವನೇ ಒಪ್ಪಿಕೊಂಡಿದ್ದಾನೆ. ಏಕೆಂದರೆ, This is an affidavit filed before the High Court of Karnataka in Sri Somashekarareddy v/s Government of Karnataka and Nandi Infrastrucrture case ನಲ್ಲಿ, Respondant No.2, Statement of objections of the respondent No.2 Respondant No.2 is Nandi. ಏನು ಹೇಳುತ್ತಾನೆ, Important ಮಾತ್ರ ಹೇಳುತ್ತೇನೆ.

1. 'The entire cost of the project including the cost of acquisition of land is to be met by this respondent'. This is an affidavit filed before the High Court. 'The entire cost of the project including the cost of acquisition of land to be met by the respondent, the Express way is to be operated'. ಅಫಿಡವಿಟ್‌ನಲ್ಲಿ ಅವನು ಹೇಳತಕ್ಕಂಥ ಅಂಶ. ಎರಡನೆಯದಾಗಿ ಏನು ಹೇಳುತ್ತಾನೆ? 45% availabe to the respondent for a commercial exploitation, 25% earmarked for the open space. 25% earmarked for the common facilities to be transferred to this respondent No.1 Respondent No.1 ಗೆ transfer ಮಾಡಬೇಕು. ಮತ್ತೆ ನಂದಿ ಕಂಪನಿಯವನು ಅವನೇ ಹಾಕಿರತಕ್ಕಂಥ ಅಫಿಡವಿಟ್‌ನಲ್ಲಿ ಮತ್ತೆ ಇನ್ನೊಂದು ಏನು ಹೇಳುತ್ತಾನೆಂದರೆ, The respondent had originally submitted a proposal for the construction of seven townships; However the state government has permitted this respondent to put up only five townships. The entire infrastructure of the townships including setting up of the internal roads, water distribution system, Sewerage Board, solid waste, disposal facilities, park, open space, hospitals, government offices, power transmission lines and telephone lines, have to be put up by this respondent at his own cost. ಇದು ಅವನು ಫೈಲ್ ಮಾಡಿರತಕ್ಕಂಥ ಅಫಿಡವಿಟ್. ಅವನು ಅಫಿಡವಿಟ್‌ನಲ್ಲಿ ಏನು ಹೇಳುತ್ತಾನೆಂದರೆ, Annexure-A; R4. ಅಫಿಡವಿಟ್ ಹಾಕಿರತಕ್ಕಂಥಾದ್ದು, land ಬಗ್ಗೆ. ಒಂದು ಖರಾಬ್ ಲ್ಯಾಂಡ್ 1,740 ಎಕರೆ. Township ಗೆ 5,818 acres. Total 7,558 acres. Percentage-37%. ಮತ್ತೆ dry land-2,936 acres, 6,881 acres. Total, 10,817 acres. 54%. ಮುಗಿತಾ ನಿಮ್ಮ 45%? Wet land-1,183 acres. Townships ಗೆ Total 1,668 acres. 8%. ಇದು ಅವನು ಅಫಿಡವಿಟ್‌ನಲ್ಲಿ ಹಾಕಿರತಕ್ಕಂಥಾದ್ದು, ಅವನೇ, ನೈಸ್ ಕಂಪನಿಯವನೇ ಅಫಿಡವಿಟ್‌ನಲ್ಲಿ ಒಪ್ಪಿಕೊಂಡಿರತಕ್ಕಂಥಾದ್ದು. ಮತ್ತೆ ಇನ್ನೊಂದು important ವಿಚಾರ ಅವನು ಅಫಿಡವಿಟ್‌ನಲ್ಲಿ ಹಾಕಿರತಕ್ಕಂಥಾದ್ದು ಅಂದರೆ, 'It is denied

that impugned agreement has been entered into nearly to develop the commercial complexes as alleged by the petitioner under clause 3(3)(i). While it is open to the state government, to extend the period, the state government is not obliged to do so. ಅಫಿಡವಿಟ್‌ನ ಪ್ಯಾರಾ 6 ರಲ್ಲಿ ಏನು ಹೇಳುತ್ತಾನೆಂದರೆ, 'Respondent No.1 is only facilitating the acquisition of land for which the respondent has to pay at the existing market rate'. ಅವನೇ ಅಫಿಡವಿಟ್‌ನಲ್ಲಿ ಹಾಕುತ್ತಾನೆ. ಅವನು ಹಾಕಿರತಕ್ಕಂಥ ಅಫಿಡವಿಟ್‌ನಲ್ಲಿ ಅವನೇ ಹೇಳುತ್ತಾನೆ, Respondent No.1 need not bear any amount. It is only respondent No.2 has to bear the whole amount ಅಂತ. Under Clause 3(3)(iii) of the impugned agreement, respondent No.1 has only agreed to make its best efforts to prevent such declaration. ಇದು ಅಫಿಡವಿಟ್‌ನಲ್ಲಿ ಹಾಕಿರತಕ್ಕಂಥಾದ್ದು. ಮತ್ತೆ ಅದೇ ಅಫಿಡವಿಟ್‌ನಲ್ಲಿ as to clause 3(2)(i), it is submitted that the provisions of the impugned agreement do not bind the legislature. ನೈಸ್ ಕಂಪನಿಯವನೇ ಒಪ್ಪಿದ್ದಾನೆ. It is always open to the legislature to make such a law in the interest of the people of the state as it deems fit.

It is also denied that the Legislature and respondent No.1 are bound and forced to sub serve the interest of the respondent. It is submitted that it is not opened to either the State Government or to the respondent to subvert the provisions of Article 196 to 201 of the Constitution ಎಂದು ಅವನ affidavit ನಲ್ಲಿ ಹಾಕಿದ್ದಾನೆ. ಏನಾಯ್ತು Finally? ಅವನೇ affidavit ನಲ್ಲಿ ಹಾಕಿ, ಇದೆಲ್ಲವನ್ನೂ ಅವನೇ violate ಮಾಡಿದ್ದಾನೆ. ಇದನ್ನೆಲ್ಲಾ NICE company ಯವರೇ violate ಮಾಡಿದ್ದಾರೆ. ಕೋರ್ಟ್ ಮುಂದೆ ಹಾಕಿರತಕ್ಕಂಥ ಅಫಿಡವಿಟ್‌ನ್ನು ಅವನೇ ಸಂಪೂರ್ಣವಾಗಿ ಉಲ್ಲಂಘನೆ ಮಾಡಿದ್ದಾನೆ. ಈಗ contempt of court case ಯಾರ ಮೇಲೆ ಹಾಕಬೇಕು? ಮತ್ತೆ ಅವನು ಹೇಳುತ್ತಾನೆ. The provisions of Cluse 6(3) of the impugned agreement empowers the State Government to take appropriate measure, if this respondent files to complete the construction of the express highway as agreed. ಅವನೇ ಹಾಕಿದ್ದಾನೆ. ಇದಕ್ಕಿಂತ ಏನು ಬೇಕು ಸ್ವಾಮಿ ನಿಮಗೆ? ಅವನೇ ಕೋರ್ಟ್ ಮುಂದೆ ಒಪ್ಪಿಕೊಂಡಿದ್ದಾನೆ. ಮತ್ತೆ ಹೇಳುತ್ತಾನೆ. It is also submitted that the project has been undertaken to enable to respondent to develop the townships and the various facilities therein. It is also denied that

only about 3000 acres of land are required for the construction of the 111Km stretch of the highway. It is submitted that the petitioner is partially right to extend that 2775 acres of the land is required for the conventional four lane national highway of the bay as per the calculation made by him. The express highway proposed to be constructed by this respondent is completely grade separated and has 16 inter changes and 7 services maintenance area. It will consume considerble acreage of land according to the inter exchange produced herewith as marked as Annexure-6. The correct position as to why the respondent requires 6999 acres of land for the total road and 13,194 acres of the land for the township is detailed out in Annexure-7. In any event, the land being provided for the construction of express highway cannot to used for any other purpose. It is denied that the real object of the project is to acquire land on prevailing market rate and to hand over the same to this respondent for the purpose of making profit. For that, the acquisitionof land for this purpose is illegal with regard to the allegation of the petitioner that the provisions of the Land Acquisition Act do not permit such acquisition, it is submitted that the allegation is pre-matured and without merit. ಆದರೆ ಮಾಡಿದ್ದೇನು? Affidavit ಅಲ್ಲಿ ಹಾಕಿ ಅವನು ಇಲ್ಲಿ ಮಾಡಿದ್ದೇನು? ಸರ್ಕಾರ ಮಾಡಿದ್ದೇನು ಇಲ್ಲಿ? ಅದಕ್ಕೆ ತದ್ವಿರುದ್ಧವಾಗಿ ಮಾಡಿರತಕ್ಕಂಥದ್ದು. In Para 12(1), it is submitted that there is no special conession being offered to this respondent. ಆದರೆ special concession ಏನೇನು ಕೊಟ್ಟಿದ್ದೀರಿ ನೀವು? Registration stamp exemption ಕೊಟ್ಟಿದ್ದೀರಿ. ಇನ್ನೊಂದು 85 ಕೋಟಿ ರೂಪಾಯಿ exemtion ಕೊಟ್ಟಿದ್ದೀರಿ. ಅವನೇ ಅಫಿಡವಿಟ್‌ನಲ್ಲಿ ಈ ರೀತಿ ಏನು construction ಬೇಡ ಅಂತ ಹೇಳಿ, construction ಗಳನ್ನೆಲ್ಲಾ ಅವನಿಗೆ ನೀವು ಕೊಟ್ಟಿದ್ದೀರಿ. ಈ ಹೈಕೋರ್ಟ್ ತೀರ್ಪನ್ನು ಯಾರು ಉಲ್ಲಂಘನೆ ಮಾಡಿದ ಹಾಗಾಯಿತು? ಸನ್ಮಾನ್ಯ ಅಧ್ಯಕ್ಷರೇ ಇಷ್ಟೆಲ್ಲಾ ಆದ ಮೇಲೆ ಮತ್ತೆ ಇವತ್ತು ನಡೆದಿರಕ್ಕಂಥದ್ದು ಏನು ಅಂದರೆ respondent No.1 ಹೈಕೋರ್ಟ್‌ನಲ್ಲಿ ಹಾಕಿರತಕ್ಕಂಥದ್ದು. ಇದನ್ನೆಲ್ಲಾ ನಾನು ಓದುವುದಿಲ್ಲ. The conversion of agriculture land should also be minimized. ನೀವು ಹಾಕಿರತಕ್ಕಂಥದ್ದು ಹೈಕೋರ್ಟ್‌ನಲ್ಲಿ. ಅಲ್ಲಿ ಅಗ್ರಿಕಲ್ಚರ್ ಲ್ಯಾಂಡ್ ಎಷ್ಟು ಕೊಟ್ಟಿದ್ದೀರಿ. ಎಷ್ಟು ಸಾವಿರ ಕೊಟ್ಟಿದ್ದೀರಿ ಎಂಬುದನ್ನೇ ಲೆಕ್ಕ ಹಾಕಿ. ಅದರ ಜೊತೆಗೆ ಬಡವರು ಕಟ್ಟಿಕೊಂಡಿರತಕ್ಕಂಥ ಮನೆ ಜಾಗ ಗುಡಿಸಲು

ಹಾಕಿಕೊಂಡಿದ್ದಂಥ ಜಾಗ ವಿನೋಬಾಭಾವೆಯವರು 1952 ರಲ್ಲಿ ಭೂದಾನ ಚಳುವಳಿಗೆ ಎಂದು ಹೇಳಿ ಇಲ್ಲಿ ಪಾದಯಾತ್ರೆ ಮಾಡತಕ್ಕಂಥ ಸಂದರ್ಭದಲ್ಲಿ ಸುಮಾರು 150 ಎಕರೆ ಸರ್ಕಾರಿ ಬಂಜರು ಭೂಮಿಯನ್ನೂ ಕೂಡ ದಲಿತರಿಗೆ ಜೀವನ ಮಾಡಲಿಕ್ಕೆ ಕೊಟ್ಟಿರತಕ್ಕಂಥ ಭೂಮಿಯನ್ನು ನೈಸ್ ಕಂಪನಿಯವರು ಅಕ್ವಾಯರ್ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ಡಿಟೇಲ್ಸ್ ಬೇಕಾದರೆ ಕೊಡುತ್ತೇನೆ, ಅದು ನನ್ನ ಹತ್ತಿರ ಇದೆ. ಆ ಭೂಮಿ ಎಲ್ಲಿ ಇರತಕ್ಕಂಥದ್ದು ನಿಮ್ಮ ಎಕ್ಸ್‌ಪ್ರೆಸ್ ಕಾರಿಡಾರ್ ರೋಡ್‌ನಿಂದ ಆಲ್‌ಮೋಸ್ಟ್ 500 ಮೀಟರ್ ದೂರದಲ್ಲಿದೆ. He is nothing to do with that land.

- ಆ ಲ್ಯಾಂಡ್‌ನ್ನೂ ಕೂಡ ಅಕ್ವಾಯರ್ ಮಾಡಿಕೊಂಡು ಬಿಟ್ಟಿದ್ದಾರೆ. ಅಂದರೆ ಈ ದೇಶದಲ್ಲಿ ವಿನೋಬಾಭಾವೆಯವರೂ ಇಲ್ಲ, ಮಹಾತ್ಮಗಾಂಧಿಯವರೂ ಇಲ್ಲ. Without compensation, that is Rs.10/- as per lease agreement. That is a Government land given to Daliths.

ಶ್ರೀ ಬಸವರಾಜ ರಾಯರೆಡ್ಡಿ : ಹಾಗಾದರೆ ಅದು ಸರ್ಕಾರಿ ಭೂಮಿ ಹೇಗಾಗುತ್ತದೆ? ಪಟ್ಟಾ ಎಲ್ಲಾ ಆಗಿದೆಯಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಗಿಲ್ಲ, ಅದೇ ಇಲ್ಲಿ ಇರುವ ಪ್ರಶ್ನೆ. ಖಾತೆ ಆಗಿಲ್ಲ. ಅವರ ಹೆಸರಿಗೆ ಆಗಿಲ್ಲ. ಅದು ಭೂದಾನದ ಜಮೀನು.

ಶ್ರೀ ಬಸವರಾಜ ರಾಯರೆಡ್ಡಿ : ಹಾಗಾದರೆ ಅದು ಲೀಗಲ್ಲಾಗಿ ಕಷ್ಟವಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ನನಗೆ ಗೊತ್ತಿಲ್ಲ. ನೀವೇ ಹೇಳಬೇಕು ಲಾಯರ್. ಲೀಗಲಿ ಕಷ್ಟ ಅಥವಾ ಸುಲಭಾನೋ ನೀವು ಹೇಳಬೇಕು. ನಾನು ಹೇಳುತ್ತಿರುವುದು ಇಷ್ಟೆ. ಭೂದಾನದಲ್ಲಿ ಕೊಟ್ಟಿರತಕ್ಕಂಥ ಜಮೀನು ವಿನೋಬಾಭಾವೆಯವರು ಪಾದಯಾತ್ರೆ ಮಾಡುವ ಸಮಯದಲ್ಲಿ ಜಮೀನನ್ನು ಸ್ಕೂಲ್‌ಗಳಿಗೆ ದಾನವಾಗಿ ಕೊಟ್ಟಿದ್ದಾರೆ. ಇವತ್ತಿಗೂ ಕೂಡ ಯಾರು ದಾನ ಮಾಡಿದ್ದಾರೆ ಅವರ ಹೆಸರಿನಲ್ಲಿಯೇ ಇದೆ. ಸುಮಾರು ಲ್ಯಾಂಡ್ ಟ್ರಾನ್ಸ್‌ಫರ್ ಆಗಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಸರ್ಕಾರಿ ಭೂಮಿಯನ್ನು ವಿನೋಬಾಭಾವೆಯವರು ಹೇಗೆ ದಾನವಾಗಿ ಕೊಡುತ್ತಾರೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಹೇಳುತ್ತೇನೆ, ಕುಳಿತುಕೊಳ್ಳಿ. 1952ರಲ್ಲಿ ಅವರು ಪಾದಯಾತ್ರೆಗೆ ಬಂದಂಥ ಸಂದರ್ಭದಲ್ಲಿ ಅಲ್ಲಿ ಖಾಲಿ ಇದ್ದಂಥ ಭೂಮಿಯನ್ನು ಯಾರು ಮನೆ ಇಲ್ಲದಿರತಕ್ಕಂಥವರು ಅಲ್ಲಿಗೆ ಬಂದು ಕೇಳಿದಾಗ ಕೊಟ್ಟಿದ್ದಾರೆ. ಅದರ ಬಗ್ಗೆ ಬೇಕಾದರೆ ಡಿಟೇಲ್ಸ್ ನನ್ನಲ್ಲಿ ಇದೆ ಕೊಡುತ್ತೇನೆ, ಟೈಮ್ ಆಗುತ್ತದೆಂದು ನಾನು ಓದಲಿಲ್ಲ. ಸರ್ಕಾರದವರಿಗೆ ಹೇಳಿ ವಿನೋಬಾಭಾವೆಯವರು ಜಮೀನನ್ನು ದಾನವಾಗಿ ಕೊಡಿಸುತ್ತಾರೆ. ವಿನೋಬಾಭಾವೆಯವರು ಸ್ವಂತದ್ದು ಕೊಟ್ಟಿದ್ದು ಅಲ್ಲ. ಅದು ಚಳುವಳಿಯ ಒಂದು ಭಾಗವಾಗಿ ಆಗಿದ್ದು. ಅದನ್ನೂ ಕೂಡ ಅಕ್ವಾಯರ್ ಮಾಡಿ ಬಿಟ್ಟಿದ್ದಾರೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, 1950 ರಲ್ಲಿ ತೆಲಂಗಾಣ ಮೂವ್‌ಮೆಂಟ್ ಆರು ತಿಂಗಳವರೆಗೆ ನಡೆಯಿತು. That was between

landless and landlords. ಒಂದು ವಾರ್ ತರಹ ಆಯಿತು. ಅದು ಆದಾಗ, Raviran Reddy first elected from that nalagunda ರೆವಿನಾರೆಡ್ಡಿ ಅವರಿಗೆ ಹೈಯಸ್ಟ್ 1952 ರಲ್ಲಿ ಓಟ ಸಿಕ್ಕಿತ್ತು. ಅಲ್ಲಿ ವಿನೋಬಾಭಾವೆಯವರು ಈ ತರಹ ಒಂದು ಕ್ರಾಂತಿಯಾಗುತ್ತಿದೆ. ಜಮೀನ್ದಾರ್ ಹಾಗೂ ಜಮೀನು ಇಲ್ಲದವರ ಮಧ್ಯೆದಲ್ಲಿ ಅನಾಹುತವಾಗುತ್ತದೆಂದು ಹೇಳಿ ಓಚಂಪಳ್ಳಿ ಎನ್ನುವ ಊರಿನಲ್ಲಿ ವಿನೋಬಾಭಾವೆಯವರು ಹೋಗಿ ಅಲ್ಲಿಂದ ಭೂದಾನ ಚಳುವಳಿ ಪ್ರಾರಂಭವಾಯಿತು. ಅಲ್ಲಿ ನರಸಿಂಹರಾವ್ ಎನ್ನುವವರು ಇದ್ದರು. ಮತ್ತು ಜೆ.ಎಂ. ಥಾಮಸ್ ಇವರೆಲ್ಲರೂ ಕೂಡ ಇದ್ದರು. ಭೂದಾನ ಮೂವ್‌ಮೆಂಟ್ ಬಹಳ ಜೋರಾಗಿಯೇ ಪ್ರಾರಂಭವಾಯಿತು. ಅಲ್ಲಿ ರಾಜಬಹಾದ್ದೂರ್ ಗೌಡ್ ಇದ್ದರು ಮತ್ತು ಮೈನುದ್ದೀನ್‌ರವರು ಇದ್ದರು. They were the stalwarts at that time. ಹಾಗೆ ಆಗತಕ್ಕಂಥ ಕಾಲದಲ್ಲಿ 1950 ರಲ್ಲಿ ಈ ತರಹದ ಒಂದು ತೆಲಂಗಾಣ ಮೂವ್‌ಮೆಂಟ್ ಆದ ಮೇಲೆ ಅಲ್ಲಿ ಯಾರಿಗೆ ಜಮೀನು ಇಲ್ಲ ಅವರಿಗೆ ಜಮೀನು ಕೊಡಬೇಕೆಂದು ರೆಬಿನ್‌ರೆಡ್ಡಿ ತಮ್ಮ ಪಾಲಿಗೆ ಇದ್ದಂಥ ಎಲ್ಲಾ ಜಮೀನನ್ನು ಲ್ಯಾಂಡ್‌ಲೆಸ್‌ದವರಿಗೆ ಕೊಟ್ಟಿದ್ದಾರೆ. That was the history. ಅದನ್ನು narrate ಮಾಡುತ್ತಿದ್ದಾರೆ. ನೈಸ್‌ಗೆ ಏನೂ ಉಪಯೋಗವಾಗುವುದಿಲ್ಲ. ಇವತ್ತು ಎಲ್ಲಾ ಕಡೆ ಭೂಮಿಯನ್ನು ವಿತರಣೆ ಮಾಡತಕ್ಕಂಥ ರೀತಿಯಲ್ಲಿ ಬೇರೆಲ್ಲದ್ದರಲ್ಲಿ ಕೂಡ ಶ್ರೀರಾಮರೆಡ್ಡಿಯವರು ಮಾತನಾಡಬೇಕು. That was the great movement. ಆ ತರಹದ್ದು ಒಂದು ಆಗಿದೆ. ನಮಗೆ ಹೈದ್ರಾಬಾದ್–ಕರ್ನಾಟಕ ಸ್ವಲ್ಪ ಸಮೀಪದಲ್ಲಿದೆ ಎಂದು ನಮಗೆ ಹೆಚ್ಚಿನ ಅಟ್ಯಾಚ್‌ಮೆಂಟ್ ಇದೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅದಕ್ಕೆ ಪೂರಕವಾಗಿ 1952 ರಲ್ಲಿ ಪ್ರಥಮಬಾರಿಗೆ ಚುನಾವಣೆ ಮೂಲಕ ನಡೆದಂಥ ಮತದಾನದಲ್ಲಿ ಅವತ್ತಿನ ಅವಿಭಾಜ್ಯ ಮದ್ರಾಸಿನ ಪ್ರಾಂತ್ಯದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಅನೇಕ ಜನ ಸದಸ್ಯರು ಗೆದ್ದು ಬಂದರು. ಬಹಳ ಅಂತಕಕಾರಿಯಾದಂತಹ ಒಂದು ವಾತಾವರಣ ಆ ಸಂದರ್ಭದಲ್ಲಿ ಸೃಷ್ಟಿಯಾಗಿದ್ದರಿಂದ ಪಂಡಿತ ಜವಹಾರಲಾಲ್ ನೆಹರುರವರು ಅಧೀರರಾಗಿ ಈ ಮದ್ರಾಸ್ ಪ್ರಾಂತ್ಯವನ್ನು ಬಹಳ ಅತ್ಯಂತ ಪ್ರಭಲವಾದಂತಹ ಒಬ್ಬ ಮುಖ್ಯಮಂತ್ರಿಯಾಗಿ ಆಳಬೇಕೆಂದು ಎರಡನೇ ಪ್ರಥಮ ಗವರ್ನರ್ ಆಗಿದ್ದಂತಹ ಸಿ. ರಾಜಗೋಪಾಲಚಾರಿಯವರನ್ನು ಮದ್ರಾಸ್ ಪ್ರಾಂತ್ಯಕ್ಕೆ ಕಳುಹಿಸಿಕೊಟ್ಟರು. ಅವರು ಅಲ್ಲಿ ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಈ ಭೂದಾನದಲ್ಲಿ 1ನೇ 6 ಅಂಶದ ಭಾಗವನ್ನು ಯಾರು ರೈತರು ಇರುತ್ತಾರೆ, ಅ ಒಂದನೆ ಆರು ಭಾಗವನ್ನು ದಾನವಾಗಿ ಕೊಡಬೇಕೆಂಬ ಪರಿಕಲ್ಪನೆಯ ಮೂಲಕವಾಗಿ ಅವರು ಈ ಭೂದಾನದ ಚಳುವಳಿಯನ್ನು ಶುರು ಮಾಡಿದರು. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಯವರಿಗೆ ಗೊತ್ತಿರಬಹುದು, ಕಮ್ಯುನಿಸ್ಟ್ ಪಾರ್ಟಿಯವರು ಮತ್ತು ಬೇರೆ ಬೇರೆ ಕೆಲವು ಪ್ರಗತಿಪರ ಶಕ್ತಿಗಳು ಈ ಭೂದಾನ ಚಳುವಳಿಯ ಮೂಲಕವಾಗಿ ಒಂದು ಜನಪರವಾಗಿರುವಂತಹ ಹೋರಾಟವನ್ನು ಹತ್ತಿಕ್ಕಲಿಕ್ಕೆ ಮಾಡಿರುವಂತಹ

ಒಂದು ಷಡ್ಯಂತರ, ಈ ಭೂದಾನದಿಂದ ಮನಪರಿವರ್ತನೆಯಾಗುವುದಿಲ್ಲ. ಇದರಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಭೂಸುಧಾರಣೆ ಕಾಯಿದೆ ತಂದಾಗ ಮಾತ್ರ ಜಮೀನ್ದಾರರು ಭೂಮಿಯನ್ನು ಉಳುವವನಿಗೆ ಕೊಡುವುದಕ್ಕೆ ಸಾಧ್ಯವೆಂದು ಆ ಸಂದರ್ಭದಲ್ಲಿ ಹೋರಾಟವೂ ಆಯಿತು. ಪ್ರಾಯಶಃ ಅವರು ಹೇಳಿರುವಂತಹದ್ದು ಈಗ ಏನು ಭೂದಾನದ ಭೂಮಿಯನ್ನೂ ಕೂಡ ಅವರಿಗೆ ಕೊಟ್ಟರು ಎಂದು ಹೇಳಿದರು. ಅದು ಯಾವುದೇ ಒಂದು ನಿರ್ದಿಷ್ಟವಾದಂತಹ ಪ್ರಕರಣಕ್ಕೆ ಉಪಯೋಗಿಸಬೇಕಾದಂತಹ ಭೂಮಿಯನ್ನು ಈ ರೀತಿಯಾದಂಥದ್ದಕ್ಕೆ ಕೊಡಮಾಡಿದ್ದಾರೆನ್ನುವಂತಹದ್ದು ಮಾನ್ಯ ಶ್ರೀರಾಮರೆಡ್ಡಿಯವರು ಹೇಳುತ್ತಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ತೆಲಂಗಾಣ ಆರ್ಮ್ಸ್ ಸ್ಟ್ರಗಲ್ ದೊಡ್ಡ ಪೀಪಲ್ಸ್ ಮೂವ್‌ಮೆಂಟ್ ಏನಾಯಿತು ಆಂಧ್ರದಲ್ಲಿ ನಂತರ ಬಂದಂತಹ ಪರಿಣಾಮ divertionary tactics ಎಂದು ಹೇಳಿ ಭೂದಾನ ಮೂವ್‌ಮೆಂಟ್ ಪ್ರಾರಂಭ ಮಾಡಿದರು. ಆಗ 3 ಮೂವ್‌ಮೆಂಟ್‌ಗಳು ಆಯಿತು. ಸರ್ವೋದಯ ಮೂವ್‌ಮೆಂಟ್, ಭೂದಾನ ಮೂವ್‌ಮೆಂಟ್, ಗುಲ್ಜಾರಿಲಾಲ್ ನಂದಾರವರ ಗೋಸಂರಕ್ಷಣಾ ಮೂವ್‌ಮೆಂಟ್ these were all deliberately planted to reduce the force of the communist movement. ತೆಲಂಗಾಣ ಆರ್ಮ್ಸ್ ಸ್ಟ್ರಗಲ್ ಆದ ಮೇಲೂ ಬಂದಾಯಿತು. ಆಂಧ್ರದಲ್ಲಿ, they were almost about to catch the office. ಆಮೇಲೆ ನಮ್ಮ ಭಾಗದಲ್ಲಿ ಏನಾಯಿತು ಎಂದರೆ, ಅವರು ಅಥವಾ ಅವರ ಪ್ರತಿನಿಧಿಗಳು ಗ್ರಾಮ ಪ್ರದೇಶಗಳಲ್ಲಿ ಅವರು ಪಾದಯಾತ್ರೆಯನ್ನು ಮಾಡಿಕೊಂಡು ಬಂದಾಗ ಅಲ್ಲಲ್ಲಿ ಇದ್ದಂತಹ ಸ್ಥಳೀಯ ಭೂಮಾಲೀಕರು ಅವರಿಗೆ ಹೆಚ್ಚುವರಿ ಜಮೀನು ಇದ್ದಾಗ ಸ್ವಯಂಪ್ರೇರಣೆಯಿಂದ ಅಥವಾ ಮನವೊಲಿಕೆಯಾದ ಮೇಲೆ 3 ರಿಂದ 5 ಎಕರೆ 10 ಎಕರೆ ಈ ಶಾಲೆಗೆ ಬರೆದುಕೊಟ್ಟಿದ್ದೇವೆಂದು ಹೇಳಿದರು. ಅವೆಲ್ಲಾ ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಬಂದ ಮೇಲೆ ಖಾತೆಯಲ್ಲಿ ಯಾರಿರಬೇಕೆಂದು ಕನ್‌ಫ್ಯೂಸ್ ಆಗಿ ಅದು ಹಾಗೆಯೇ ಬಿದ್ದಿದೆ. These are all lands that were gifted and to be frank sir, most of these lands fallow lands, uncultivable lands, beyond reach ಇದ್ದವು they were all given as gifts. Because ನಾವು ದಾನವನ್ನು ಕೊಡುವುದರಲ್ಲಿ ಬಹಳ ನಿಸ್ಸೀಮರು ಆದ್ದರಿಂದ ಯವುದು ನಮ್ಮ ಉಪಯೋಗಕ್ಕೆ ಬರುವುದಿಲ್ಲ ಅದನ್ನು ಕೊಡುವುದಕ್ಕೆ ಮುಂದಾಗುತ್ತೇವೆ. ಸಾಹುಕಾರರ ಮನೆಗೆ ಕುಂಬಳಕಾಯಿಯನ್ನು ಇಟ್ಟಿರುತ್ತಾರೆ. ಅವರಿಗೆ ಕುಂಬಳಕಾಯಿ ಸಾರನ್ನು ತಿನ್ನಬೇಕೆಂಬ ಆಸೆ ಇರುತ್ತದೆ. ಅವರು ಹೇಳಿ ಹೋಗಿರುತ್ತಾರೆ. ಸಾಹುಕಾರರು ಅಂಗಡಿಗೆ ಹೋಗಿರುತ್ತಾರೆ. ಮನೆಯಲ್ಲಿ ಕುಂಬಳಕಾಯಿಯನ್ನು ಒಡೆದ ಮೇಲೆ ಅದು ಕೊಳೆತು ಹೋಗಿರುತ್ತದೆ. ಅವನು ಓಡಿಹೋಗಿ ಅಂಗಡಿಯಲ್ಲಿರುವಂತಹ ಸಾಹುಕಾರರಿಗೆ ಹೇಳುತ್ತಾನೆ. ಸಾರ್ ನೀವು ಸಾರ್ ಮಾಡಿ ಎಂದು ಹೇಳಿ ಹೋದಿರಿ ಕುಂಬಳಕಾಯಿ ಒಡೆದುಹೋಗಿದೆ ಎಂದು ಹೇಳುತ್ತಾನೆ. ಹೋದರೆ ಹೋಗಲಿ ಅದನ್ನು ಎಮ್ಮೆಗೆ ಇಡು ಎಂದು ಹೇಳುತ್ತಾರೆ. ಅದನ್ನು ಎಮ್ಮೆಗೆ ಇಟ್ಟಾಗ ಅದು ಮೂಸಿನೋಡುತ್ತದೆ, ಅದು ಕೊಳೆತುಹೋಗಿರುತ್ತದೆ ಅದು ತಿನ್ನುವುದಿಲ್ಲ. ಅವನು ಪುನಃ ವಾಪಸ್ಸು ಬರುತ್ತಾನೆ, ಎಮ್ಮೆಗೆ ಇಟ್ಟರೂ ಹೀಗೆ ಆಯಿತು ಎನ್ನುತ್ತಾನೆ, ಹಾಗಾದರೆ ಬ್ರಾಹ್ಮಣರನ್ನು ಕರೆದು ದಾನ ಕೊಡಪ್ಪಾ ಎಂದು ಹೇಳುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರಿಗೆ ಪೂರಕವಾಗಿ ಹೇಳುವುದೇನೆಂದರೆ, ಇದು ಈಗಿನದಲ್ಲ. ಉದ್ದಾಲಕ ಮತ್ತು ಭಾರದ್ವಜರ ಋಷಿಪುಂಗವರಲ್ಲಿ ಉದ್ದಾಲಕರು ಬ್ರಾಹ್ಮಣರಿಗೆ ಆಕಳುಗಳನ್ನು ದಾನಮಾಡಬೇಕೆಂದು ಹೇಳಿ ಅವರು ಬರಡಾಗಿರತಕ್ಕಂತಹ ತೀರಾ ನಿಶಕ್ತವಾಗಿರುವಂತಹ ಆಕಳುಗಳನ್ನು ಉದ್ದಾಲಕರು ಬ್ರಾಹ್ಮಣರಿಗೆ ದಾನ ಮಾಡುತ್ತಿರುತ್ತಾರೆ. ಅವರ ಮಗ ನಚೀಕೇತ ಏನಪ್ಪಾ ಹೋಗಿ ಹೋಗಿ, ಇಂತಹ ಆಕಳುಗಳನ್ನು ದಾನ ಮಾಡುತ್ತಿದ್ದೀಯಾ ನಿನಗೆ ಪುಣ್ಯ ಇದರಿಂದ ಲಭ್ಯವಾಗುತ್ತದೆಯೇ ಎನ್ನುತ್ತಾನೆ. ನೀನು ಎಂಥ ಮಗ ಹುಟ್ಟಿದ್ದೀಯಾ ನೀನು, ಯಮನ ಹತ್ತಿರನಾದರೂ ಹೋಗಿ ಬಿಡು ಅಂದಿದ್ದೀಯೇ ಅಂದಾಗ ಅವನು ಯಮನ ಹತ್ತಿರ ಹೋಗುತ್ತಾನೆ. ಆದ್ದರಿಂದ ಆ ನಚಿಕೇತನ ಕಥೆ ನಿಮಗೆಲ್ಲರಿಗೂ ಗೊತ್ತಿದೆ. ಉದ್ದಾಲಕರ ಕ್ಷಾಲದಿಂದಲೂ ಕೂಡ ಪುರಾಣ ಕಾಲದಲ್ಲಿಯೂ ಕೂಡ ಬ್ರಾಹ್ಮಣರಿಗೆ ಇಂತಹ ಆಕಳನ್ನು ಕೊಡುವುದು ಪದ್ದತಿ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಜೆ.ಪಿ. ಯವರ ಕಾಲಕ್ಕೆ ದಾನವಾಗಿ ಅಂತಹ ಜಮೀನನ್ನು ಕೊಡುತ್ತಿದ್ದರು.

ಶ್ರೀ ಸಿ.ಸಿ. ಪಾಟೀಲ್ : ಕುಂಬಳಕಾಯಿಯನ್ನು ತಿಂದರೆ ಬ್ರೈನ್ ಶಾರ್ಪ್ ಆಗುತ್ತದೆಂದು ಸೈಂಟಿಫಿಕಲಿ ವಾದ ಇದೆ. ಅದಕ್ಕೆ ಹಿಂದಿನ ಕಾಲದ ಪೌರೋಹಿತ ಸಮಾಜದಲ್ಲಿ ಬ್ರಾಹ್ಮಣರ ವರ್ಗ ಕುಂಬಳಕಾಯಿಯನ್ನು ಉಳಿದವರು ತಿಂದರೆ ಎಲ್ಲರೂ ಕೂಡ ಶಾಣೆಯಾಗುತ್ತಾರೆ, ಕುಂಬಳಕಾಯಿ ಭೂಷಣ, ಭರಸನಾ ಅದನ್ನು ತಿನ್ನಬಾರದು ಎಂದು ಮಾಡಿದ್ದಾರೆಂದು ನಮ್ಮ ಹಳ್ಳಿಯ ಕಡೆಯಲ್ಲಿ ಹೇಳುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಕಾಲದಲ್ಲಿ ಮಾನ್ಯ ಪ್ರಕಾಶ್‌ರವರು ಹೇಳಿದ ಹಾಗೆ ಬ್ರಾಹ್ಮಣರಿಗೆ ದಾನವಾಗಿ ಕೊಡುತ್ತಿದ್ದರು. ಜೆ.ಪಿ. ಯವರಿಗೆ ದಾನವಾಗಿ ಎಂದು ಹೇಳಿದರು. ಆದರೆ ಇವತ್ತು ಏನಾಗಿದೆ ಎಂದರೆ ಎಸ್‌ಸಿ:ಎಸ್‌ಟಿ ಯವರಿಗೆ ಜಮೀನು ಕೊಡಿಸುತ್ತೇವಲ್ಲಾ ಊರಾಗೆ ಬೇಡವಾಗಿದ್ದು ಇದ್ದರೆ ಸರ್ಕಾರದವರು ಏನೋ ಕೊಡಿಸುತ್ತಾರೆ ನೋಡಿ, ಅದನ್ನು ಕೊಡಿ ಎಂದು ಹೇಳುತ್ತಿದ್ದರು. ಅವರು ಕೊಡಿಸಿರುವಂತಹ ಜಮೀನೆಲ್ಲಾ 80 ಪರ್ಸೆಂಟ್ ಅವರು ಬಿತ್ತುವುದೇ ಇಲ್ಲ. ಸರ್ಕಾರದ ಹಣವನ್ನು ತೆಗೆದುಕೊಂಡು ಅದು ವೇಸ್ಟ್ ಆಗಿದೆ. ಇದು ಪರಿಸ್ಥಿತಿಯಾಗಿದೆ.

ಶ್ರೀ ನೆ.ಲ. ನರೇಂದ್ರಬಾಬು : ಎಲ್ಲಾ ಹಿರಿಯರು ಮಾತನಾಡಿದರು. ಈ ನೈಸ್ ಕುಂಬಳಕಾಯಿ ಇದೆಯಲ್ಲಾ ನೈಸ್‌ನವರು ತೆಗೆದುಕೊಂಡಿರುವುದು ಭೂದಾನದಲ್ಲಿ ಬಂದಿರುವುದು, ಅದು ನಿಜವಾಗಿಯೂ ಸರ್ಕಾರದ್ದೋ ಅಥವಾ ಬೇರೆದೋ ಎಂಬ ಬಗ್ಗೆ ಎನ್‌ಲೈಟ್ ಮಾಡಿದರೆ ಒಳ್ಳೆಯದು.

ಶ್ರೀ ಹೆಚ್. ಆಂಜನೇಯ (ಭರಮಸಾಗರ) : ಮಾನ್ಯ ಅಧ್ಯಕ್ಷರೆ, ಹಸು ಬಹಳ ಸುಂದರವಾಗಿದೆ ಎಂದು ಒಬ್ಬ ದಲಿತ, ಬ್ರಾಹ್ಮಣರ ಹಸುವನ್ನು ನೋಡುತ್ತಿದ್ದರಂತೆ, ಆಗ ಬ್ರಾಹ್ಮಣರು

ಹೇಳಿದಂತೆ ಏನಪ್ಪಾ ಹಸುವನ್ನು ಬಹಳ ನೋಡುತ್ತಿದ್ದೀಯಾ, ಏಕೆ ಎಂದು ಕೇಳಿದರಂತೆ. ನಿಮ್ಮ ಹಸು ಬಹಳ ಚೆನ್ನಾಗಿದೆ ಸ್ವಾಮಿ ಎಂದನಂತೆ. ನಿನಗೆ ಬೇಕೆನಯ್ಯಾ ಎಂದು ಕೇಳಿದರಂತೆ ದಲಿತ. ಹೌದು ಸ್ವಾಮಿ ಕೊಟ್ಟರೆ ಅದು ನನಗೆ ಬೇಕು. ಒಂದು ಕೆಲಸವನ್ನು ಮಾಡೋಣ. ಇದನ್ನು ಎರಡು ಭಾಗವಾಗಿ ಮಾಡೋಣ, ಹಸುವನ್ನು ಹೇಗೆ ಎರಡು ಭಾಗ ಮಾಡುತ್ತೀರಾ ಬುದ್ಧಿ ಅಂದನಂತೆ. ನೋಡು ಮುಂದೆ ಬಹಳ ಚೆನ್ನಾಗಿದೆ. ಮುಂದೆ ನೀನು ತೆಗೆದುಕೊಂಡು ಬಿಡು, ಹಿಂದಿನದೆಲ್ಲಾ ನನಗೆ ಎಂದರಂತೆ. ಹಿಂದೆ ಏನೇನು ಬರುತ್ತದೆಯೋ ಅವೆಲ್ಲವೂ ನನಗೆ ಅಂದರಂತೆ. ಮುಂದೆ ಇರುವುದೆಲ್ಲಾ ನೀವು ಇಟ್ಟುಕೊಳ್ಳಬೇಕು ಎಂದರಂತೆ. ಆ ಬ್ರಾಹ್ಮಣರು ಆಮೇಲೆ ಹಸು ಒಂದು ಕರುವನ್ನು ಹಾಕಿತು, ಅದು ಹಿಂದೆ ಬಿತ್ತಲ್ಲಾ ಕರುವನ್ನು ತೆಗೆದುಕೊಂಡು ಹೋಗಿ ಅವನ ಮನೆಗೆ ಕೊಟ್ಟ. ಹಾಲು ಕೊಟ್ಟ, ಸಗಣಿ ಕೊಟ್ಟ, ಹೀಗೆ ದಲಿತ ಹಿಂದೆ ಏನು ಬೀಳುತ್ತಿತ್ತೋ ಅದೆಲ್ಲವನ್ನೂ ಕೊಟ್ಟುಕೊಂಡು ಸೇವೆಯನ್ನು ಮಾಡಿದ ಎಂದು ಒಬ್ಬ ದಲಿತನ ನೋವು ಹೇಗಿದೆ ಎಂದರೆ, ಅವರನ್ನು ಇವರು ಯಾವ ರೀತಿಯಾಗಿ ಬಳಸಿಕೊಂಡರೆಂದು ಇದೊಂದು ಜೀವಂತ ಉದಾಹರಣೆಯಾಗಿದೆ. ಇದು ಸತ್ಯವೆಂದು ನಮ್ಮ ಮೇಷ್ಟ್ರು ಹೇಳುತ್ತಿದ್ದರು. ಆ ಕಥೆಯನ್ನು ನಾನು ನಿಮ್ಮ ಗಮನಕ್ಕೆ ತಂದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಅಲ್ಲಿಂದ ಪ್ರಾರಂಭವಾಗುತ್ತದೆ. ಈ ಗೌರ್ನಮೆಂಟ್‌ನಾ ಫ್ರಾಡ್‌ಗಳೆಲ್ಲಾ, ಫ್ರೇಮ್ ವರ್ಕ್ ಅಗ್ರಿಮೆಂಟ್ ಮಾಡಿದ್ದು ನಂದಿ. ಇದರ ಬಗ್ಗೆ ನಾನು ಪ್ರಾರಂಭದಲ್ಲಿ ಹೇಳಿದೆ. ಈ ಮೂರು consortium ಗೆ ಏನು ಎಂಒಯು ಸೈನ್ ಮಾಡಿತ್ತೋ, this Nandi is not the part of that three consortium, which originally signed for MOU. ಇವರು ಹೇಗೆ ಬಂದಿದ್ದರು? ಗೌರ್ನಮೆಂಟ್ ಫ್ರೇಮ್‌ವರ್ಕ್ ಅಗ್ರಿಮೆಂಟ್ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ನಂದಿ ಕಂಪನಿಯವರ ಜೊತೆ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ಎಲ್ಲಿಂದ ಬಂತು ಇದು? By creating false records to the Government Order, They entered to the frame work agreement with the NICE company. ಅದಕ್ಕೆ ಒಂದು ಸಣ್ಣ ಎಕ್ಸಾಂಫಲ್‌ನ್ನು ಹೇಳುತ್ತೇನೆ. 3 ಗೌರ್ನಮೆಂಟ್ ಆರ್ಡರ್ ಮಾಡುತ್ತಾರೆ. 7–10–1999, 29–1–2000, ಈ ಮೂರು ಗೌರ್ನಮೆಂಟ್ ಆರ್ಡರ್‌ಗಳಲ್ಲಿ ಆರ್ಡರ್ಸ್‌ನ್ನು ಮಾಡಿ ಜಿ.ಒ.ನಂ: 7–10–1999 ಈ ಮೂರು ಗೌರ್ನಮೆಂಟ್ ಆರ್ಡರ್‌ಗಳನ್ನು ಪಾಸ್ ಮಾಡಿದ್ದಾರೆ. ಈ ಗೌರ್ನಮೆಂಟ್ ಆರ್ಡರ್‌ಗಳಿಗೆ ಯಾವುದೇ ರೀತಿಯಾದಂತಹ ಸಂಪುಟದ ಅನುಮತಿ ಇಲ್ಲ. ಇವು ಎಂತಹ ಆರ್ಡರ್‌ಗಳು, ಒಂದು ಆಗಲೇ ನಾನು ಹೇಳಿದೆ 10 ರೂಪಾಯಿಗೆ ಲೀಸ್ ಕೊಟ್ಟಂತಹ ಆರ್ಡರ್. ಅವನಿಗೆ ಹಣ ಕೊಡಬಾರದು ಎಂದು ಹೇಳಿದಾಗ ಅವನಿಗೆ ಹಣ ಬರುವುದಕ್ಕೆ ಯಾವ ರೀತಿಯಾಗಿ ಮಾಡಿದೆಯೆಂದರೆ, Government indirectly funded the project to the tune of Rs.2000 crores minimum whereas, the total cost of the toll road projet itself is Rs.2,600 crores. ನೀವೇ ಕೊಟ್ಟಿದ್ದೀರಿ. By way of giving

land. ಒಂದು ಜಿ.ಓ.ಆರ್ಡರ್. ಇದೆಲ್ಲವನ್ನೂ ಮಾಡಿರುವಂತಹದ್ದು, 10 ರೂಪಾಯಿಗೆ ಯಾವಾಗ ಕೊಡಬೇಕೆಂದು ಹೇಳಿದರೋ, It is a direct intervention of the then Chief Minster overruling the Legislature. ಕೊಟ್ಟಿರತಕ್ಕಂಥದ್ದು. ಆವಾಗ 12-11-2003ರಲ್ಲಿ, the then Large and Medium Scale Industries Minister ಅವರು ರಿವ್ಯೂ ಮಾಡುತ್ತಾ ಮೀಟಿಂಗ್‌ನಲ್ಲಿ ಏನು ಹೇಳುತ್ತಾರೆಂದರೆ, His Chairmanship directed the Special Deputy Commissioner BMTCP to identify the lands that are notified, but not required for project and observed that the private area notified as on date was 20,824 acres that means 6,319 acres is notified excess of the private land requirement. Later on, the Minster noted that he had instructed to identify the excess 5,000 acres of land acquired and whether there is any such necessity which cannot be a real estate project. ಆಗ ಲಾರ್ಜ್‌ಸ್ಕೋಪ್ ಇಂಡಸ್ಟ್ರಿಯಲ್ ಮಿನಿಸ್ಟರ್ ಒಂದು ಆದೇಶ ಅದನ್ನೂ ಅವರು ಸ್ಪೆಷಲ್ D.C. ಯವರಿಗೆ ಡೈರೆಕ್ಟ್ ಮಾಡಿದ್ದಾರೆ. ಇದೆಲ್ಲಾ ಹೋಯಿತು, ಇವತ್ತು 2,471 ಎಕರೆ ಏನು ಬೇಕಿದೆ, ಅದರೊಂದಿಗೆ 1,214 ಎಕರೆ ತುಂಬಾ ಬೆಲೆ ಬಾಳತಕ್ಕಂಥ ಭೂಮಿ ಆ ಪ್ರದೇಶದಲ್ಲಿ ಬೇಕು, ಈಗ ಆಲ್‌ರೆಡಿ 423 ಎಕರೆ ಸೇರಿಸಿದೆ. ಅದರ ಜೊತೆಗೆ ಇನ್ನೂ 1,214 ಎಕರೆ ಬೇಕು, ನೀವು ಅಲ್ಲಿ ಕೊಡದಿದ್ದರೆ ನಿಮ್ಮನ್ನು ಕೋರ್ಟಿಗೆ ಎಳೆಯುತ್ತೇನೆ. ಏಕೆಂದರೆ ನಮಗೋಸ್ಕರ ನೀವು ಕೆ.ಐ.ಎ.ಡಿ.ಬಿ.ನಲ್ಲಿ ನೋಟಿಫೈ ಮಾಡಿದಿರಿ. ಹಾಗಾಗಿ ಅದನ್ನು ನಮಗೇ ಕೊಡಬೇಕು. ಇಲ್ಲದಿದ್ದರೆ ನಿಮ್ಮ ಮೇಲೆ ಕೋರ್ಟಿನಲ್ಲಿ ಕೇಸ್ ಹಾಕುತ್ತೇನೆ ಎಂದು ಹೇಳುವುದು. ಈ ರೀತಿಯಾದಂಥ ಅಕ್ರಮವಾಗಿ ಪಡೆದಂಥ ಭೂಮಿಯನ್ನು ನೈಸ್ ಕಂಪನಿಯ ಫೈನಾನ್ಸಿಯಲ್ ಅಡ್ವೈಸರ್, ಯು.ಟಿ.ಐ ಬ್ಯಾಂಕ್, ಏನು ಹೇಳುತ್ತದೆಂದರೆ, ಇಷ್ಟು ಲ್ಯಾಂಡ್ ಮಾರಾಟ ಮಾಡಬೇಕೆಂದು ಹೇಳಿ ಅವರು ಕುಳಿತಿದ್ದಾರೆಂದರೆ ನಾನು ಇದರ ಬಗ್ಗೆ ಡಿಟೇಲ್ ಆಗಿ ಹೇಳುತ್ತೇನೆ. It is more important, it is none other than the Financial Advisor of the Nandi company, i.e., ಯು.ಟಿ.ಐ. ಬ್ಯಾಂಕ್‌ನವರು ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್ ಟೋಟಲ್ ಏರಿಯಾ ಹೊಸೂರು ರಸ್ತೆಯಲ್ಲಿ 320 ಎಕರೆ, ಇಂಟರ್‌ಚೇಂಜ್ ಏರಿಯಾ 40ಎಕರೆ, ಡೆವಲಪಬಲ್ ಏರಿಯಾ 280 ಎಕರೆ, ಏರಿಯಾ ಫಾರ್ ಅಮ್ನೆಟೀಸ್ ಫಾರ್‌ರೋಡ್ಸ್ 126 ಎಕರೆ, ಸೇಲಬಲ್ ಏರಿಯಾ 154 ಎಕರೆ ಇದೆ. ಬನ್ನೆರುಘಟ್ಟ ರಸ್ತೆಯಲ್ಲಿ ಟೋಟಲ್ ಲ್ಯಾಂಡ್ 278 ಎಕರೆ, ಇಂಟರ್‌ಚೇಂಜ್ 20 ಎಕರೆ, ಡೆವಲಪಬಲ್ ಏರಿಯಾ 258 ಎಕರೆ, ಅಮ್ನೆಟೀಸ್ ಏರಿಯಾ 116 ಎಕರೆ, ಇಲ್ಲಿ ಅವನಿಗೆ ಮಾರಾಟಕ್ಕಿರುವಂಥ ಭೂಮಿ 162 ಎಕರೆ. ಕನಕಪುರ ರಸ್ತೆಯಲ್ಲಿ ಟೋಟಲ್ ಲ್ಯಾಂಡ್ 204, ಇಂಟರ್ ಚೇಂಜ್ ಏರಿಯಾ 40, ಡೆವಲಪಬಲ್ ಏರಿಯಾ 164, ಏರಿಯಾ ಫಾರ್ ಅಮ್ನೆಟೀಸ್ 74, ಇಲ್ಲಿ ಅವನಿಗೆ ಸೇಲ್ ಮಾಡಲಿಕ್ಕೆ ಇರತಕ್ಕಂಥ ಭೂಮಿ 90 ಎಕರೆ, ಇದೆಲ್ಲಾ ಮುಗಿದ ಮೇಲೆ ಈ 90 ಎಕರೆ ಭೂಮಿ ಈ ಬನ್ನೇರುಘಟ್ಟ

ರಸ್ತೆಯಲ್ಲಿ ಅವನಿಗೆ ಉಳಿಯುತ್ತದೆ. ಕ್ಲೆವರ್‌ಲೀಫ್ 276 ಎಕರೆ, ಇಂಟರ್‌ಚೇಂಜ್ 60, ಡೆವಲಪಬಲ್ ಏರಿಯಾ 216. ಆಫ್ಟರ್ ಅಮ್ನೆಟೀಸ್ 97, ಇದೆಲ್ಲಾ ಹೋದಮೇಲೆ 119 ಎಕರೆ ಇಲ್ಲಿ ಅವನಿಗೆ ಮಾರಾಟ ಮಾಡಲಿಕ್ಕೆ ಉಳಿಯುತ್ತದೆ. ಮೈಸೂರು ರಸ್ತೆಯಲ್ಲಿ 291 ಎಕರೆ ಮಾರಾಟ ಮಾಡಲಿಕ್ಕೆ ಉಳಿಯುತ್ತದೆ. ಮಾಗಡಿ ರಸ್ತೆಯಲ್ಲಿ 89 ಎಕರೆ ಉಳಿಯುತ್ತದೆ. ತುಮಕೂರು ರಸ್ತೆಯಲ್ಲಿ 105 ಎಕರೆ ಉಳಿಯುತ್ತದೆ. ಬಫರ್ ಲ್ಯಾಂಡ್ ಇಲ್ಲ, ಟೋಟಲ್ 989 ಎಕರೆ ರೋಡ್‌ನಲ್ಲಿ ಸಿಗುತ್ತದೆ. ಟೌನ್‌ಷಿಪ್‌ನಲ್ಲಿ 1,019 ಎಕರೆ ಸಿಗುತ್ತದೆ. ಒಟ್ಟಿಗೆ 1,998 ಎಕರೆ ಮಾರಾಟಕ್ಕೆ ನೀವು ಕೊಟ್ಟಿದ್ದೀರಿ, ಆ ಪ್ರದೇಶದಲ್ಲಿ ಭೂಮಿಯ ಬೆಲೆ ಇವತ್ತು not less than Rs. two crores to eight crores per acre ಗೆ ಹೋಗುತ್ತದೆ. ಈಗ ಯಾವ ಏರಿಯಾದಲ್ಲಿ ಮಾಡಿದಿರಿ ಇದೆಲ್ಲಾ ಸೇರಿದರೆ ಇಷ್ಟು ಲ್ಯಾಂಡ್ಸ್ ಮಾರಾಟಕ್ಕಿದೆ ಎಂದು ಹೇಳಿ ನಾನು ಹೇಳಲಿಲ್ಲ, ಸರ್ಕಾರ ಹೇಳಲಿಲ್ಲ. This is the statement given by the UTI Bank which is the Financial Advisor of the Nandi Company. ಏನು ಹೇಳುತ್ತೀರಿ? Is there any greatest fraud than this? 1998 ಎಕರೆ ಈಗಾಗಲೇ ಅವರ ಹತ್ತಿರ ಮಾರಾಟಕ್ಕಿದೆ. ಈ ಭೂಮಿಯನ್ನು ಕಡೆಗೆ ಆತ ಏನು ಮಾಡಿದ್ದಾನೆ ಗೊತ್ತೇ ಸನ್ಮಾನ್ಯ ಅಧ್ಯಕ್ಷರೇ, ಈ ಫೆರಿಫೆರಿಯಲ್ ರೋಡ್ ಸೇರಿ, 41 ಕಿ.ಮೀ. ರೋಡ್, ಅಂದರೆ ಇಂಟರ್ ಚೇಂಜ್ ರಸ್ತೆ, ಲಿಂಕ್ ರಸ್ತೆ ಎಲ್ಲಾ ಸೇರಿ 41 ಕಿ.ಮೀ. ರಸ್ತೆ ಏನಿದೆ, ಅದನ್ನು ಅವನೇ ಹುಟ್ಟುಹಾಕಿರುವಂಥ ಇನ್ನೊಂದು ನೈಸಲ್ ಕಂಪನಿಗೆ 333 ಕೋಟಿ. ರೂಪಾಯಿಗಳು ಸಬ್ ಕಂಟ್ರಾಕ್ಟ್ ಕೊಟ್ಟಿದ್ದಾನೆ. ಅದರ ಪ್ರಕಾರ ಒಂದು ಕಿ.ಮೀ. ರಸ್ತೆಗೆ cost will be 5.76 ಕೋಟಿ ರೂ.ಗಳು ಆಗುತ್ತದೆ, ಆದರೆ ನಾನು ಕೊಟ್ಟಿರತಕ್ಕಂಥ ಲ್ಯಾಂಡ್ ಎಲ್ಲಾ ಸೇರಿದರೆ ಸಾಮಾನ್ಯ ಜನರು, ಅಂದರೆ ಕರ್ನಾಟಕ ಜನರು ಮತ್ತು ಕರ್ನಾಟಕ ಸರ್ಕಾರ ಒಂದು ಕಿ.ಮೀ. ರಸ್ತೆಯ ಕನ್ಸ್ಟ್ರಕ್ಷನ್ಸ್‌ಗೆ 76.24 ಕೋಟಿ ರೂಪಾಯಿಗಳನ್ನು ನಾವು ಕೊಡಬೇಕಾಗುತ್ತದೆ. ಈಗ ಅವನು ಏನು ಮಾಡಿದ್ದಾನೆಂದರೆ, 41 ಕಿ.ಮೀ. ಫೆರಿಫೆರಿಯಲ್ ರಸ್ತೆಯನ್ನು ಅವನೇ ಹುಟ್ಟುಹಾಕಿರುವಂಥ ಇನ್ನೊಂದು ಕಂಪನಿಗೆ ಸಬ್ ಕಂಟ್ರಾಕ್ಟ್ ಕೊಟ್ಟಿದ್ದಾನೆ. ಸಬ್ ಕಂಟ್ರಾಕ್ಟ್ ಆಗಿ ಕಂಟ್ರಾಕ್ಟ್ ಆ ಕಂಪನಿ ಜೊತೆಗೆ ಫೈನಲ್ ಮಾಡಿರುವುದು 333 ಕೋಟಿ ರೂಪಾಯಿಗಳಿಗೆ. ಆದರೆ ನಾವು ಕೊಟ್ಟಿರುವ ಭೂಮಿ ಎಲ್ಲಾ ಸವಲತ್ತುಗಳನ್ನು ಸೇರಿಸಿದರೆ ಪರ್ ಎಕರೆಗೆ 76.24 ಕೋಟಿ ರೂ.ಗಳಷ್ಟು ನಮಗೆ ಹಾಗೂ ಕರ್ನಾಟಕ ಸರ್ಕಾರಕ್ಕೆ ಕಾಸ್ಟ್ ಬೀಳುತ್ತದೆ. ಅಂದರೆ ಸರ್, ಏನು ದುರಂತವಿದು! ಅವನಿಗೆ 5.00 ಕೋಟಿ ರೂ.ಗಳಷ್ಟು ಕ್ಯಾಪಿಟಲ್ ಫಾರ್ ಕನ್ಸ್ಟ್ರಕ್ಷನ್ಸ್‌ಗೆ ಬೀಳುತ್ತದೆ, ನಮಗೆ 76.24 ಕೋಟಿ ರೂಪಾಯಿಯೇ? ಯಾವ ಪಾಪಕ್ಕೆ ಸರ್ ಕರ್ನಾಟಕದ ಜನ 76.24 ಕೋಟಿ ರೂ.ಗಳನ್ನು ಕೊಟ್ಟು ಒಂದು ಕಿ.ಮೀ. ರಸ್ತೆಯಲ್ಲಿ ಹೋಗಬೇಕು. ಯಾವ ಪಾಪಕ್ಕೆ ಹೋಗಬೇಕು? ಅವನು ಕೊಡುವುದು 5.00 ಕೋಟಿ ರೂ. ಚಿಲ್ಲರೆಗೆ, ನಾವು ಕೊಡುವುದು ಎಕ್ಸೆಸ್ 69 ಕೋಟಿ ರೂ.ಗಳನ್ನು ಒಂದು ಕಿ.ಮೀ. ಗೆ ಕೊಡುತ್ತಿದ್ದೇವೆಂದರೆ ಯಾವ ಪಾಪಕ್ಕೆ ಕರ್ನಾಟಕದ ರಾಜ್ಯದ ಜನ ಅಷ್ಟು ಹಣವನ್ನು ಕೊಡಬೇಕು? At whose cost it has to be given? ಯಾರಾದರೂ ಸರ್ಕಾರದ ಮಂತ್ರಿಗಳೂ ಅಥವಾ ಮುಖ್ಯಮಂತ್ರಿಗಳು

ಅವರ ಮನೆಯಿಂದ ತಂದು ಕೊಟ್ಟ ಹಣವೇ ಇದು? ಯಾರ ಹಣ ಇದು? It is the public money. It is the public property. Public property is being looted in daylight with the help of the Government, with the connivance of the Government. Then what is the responsibility of the Legislature now? I am requesting, ನಾನು ಕೇಳುತ್ತಿದ್ದೇನೆ ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಜವಾಬ್ದಾರಿ ಏನು ಹಾಗಾದರೆ ಈಗ? Should we allow this loot? This is my question before the Government. It is up to the Government to take a decision. Whether this Government is going to allow this loot or curtail this? ಇದರ ಬಗ್ಗೆ ಸನ್ಮಾನ್ಯ ಅಧ್ಯಕ್ಷರೇ, ಲೆಜಿಸ್ಲೇಚರ್‌ನಲ್ಲಿ ಡಿಬೇಟ್ಸ್ ಪ್ರಾರಂಭವಾಗುತ್ತದೆ, ಅಂದರೆ, ಈ ಅಧಿವೇಶನ ಪ್ರಾರಂಭವಾದ ಪ್ರಾರಂಭದ ಅಧಿವೇಶನದಲ್ಲಿ ಇದರ ಬಗ್ಗೆ ಡಿಬೇಟ್ಸ್ ಪ್ರಾರಂಭವಾಗುತ್ತದೆ. ಈ ಲೆಜಿಸ್ಲೇಚರ್ ಡಿಬೇಟ್ಸ್‌ನಲ್ಲಿ ಯಾವ ರೀತಿ ಇದರಲ್ಲಿ ಚರ್ಚೆಯಾಗಿದೆಯೆಂದರೆ, "This is one of the biggest scam of all the scams that had happened in our Country, this is a scheme involving land grabbing". ಯಾರು ಹೇಳಿದ್ದು ಇದನ್ನು? It is none other than the present Deputy Chief Minister, Mr. Yadiyurappa when he was sitting in the Opposition. ಅಷ್ಟೇ ಅಲ್ಲ ಅವರು ಹೇಳಿರತಕ್ಕಂಥಾದ್ದು, "Hon'ble Chairman, it is fifty years since we have got independence. We are at th stage of celebrating golden jubilee. Our Scheduled Caste and Scheduled Tribe do not have proper roads, lights. There is nobody to look after them and listen to them. To have an electric train is enough? If the existing roads are widened by another 100 feet, it is enough. For what is the preference? Sir, by this, all the poor people will loose their lands and will be on th street". ಇದನ್ನೂ ಮಾನ್ಯ ಯಡಿಯೂರಪ್ಪನವರೇ ಹೇಳಿದ್ದು, ಇಲ್ಲಿ ಕುಳಿತುಕೊಂಡು, ಅಪೋಸಿಷನ್‌ನಲ್ಲಿ ಕುಳಿತುಕೊಂಡು ಹೇಳಿದ್ದು. ಅದಕ್ಕೆ ಉದಾಸಿಯವರು ಉತ್ತರ ಕೊಡುತ್ತಾರೆ, ಆಮೇಲೆ ಮತ್ತೆ ಅವರು ಹೇಳುತ್ತಾರೆ "It is the biggest gol-mal business. ನೀವಲ್ಲ ಹೇಳಿದ್ದು, ಯಡಿಯೂರಪ್ಪನವರು ಈ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಅವರು ಏನು ಹೇಳುತ್ತಾರೆಂದರೆ, ನೀವು ಅಂದರೆ ಪಿ.ಡಬ್ಲ್ಯೂಡಿ ಮಿನಿಸ್ಟರ್ ಸ್ವಾಮಿ, ಉದಾಸಿಯವರಲ್ಲ, ಆಗ ಏನು ಹೇಳುತ್ತಾರೆಂದರೆ "This is the biggest gol-mal business, land grabbing business. I am raising this subject today before the people thinking that this is the biggest corrupt business in the history of the World and to avoid curse from the future generation and future elected members after thirty years,my point is that before taking

up the projet of this type, it should be ensured that it is advantageous to the State or Country". ಇದನ್ನು ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತಾಗ, ವಿರೋಧಪಕ್ಷದ ನಾಯಕರಾಗಿ ಮಾತನಾಡಿರತಕ್ಕಂಥ ವಿಚಾರ, ನಾನು ಸನ್ಮಾನ್ಯ ಯಡಿಯೂರಪ್ಪನವರಿಗೆ ಬಹಳ ನಮ್ರತೆಯಿಂದ ಕೇಳುತ್ತಿದ್ದೇನೆ, ಇದು ನಿಮ್ಮ ಕಮಿಟ್‌ಮೆಂಟ್ ಆದರೆ ನೀವು ವಿರೋಧ ಪಕ್ಷದಲ್ಲಿ ಕುಳಿತಾಗ ನೀವು ಏನು ಹೇಳಿದ್ದೀರಿ ನಿಜವಾಗಿಯು ಬದ್ಧತೆ ಅದಕ್ಕಿದ್ದರೆ ನೀವು ಮೊನ್ನೆ ಮಿಸ್ಟರ್ ಖೇಣಿ ಏರ್ಪಡಿಸಿದ್ದ ಔತಣಕೂಟಕ್ಕೆ ಹೇಗೆ ಹೋಗಿದ್ದೀರಿ, ಅವರು ಅಂದರೆ ಬಿಜೆಪಿಯವರು ಸರ್, ಬಿಜೆಪಿಯವರು ಹೇಗೆ ಆ ಔತಣಕೂಟಕ್ಕೆ ಹೋದರು?

12.30 P.M.

ನಂ.2, ಇವತ್ತು ಬಿ.ಜೆ.ಪಿ. ಯವರ ಸ್ಟ್ಯಾಂಡ್ ಏನು ಸರ್ಕಾರದಲ್ಲಿ? ಹೆಚ್ಚುವರಿ ಲ್ಯಾಂಡನ್ನು ವಾಪಸ್ ತೆಗೆದುಕೊಳ್ಳೋಣ, ನಾವು ಪ್ರಾಜೆಕ್ಟ್ ಹತ್ತಿರಕ್ಕೆ ಹೋಗುವುದು ಬೇಡ ಎಂದು. ಇದು ಬಿ.ಜೆ.ಪಿ. ಪಾರ್ಟಿ ಸ್ಟ್ಯಾಂಡ್, ಯಡಿಯೂರಪ್ಪನವರ ಸ್ಟ್ಯಾಂಡ್ ಅಲ್ಲ. ಹಾಗಾಗಿ, ನಾನು ಇವತ್ತು ಯಡಿಯೂರಪ್ಪನವರಲ್ಲಿ ರಿಕ್ವೆಸ್ಟ್ ಮಾಡುತ್ತಾ ಇದ್ದೇನೆ. ನೀವು ಅವತ್ತು ಇನ್ನೊಂದು ಹೇಳಿದಿರಿ. ಖಾಸಗಿ ಕಂಪನಿಗಳವರಿಗೆ ಲ್ಯಾಂಡ್ ಕೊಟ್ಟು, ಬಿಸಿನೆಸ್ ಮಾಡಲಿಕ್ಕೆ ನೀವು ಹೊರಟಿದ್ದೀರಿ ಎಂದು. ನೀವು ದಯವಿಟ್ಟು ಈಗ ಆ ಕೆಲಸಕ್ಕೆ ಹೋಗಬೇಡಿ. ಇದು ನನ್ನ ರಿಕ್ವೆಸ್ಟ್. ಆದ್ದರಿಂದ, ನಾನು ಈ ಸರ್ಕಾರಕ್ಕೆ ಏನು ಕೇಳುತ್ತೇನೆಂದರೆ. ಈ ಸರ್ಕಾರ, ಈ ಹಗಲು ದರೋಡೆಯನ್ನು ನಿಲ್ಲಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ಅಥವಾ ಹಗಲು ದರೋಡೆ ಮುಂದುವರಿಯುವುದಕ್ಕೆ ಅವಕಾಶ ಮಾಡಿಕೊಡುತ್ತದೆಯೇ? ಇದು ಒಂದನೇ ಪ್ರಶ್ನೆ. ನನ್ನ ಅಭಿಪ್ರಾಯ, ಏನು ಹೆಚ್ಚುವರಿ ಲ್ಯಾಂಡ್ ಕೊಟ್ಟಿದ್ದೀರಿ, ಅದನ್ನು ವಾಪಸ್ ತೆಗೆದುಕೊಂಡು ನೀವು ಬಡ ರೈತರಿಗೆ ಕೊಡಬೇಕು. ಯಾರ ಹತ್ತಿರ ತೆಗೆದುಕೊಂಡಿದ್ದೀರೋ ಅವರಿಗೆ ಅದನ್ನು ವಾಪಸ್ ಕೊಡಬೇಕು. ನೀವು ಹರಾಜು ಹಾಕಬಾರದು. ನೀವು ಮೊದಲು ಏನು ಹೇಳುತ್ತಿದ್ದಿರಿ ನಾವು ಹರಾಜು ಹಾಕಿ ರೋಡ್ ಕನ್‌ಸ್ಟ್ರಕ್ಷನ್ ಮಾಡುತ್ತೇನೆ ಎಂದು. That, I won't agree. ಆದ್ದರಿಂದ, ನೀವು ಇದನ್ನು ರೈತರಿಗೆ ಕೊಡಬೇಕು. ಯಾವುದೇ ಕಾರಣದಿಂದ ಬೇರೆ ಉದ್ದೇಶಕ್ಕೆ ಉಪಯೋಗಿಸಬಾರದು. ಹೈಕೋರ್ಟ್ ಜಡ್ಜ್‌ಮೆಂಟ್ ನಿಮಗೆ ಕ್ಲಿಯರ್ ತೀರ್ಮಾನ ಕೊಟ್ಟಿದೆ. Legislature is not bound by the agreement. It can nullify. This is up to the Government to take the decision as to what has to be done. ನಾನು ಕಡೆಯದಾಗಿ ಒಂದು ಮಾತು ಹೇಳುತ್ತೇನೆ. ನಾನು ಮತ್ತು ಮಾಧುಸ್ವಾಮಿ ಹೈಕೋರ್ಟ್‌ನಲ್ಲಿ ಏನು ಕೇಸು ಹಾಕಿದ್ದೇವೆಂದರೆ, ನಾವು ರೋಡ್ ಬೇಡ ಎಂದು ಹೇಳಲಿಲ್ಲ, ಅಭಿವೃದ್ಧಿ ಬೇಡ ಎಂದು ಹೇಳಲಿಲ್ಲ. ನಾವಿಬ್ಬರೂ ಕೇಳಿದ್ದು ಇಷ್ಟೆ. ಈ ಪ್ರಾಜೆಕ್ಟ್‌ನ್ನು ತಯಾರು ಮಾಡುವಾಗ ಗೋಲ್‌ಮಾಲ್ ನಡೆದಿದೆ. ರಿಯಲ್ ಎಸ್ಟೇಟ್ ಬಿಸಿನೆಸ್ ನಡೆದಿದೆ. ಇದನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕೆಂದು ಹೌಸ್‌ನಲ್ಲಿ ಚರ್ಚೆ ಮಾಡಿದೆವು. ಹೌಸ್ ಅದನ್ನು ರಿಜೆಕ್ಟ್ ಮಾಡಿತು, ಅದಕ್ಕೋಸ್ಕರ ನಾವು ಹೈಕೋರ್ಟ್‌ಗೆ ಹೋದೆವು. ಹೈಕೋರ್ಟ್ ಆ ಪಾಯಿಂಟನ್ನೇ

ಕನ್‌ಸಿಡರ್ ಮಾಡಲಿಲ್ಲ. ಆ ಪ್ರಶ್ನೆಗೂ ಹೋಗಲಿಲ್ಲ. ಆದ್ದರಿಂದ, ಇವತ್ತು ನಾನು ಕೇಳುತ್ತಾ ಇದ್ದೇನೆ. We demand for CBI enquiry. ಇದರಲ್ಲಿ ಯಾರು ಯಾರು ಅಪರಾಧಿಗಳು ಇದ್ದಾರೆ, ಅದು ರಾಜಕಾರಣಿಗಳು ಆಗಿರಬಹುದು, ಅಧಿಕಾರಿಗಳು ಆಗಿರಬಹುದು, ಯಾರೇ ಆಗಿರಬಹುದು, ಅವರ ಮೇಲೆ ಕ್ರಿಮಿನಲ್ ಕಟ್ಟಳೆಯನ್ನು ಹಾಕಿ, ಅವರನ್ನು ಪ್ರಾಸಿಕ್ಯೂಟ್ ಮಾಡಬೇಕು. ಸರ್ಕಾರ ಇದರ ಬಗ್ಗೆ ವಿವರವಾದ ತನಿಖೆ ಮಾಡಬೇಕು. ಈ ವಿಷಯವಾಗಿ ನಿಮಗೆ ಏನಾದರೂ ಬೇಕೆಂದರೆ, ಎಲ್ಲಾ ದಾಖಲೆಗಳು 1999 ರಿಂದ 2004ನೇ ಇಸವಿಯವರೆಗೂ ಏನೇನು ಇದಕ್ಕೆ ಸಂಬಂಧಪಟ್ಟಿರತಕ್ಕ ದಾಖಲೆಗಳು ಬೇಕು. ಆ ಎಲ್ಲಾ ದಾಖಲೆಗಳನ್ನೂ ಮಾನ್ಯ ಅಧ್ಯಕ್ಷರಿಗೆ ಕೊಡುತ್ತಿದ್ದೇನೆ. ಇದೊಂದು ದೊಡ್ಡ ಸ್ಕ್ಯಾಂಡ್, ಇದರ ಬಗ್ಗೆ ತೀವ್ರವಾದಂಥ ತನಿಖೆಯಾಗಬೇಕು. ಯಾರು ತಪ್ಪಿತಸ್ಥರಾದರೆ, ಅವರನ್ನು ಕ್ರಿಮಿನಲ್ ಪ್ರಾಸಿಕ್ಯೂಟ್ ಮಾಡಬೇಕು. ಕರ್ನಾಟಕ ರಾಜ್ಯದ ಜನತೆಯನ್ನು ಉಳಿಸಬೇಕು, ಬಡ ರೈತರನ್ನು ಉಳಿಸಬೇಕು, ಕರ್ನಾಟಕ ರಾಜ್ಯದ ಆಸ್ತಿಯನ್ನು ಉಳಿಸಬೇಕೆಂದು ವಿನಂತಿ ಮಾಡಿಕೊಂಡು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಆ ಎಲ್ಲಾ ಪೇಪರ್ಸ್‌ನ್ನೂ ನನಗೆ ಕಳುಹಿಸುತ್ತೇನೆಂದು ಹೇಳಿದಿರಲ್ಲಾ, ನಾನು ತನಿಖೆ ಮಾಡುವುದಕ್ಕೆ ಏನಾದರು ಆದೇಶ ಮಾಡುವ ಅಧಿಕಾರ ಇದೆಯೇ ಎಂಬುದನ್ನು ಹೇಳಿಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಸೆಕ್ರೆಟರಿಯವರನ್ನು ಕೇಳಿಕೊಳ್ಳಬೇಕು. ನಮ್ಮನ್ನು ಕೇಳಿದರೆ. There is a Secretaryto assist him in all those matters.

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಾವು ಕುತೂಹಲದಿಂದ ಕೇಳಿದಿರಿ. ಇಷ್ಟೆಲ್ಲಾ ಹೇಳಿದಿರಿ ನನಗೇನಾದರೂ ಅಧಿಕಾರ ಇದೆಯಾ ಎಂದು. ಖಂಡಿತ ಅಗತ್ಯ ಇದೆ. ನಿಮಗಿಲ್ಲದ ಅಧಿಕಾರ ಯಾರಿಗೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು, ಅಧ್ಯಕ್ಷರು ಪರಿಶೀಲನೆ ಮಾಡಲಿ ಎಂದು ಹೇಳಲಿಲ್ಲ. ಅಧ್ಯಕ್ಷರ ಮುಖಾಂತರ ಒದಗಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅವರ ಇತಿಮಿತಿ ಬಗ್ಗೆ ತಿಳಿದುಕೊಳ್ಳತಕ್ಕ ಕುತೂಹಲ. ತಮಗೆ ಅಧಿಕಾರ ಇದೆ. ನೀವೊಂದು ಹೊಸ ದಾಖಲೆ ಸ್ಥಾಪನೆ ಮಾಡಿದಹಾಗೆ ಆಗುತ್ತದೆ. You can constitute a House Committee. Refer this matter. ಹೌಸ್ ಕಮಿಟಿಯಿಂದ ಏನು ರೆಫರೆನ್ಸ್ ಬರುತ್ತೆ, ಏನು ತೀರ್ಮಾನ ಬರುತ್ತೆ that will be the decision of the House as well. You can give a direction to the Government.

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ಒಂದು ಸಮಿತಿ ಇದೆ, ಅದಕ್ಕೇ ಇದನ್ನು ಒಪ್ಪಿಸಿ. ಭೂಗಳ್ಳರನ್ನು ಪತ್ತೆ ಹಚ್ಚತಕ್ಕ ಒಂದು ಸಮಿತಿ ಇದೆ. ಆ ಸಮಿತಿಗೇ ಇದನ್ನೂ ಕೊಟ್ಟು ಬಿಡಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅಲ್ಲ ಅಧ್ಯಕ್ಷರೇ, ತಾವು ರೈಸ್ ಮಾಡಿದ್ದು ಬಹಳ interesting proposition. You can take decision after hearing all of us to constitute a House Committee. Terms of reference ನೀವು ಕೊಟ್ಟು, ಟೈಮ್ ಲಿಮಿಟ್ ಫಿಕ್ಸ್ ಮಾಡಿ, ಆ ಹೌಸ್ ಕಮಿಟಿ ಕೊಡತಕ್ಕ ನಿರ್ಣಯಗಳು ಏನಿರುತ್ತವೆ, that should be considered as the decision of the House and give a direction to the Government. ತಾವು ಖಂಡಿತವಾಗಿಯೂ ಮಾಡಬಹುದು. You are not disabled or helpless. Only thing is you must execute your authority. ಇಲ್ಲ ಅಂದರೆ, ನಿಮ್ಮ ಸಹಾಯಕ್ಕೆ ಬರಬೇಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಎದ್ದುನಿಂತು ಖುಷಿಯಾಗಿ, ಹೌದು ಧೈರ್ಯ ಮಾಡುತ್ತೇವೆ. ಇದು ಆಗಬಾರದು ಎಂದು, he can orader them to easen your burden. Any of the two things can be done.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ತಾವು ಆ ಜಾಗದಲ್ಲಿ ಕುಳಿತು ಮುಖ್ಯಮಂತ್ರಿಗಳಿಗೆ ಒಂದು ಮಾತು ಹೇಳಿಬಿಡಿ. ನಿಮ್ಮ ಅಧಿಕಾರ ಅಲ್ಲಿಗೆ ಎಕ್ಸಿಕ್ಯೂಟ್ ಆಗಿಬಿಡುತ್ತೆ. ಏನೂ ಬಹಳ ಮಾಡಬೇಕಾಗಿಲ್ಲ. ಆ ಸೀಟಿನಲ್ಲಿ ಕುಳಿತು ಅವರಿಗೊಂದು ಸೂಚನೆ ಕೊಟ್ಟರೆ ಸಾಕು. ನಿಮ್ಮ ಅಧಿಕಾರವನ್ನು ನೀವೇಕೆ ಪ್ರಶ್ನೆ ಮಾಡಿಕೊಳ್ಳುತ್ತೀರಿ. ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನಾಗಲೇ ಈ ಮನೆಯಲ್ಲಿ ಹಿಂದೆ ಬಹಳ ಹೊತ್ತು ಮಾತನಾಡಿದ್ದರಿಂದ ಮತ್ತೆ ನಾನೂ ಕೂಡ ಕೋರ್ಟ್ ಪಿಟೀಷನರ್ ಆಗಿರುವುದರಿಂದ, ಮಾತನಾಡಲಿಕ್ಕೆ ಬಯಸುತ್ತೇನೆ. ಹಿಂದೆ ನಾವು ಮಾತನಾಡಿದಾಗ ಯಾವುದೇ ಕಾಂಟ್ರಾಕ್ಚುಯಲ್ ಕಂಡೀಷನ್ ಮತ್ತು ಆಬ್ಲಿಗೇಷನ್ ಬಗ್ಗೆ ಈ ಮನೆಯಲ್ಲಿ ಮಾತನಾಡಿರಲಿಲ್ಲ. ಆ ಪರಿಸ್ಥಿತಿಯೂ ಉದ್ಭವವಾಗಿರಲಿಲ್ಲ. ಹೆಚ್ಚುವರಿ ಭೂಮಿ ಏನು ಆ ಕಂಪನಿಗೆ ಸರ್ಕಾರ ಕೊಟ್ಟಿದೆ, ಅದರ ಬಗ್ಗೆ ಈ ರಾಜ್ಯದ ಬಡವರಿಗೆ, ಬೆಂಗಳೂರು ಆಜುಬಾಜಿನಿಂದ ಹಿಡಿದು ಮೈಸೂರಿನವರೆಗೆ ಭೂಮಿ ಕಳೆದುಕೊಳ್ಳುತ್ತಿರುವ ರೈತರಿಗೆ ಅನ್ಯಾಯವಾಗುತ್ತಿರುವುದನ್ನು ನಾವು ಪ್ರೊಟೆಸ್ಟ್ ಮಾಡಿದ್ದೆವು. ನಾನು ಇವತ್ತು ನಿಂತುಕೊಂಡು ಇಬ್ಬರು ಮೂರು ಜನಕ್ಕೆ ನನ್ನ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಒಂದು ಸನ್ಮಾನ್ಯ ಹೆಚ್.ಕೆ. ಪಾಟೀಲರವರಿಗೆ; ಖಂಡಿತವಾಗಿಯೂ ನಾನು ಅವತ್ತು ಅದನ್ನು ಓದಿದ್ದರೆ, ಅವತ್ತೇ ಇಷ್ಟು ಇಷ್ಯೂ ಸಾಕು ಎಂದು ನಾನು ಹೇಳಿಬಿಡುತ್ತಿದ್ದೆ. ವಿಧಾನ ಪರಿಷತ್ತಿನಲ್ಲಿ ಏನು ಸನ್ಮಾನ್ಯ ಹೆಚ್.ಕೆ. ಪಾಟೀಲರು ನಿಂತುಕೊಂಡು ಮಾತನಾಡಿದ್ದಾರೆ, ಮತ್ತು ಅವತ್ತು ಏನು ಹೋಮ್‌ವರ್ಕ್ ಮಾಡಿದ್ದಾರೆ, ಇನ್‌ವೆಸ್ಟಿಗೇಷನ್ ಮಾಡಿದ್ದಾರೆ, ಆ ಸಂಬಂಧಪಟ್ಟ ಕಂಪನಿಗಳು ಅಮೇರಿಕಾದಲ್ಲಿ ಯಾವ ಸ್ಥಿತಿಯಲ್ಲಿದ್ದವು ಎಂಬುದನ್ನು ಅಸೆಂಬ್ಲಿ ಮುಂದೆ ಹೇಳಿದ್ದಾರೆ, ನಿಜವಾಗಿಯೂ ಆ ಒಬ್ಬ ಶಾಸಕರಿಗೆ ಅಭಿನಂದನೆ ಸಲ್ಲಿಸಬೇಕು. I was glared and I admire that Mr. H.K. Patil has debated in the Council. ಆ ವಾದವನ್ನು ಏನಾದರೂ ಕಾಂಗ್ರೆಸ್ಸಿನವರು ಕೇಳಿ, ಓದಿ ಈ ಸಭೆಯಲ್ಲಿ ಕುಳಿತಿದ್ದರೆ ಬಹುಶಃ ನನ್ನ ವಿರುದ್ಧವಾಗಿ ಅವತ್ತು ಯಾರೂ ಬರುತ್ತಿರಲಿಲ್ಲ. ನಾವು ಯಾರೂ ಅಷ್ಟು ಕೆಲಸ ಮಾಡಿಲ್ಲ. ಎಸ್.ಐ.ಎ.

ಇಂಜಿನಿಯರಿಂಗ್ ಕಂಪನಿ ನಿಮ್ಮ ಹತ್ತಿರ ಎಂ.ಒ.ಯು.ಗೆ ಬಂದಿದ್ದಾನೆ. ಅವನ ಪೊಸಿಷನ್ ಏನು? ಅವನ ಸ್ಟೇಟಸ್ ಏನು? ಅವನ ಮೇಲಿರುವ ಲಿಟಿಗೇಷನ್ಸ್ ಎಷ್ಟು? VHB ಅವನ ಪರಿಸ್ಥಿತಿ ಏನು, ಅವನೇನು ರೋಡ್ ಮಾಡುವ ಕಂಪನಿಯೇ? ಈ consortium ಜೊತೆ ವ್ಯವಹಾರ ಮಾಡಲಿಕ್ಕೆ ಇದನ್ನೆಲ್ಲಾ dig out ಮಾಡಿದ್ದೀರಾ ಅಂದರೆ, ಸನ್ಮಾನ್ಯ ಉದಾಸಿಯವರಿಗೆ ಅವತ್ತು ಉತ್ತರ ಇಲ್ಲ. ಅವರು ಉತ್ತರ ಹೇಳುವುದಕ್ಕೆ ಆಗಲಿಲ್ಲ. ಹಾಗೆಯೇ ಏನೋ ತಿಪ್ಪೆಸಾರಿಸಿಕೊಂಡು ಹೌಸ್‌ನಿಂದ ಹೊರಗೆ ಬಂದುಬಿಟ್ಟಿದ್ದಾರೆ. ನಾನು ವಿಚಾರಿಸುತ್ತೇನೆ, ಆಮೇಲೆ ಹೇಳುತ್ತೇನೆ ಹೀಗೆ ಮಾಡುತ್ತೇನೆ, ಹಾಗೆ ಮಾಡುತ್ತೇನೆ ಅಂತ. The MoU entered itself ws with a fraud consortiium. ಅದು ಯಾರಾದರೂ ಆಗಿರಲಿ. ನಾನು ಇಲ್ಲಿ ಯಾರನ್ನೋ ಮೆಚ್ಚಿಸಲಿಕ್ಕೆ ಮಾತನಾಡಲು ನಿಂತಿಲ್ಲ. ಆಗಿ ಹೋಯಿತು ಅಧ್ಯಕ್ಷರೇ. ಸಾರ್ ಇದೆಲ್ಲಾ ಹೇಗೆ ಆಯಿತು. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಒಂದು ಥಿಂಕಿಂಗ್ ಬಂತು. ಈ congestion of Bangalore ಅನ್ನು ಕಡಿಮೆ ಮಾಡಬೇಕು ಎಂದು 1988 ರಲ್ಲಿ ಬಂತು. ಅವರಿಗೆ ಆ ತರಹ ಕಲ್ಪನೆಗಳು, ಆಲೋಚನೆಗಳು ಬರುತ್ತಿದ್ದುದು ಸಹಜ. ಹಾಗಾಗಿ, ಟೆಂಡರ್ ಕರೆದರು. ಟೆಂಡರ್ ಬಂದಿದ್ದು ಖೋಡೇಸ್‌ನವರೊಬ್ಬರಿಂದ ಮಾತ್ರ. ಭಾಗವಹಿಸಿದ್ದವರು ಅವರೊಬ್ಬರೇ. 60 ವರ್ಷದ ಟೋಲ್ ಕೇಳಿದರು, ಲ್ಯಾಂಡನ್ನು ಸರ್ಕಾರವೇ ಕೊಡಬೇಕೆಂದು ಕೇಳಿದರು, ಸುಮಾರು ಐದು ಸಾವಿರ ಚಿಲ್ಲರೆ ಎಕರೆ ಜಮೀನನ್ನು ಅವರು ಕೇಳಿದರು. ಸನ್ಮಾನ್ಯ ಹೆಗಡೆಯವರು, ನಾವೆಲ್ಲಾ ತಿಳಿದುಕೊಂಡು ಬಿಟ್ಟೆವು. ಅವರು ರೈತರಲ್ಲ, ಅವರು ಅಮೇರಿಕಾದಿಂದ ಬಂದವರು ಅಂತ. ಐದು ಸಾವಿರ ಎಕರೆ ಕೊಡುವುದೇ ದುರಂತ ಎಂದು, ಅದನ್ನು ಅಲ್ಲಿಗೆ ಕೈಬಿಟ್ಟುಬಿಟ್ಟರು. ಮತ್ತೆ ಆರಂಭವಾಗಿದ್ದು ಕನ್‌ಸಾರ್ಟಿಯಂನವರು ಬಂದು ನಾವು ಮಾಡುತ್ತೇವೆ ರಸ್ತೆಯನ್ನು ಅಂದರು. ಸಾರ್ ನಾನು ಮೇಲೆ ಅಲ್ಲಿಗೆ ಬರುತ್ತೇನೆ. ಈಗ ನಾನು ಕೋಟ ವಿಷಯಕ್ಕೆ ಬರುತ್ತೇನೆ. ನಾನಾಗಲೀ ಮಾನ್ಯ ಶ್ರೀರಾಮರೆಡ್ಡಿಯವರಾಗಲಿ ಯಾವುದೇ ನ್ಯಾಯಾಲಯದ ಮುಂದೆ ಈ ಕಂಟ್ರಾಕ್ಟನ್ನು ರದ್ದು ಮಾಡಿ ಅಂತ ಕೇಳಿಲ್ಲ. ನಾನು ಅರ್ಜಿ ಹಾಕಿಲ್ಲ. ಎಕ್ಸ್‌ಸ್ ಲ್ಯಾಂಡ್ ಅಕ್ವಿಜೇಶನ್ ಏನು ಆಗಿದೆ ಅದೂ ಕೂಡ ಫ್ರೇಮ್ ವರ್ಕ್ ಅಗ್ರಿಮೆಂಟ್ ಆದ ಮೇಲೆ ಏನಾಗಿದೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅದನ್ನು ಆ ಕಂಪನಿಯವನ ಪೊಸಿಷನ್‌ಗೆ ಕೊಡಬಾರದು, ಏತಕ್ಕೆ ಮಾನ್ಯ ಅಧ್ಯಕ್ಷರೇ, ಫ್ರೇಮ್ ವರ್ಕ್ ಅಗ್ರಿಮೆಂಟ್‌ನಲ್ಲಿ ನನಗೆ 20,193 ಎಕರೆ ಜಮೀನು ಕೊಡಬೇಕು ಅಂತ ಹೇಳಿ ನಾನು ಅಫಿಡವಿಟ್ ಹಾಕಲಿಲ್ಲ, ಸೋಮಶೇಖರ ರೆಡ್ಡಿ ಕೇಸ್‌ನಲ್ಲಿ ಮಿಸ್ಟರ್ ಅಶೋಕ್ ಖೇಣಿ, ಎಂ.ಡಿ. ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್, ಅವರೇ ಹಾಕಿರುವ ಅಫಿಡವಿಟ್. ನನಗೆ ಇಷ್ಟು ಬೇಕು ಜಮೀನು ಅಂತ. ಅದರಲ್ಲಿ ಬೆಂಗಳೂರು ನಗರದಲ್ಲಿ ಇಷ್ಟು ಬೇಕು, ಅದು ಸರ್ಕಾರದ್ದು ಇಷ್ಟು, ಖಾಸಗಿಯವರದ್ದು ಇಷ್ಟು, ಹೊರಗಡೆ ಇಷ್ಟು ಬೇಕು On his own Affidavit on which Hon'ble High Court has given a decision that for 20,193 acres he is entitled. Government has to hand over so much of land for this project. ಸಾರ್, ಇದು ಸ್ಟಾರ್ಟ್ ಆಗಿದ್ದು ಹೇಗೆ? 1997 ನಲ್ಲಿ ಇಲ್ಲ ಅದಕ್ಕೂ

ಮೊದಲೇ, ಕಲ್ಯಾಣಿರವರು ಒಂದು ಕಾಗದ ಬರೆಯುತ್ತಾರೆ. ಈ ಮಾತುಕತೆಯಾದಾಗ I am glad ನಾವು ಅಂಡರ್‌ಸ್ಟ್ಯಾಂಡಿಂಗ್‌ಗೆ ಬಂದಿದ್ದಕ್ಕೆ, ನನಗೆ ಸನ್ಮಾನ್ಯ ಮುಖ್ಯಮಂತ್ರಿಗಳೇ, 18 ಸಾವಿರ ಎಕರೆ ಜಮೀನನ್ನು ನನಗೆ ಕೊಟ್ಟರೆ, we will successfully do this project. ಅಂತ ಒಂದು ಸಾವಿರ ಚಿಲ್ಲರೆ ಎಕರೆ ಜಾಸ್ತಿ ಮಾಡಿ ನಾವು ಫ್ರೇಮ್ ವರ್ಕ್ ಅಗ್ರಿಮೆಂಟ್‌ಗೆ ಹೋಗುತ್ತೇವೆ. 18 ಸಾವಿರ ಚಿಲ್ಲರೆ ಅಂತ ಪ್ರಾಜೆಕ್ಟ್ ಮಾಡುವವರು ಕೇಳಿದರೆ ನಾವಾಗಿ ನಾವೇ 1300–1400 ಎಕರೆ ಜಾಸ್ತಿ ಮಾಡಿ 20,193 ಎಕರೆಗೆ ಹೊರಟು ಹೋದೆವು. ಆಲ್‌ರೈಟ್ ಫ್ರೇಮ್‌ವರ್ಕ್ ಅಗ್ರಿಮೆಂಟ್ ಆಯಿತು. ಎಂಪವರ್‌ಮೆಂಟ್ ಕಮಿಟಿ ಇತ್ತು, ಎಕ್ಸ್‌ಫರ್ಟ್ ಇದ್ದರು ಬಂದರು ಅಲೈನ್‌ಮೆಂಟ್ ನೋಡಿದರು, ಟೌನ್‌ಶಿಫ್ ನೋಡಿದರು ಎಲ್ಲಾ ಮಾಡಿದರು. ಏನು ಸಾರ್ ಫ್ರೇಮ್ ವರ್ಕ್ ಅಗ್ರಿಮೆಂಟ್? 41 ಕಿಲೋಮೀಟರ್ ರೋಡ್ ಮಾಡಬೇಕು. ಒಂದು ರೋಡು, 9 ಚಿಲ್ಲರೆ ಪೆರಿಫೆರಲ್ ರೋಡ್ ಮಾಡಬೇಕು. ಒಟ್ಟು 65 ಕಿಲೋಮೀಟರ್ ಈ ರೋಡು, ಪ್ಲಸ್ 111 ಕಿಲೋಮೀಟರ್ ಇಲ್ಲಿಂದ ಮೈಸೂರಿಗೆ ಎಕ್ಸ್‌ಪ್ರೆಸ್ ವೇ; ಕಾರಿಡಾರ್ ಮಾಡಬೇಕು. ಯಾವುದೇ ಅಗ್ರಿಮೆಂಟ್‌ನಲ್ಲಿ ಮಾನ್ಯ ಅಧ್ಯಕ್ಷರೇ, 30 ವರ್ಷ ಆದ ನಂತರ ನಾವು ಕೊಟ್ಟ ಜಾಗ, ಆ ಕಂಪನಿ ಜೊತೆ ಉಳಿಯುವಂತಹ ಪರಿಸ್ಥಿತಿಯನ್ನು ನಾವು ಎಲ್ಲೂ ಮಾತನಾಡಿಲ್ಲ. ನಾವು ಎಲ್ಲೂ ಒಪ್ಪಂದ ಮಾಡಿಕೊಳ್ಳಲಿಲ್ಲ. ಎಕ್ಸ್‌ಫ್ಟ್ ಟೌನ್‌ಶಿಫ್ ಏನು ಡೆವಲಪ್ ಮಾಡುತ್ತೇವೆ ಟೌನ್‌ಶಿಫ್‌ನಲ್ಲಿ 45 ಪರ್ಸೆಂಟ್ ಷೇರನ್ನು ಅವರಿಗೆ ಕೊಟ್ಟು ಆ 45 ಪರ್ಸೆಂಟನ್ನು ಆತ alienate ಮಾಡಿಕೊಳ್ಳಬಹುದು. ಆತ ಅದನ್ನು ಇಟ್ಟುಕೊಳ್ಳಬಹುದು, ಮಾರಬಹುದು, It is up to him to decide. ಮತ್ತೆ ಪವರ್ ಏನು ಜನರೇಟ್ ಮಾಡುತ್ತಾನೆ ಪವರ್ ಜನರೇಟ್ ಮಾಡಿದ್ದರಲ್ಲಿ ನಾವು ಪರ್ಚೇಸ್ ಮಾಡಲಿಕ್ಕೆ ಒಂದು ಕ್ಲಾಜ್ ಮಾಡಿಕೊಂಡಿದ್ದೇವೆ. ಇದನ್ನು ಬಿಟ್ಟು ಒಂದೇಒಂದು ಗುಂಟೆ ಜಮೀನು ಆತನಿಗೆ ನಾವು ಕೊಟ್ಟಿಲ್ಲ. ಮತ್ತೇ ಅದೇ ಫ್ರೇಮ್ ವರ್ಕ್ ಅಗ್ರಿಮೆಂಟ್‌ನಲ್ಲಿ ಸ್ಪಷ್ಟವಾಗಿ ಹೇಳುತ್ತೇವೆ, ರಸ್ತೆ ಎರಡು ಬದಿ ನಾವು ಗ್ರೀನರಿಯನ್ನು ಇಟ್ಟುಕೊಳ್ಳುತ್ತೇವೆ. ಸಾರ್, ತಾವು ಅಗ್ರಿಮೆಂಟ್ ಓದಬೇಕು. ನೋ ಕನ್‌ಸ್ಟ್ರಕ್ಷನ್, ರಸ್ತೆ ಬದಿಯಲ್ಲಿ, ಆದರೆ ನೀವು ಸರ್ವೀಸ್ ಪ್ಲಾಜಾಗಳಿಗೆ ಮಾತ್ರ 8–10 ಕ್ಕೋ ಕೇಳಿರುವುದನ್ನು ಬಿಟ್ಟರೆ ನಾವು ಎಲ್ಲೂ ಆತನಿಗೆ ಬೇರೆ ಆತ ಏನ ಬೇಕೋ ಅದನ್ನು ಕನ್‌ಸ್ಟ್ರಕ್ಟ್ ಮಾಡಿ ವ್ಯಾಪಾರ ಮಾಡಲಿಕ್ಕೆ ಮಾರಲಿಕ್ಕೆ ಫ್ರೇಮ್ ವರ್ಕ್ ಅಗ್ರಿಮೆಂಟ್‌ನಲ್ಲಿ ಇಲ್ಲ ಅಧ್ಯಕ್ಷರೇ, ಸಾರ್, ಈ ಎಲ್ಲಾ ಕೆಲಸ ಆಗಬೇಕಾದರೆ ಇಬ್ಬರು ಲೋಕೋಪಯೋಗಿ ಮಂತ್ರಿಗಳು ಆಗಿಬಿಟ್ಟಿದ್ದರು. ಮಾನ್ಯ ಶಿವಾನಂದ ಕೌಜಲಗಿಯವರು ಮತ್ತು ಉದಾಸಿಯವರು, ಇದಕ್ಕೆ ನೋಡಲ್ ಏಜೆನ್ಸಿಯಾಗಿ ಲೋಕೋಪಯೋಗಿ ಇಲಾಖೆ ಇತ್ತು. ದಿಡೀರ್ ಅಂಥ the whole thing was shifted to Industries Department. ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನವರಿಗೆ ನಾವು ಅವರ ಕಾಯ್ದೆಗೆ ತಿದ್ದುಪಡಿಯನ್ನು ತಂದು ಅವರೂ ರೆಸಿಡೆನ್‌ಷಿಯಲ್ ಏರಿಯಾಗಿ ಲ್ಯಾಂಡ್‌ನ್ನು ಅಕ್ವೈರ್ ಮಾಡಬಹುದು ಅಂತ ಮಾಡಿ, ಅವರೂ ಈ ಜಾಗಕ್ಕೆ ಈ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್‌ನವರಿಗೆ ಬೇಕಾಗಿರುವಷ್ಟು ಜಮೀನನ್ನು ಅಕ್ವೈರ್ ಮಾಡಿ ಕೊಡಬೇಕು ಎನ್ನುವ ಅಧಿಕಾರವನ್ನು ಎಂಟ್ರೆಸ್ಟ್

ಮಾಡಿಬಿಟ್ಟೆವು. ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನವರು ಮುಂದೆ 13 ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡಿ ಕೊಡಬೇಕಾದಂತಹ ಪ್ರಸ್ತಾಪ ಇತ್ತು. ಆದರೆ ಅವತ್ತಿನ ಸನ್ಮಾನ್ಯ ಎಗ್ಜಿಕ್ಯೂಟಿವ್ ಡೈರೆಕ್ಟರ್ ಆಫ್ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ 23 ಸಾವಿರ ಎಕರೆ ಜಮೀನಿಗೆ ಅಕ್ವಿಜೆಷನ್ ಪ್ರೋಸೀಡಿಂಗ್ಸ್ ಮಾಡುತ್ತಾರೆ. 23 ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡುವುದಕ್ಕೆ ಪ್ರೋಸಿಡಿಂಗ್ಸ್‌ನ್ನು ಸ್ಟಾರ್ಟ್ ಮಾಡುತ್ತಾರೆ. ಪ್ರಿಲಿಮಿನರಿ ನೋಟಿಫಿಕೇಷನ್ ಹಾಕುತ್ತಾರೆ. ಇದು ಯಾರಿಂದ ಆಯಿತು ಅಂತ ನಾನು ಹೇಳಬೇಕಲ್ಲಾ ಇಲ್ಲಿ. And who was the Minister concerned? ಅಂತ ಕೇಳಬೇಕಲ್ಲಾ ನಾವು. Who was the Officier concerned ಅಂತ ಕೇಳಬೇಕಲ್ಲಾ ನಾವು. There was a High Court decision. ಭಾರಿಭಾಷಣ ಮಾಡುತ್ತೇವೆ, ದಂಡ ಹಾಕಿಬಿಟ್ಟಿದೆ, ಸ್ಟ್ರಿಕ್ಚರ್ಸ್ ಮಾಡಿಬಿಟ್ಟಿದ್ದಾರೆ. ನಾವೆಲ್ಲಾ ಅಯೋಗ್ಯರು, ಕಳ್ಳರು, ಹೈಕೋರ್ಟ್ ಮುಂದೆ, ಸುಪ್ರೀಂ ಕೋರ್ಟ್ ಮುಂದೆ ತಲೆ ತಗ್ಗಿಸಿಕೊಂಡು ಬಂದಿರುವವರು ಅಂತ, Was there not a judgment? ಕಳ್ಳರಲ್ಲವೇ ಹಾಗಾದರೆ, ಜಡ್ಜ್‌ಮೆಂಟ್ ಮೇಲೆ ಮೀರಿ 10 ಸಾವಿರ ಎಕರೆ ಜಾಸ್ತಿ ಅಕ್ವಿಜೆಶನ್ ಪ್ರೋಸೀಡಿಂಗ್ಸ್‌ಗೆ ಸಹಿ ಹಾಕಿದರು? I challenge. ಯಾರೋ ಹಾಕುತ್ತಾರೆ, ತಿರುಪತಿ ತಿಮ್ಮಪ್ಪ ಹಾಕುತ್ತಾರೆ ರೆಕಾರ್ಡ್ ಇದೆ. ಸೋಮಶೇಖರ ರೆಡ್ಡಿಯವರ ಕೇಸ್‌ನಲ್ಲಿ, ಆ ಕೇಸನ್ನು ಪಿಟಿಷನ್ ಪ್ರೇಯರ್‌ನ್ನು ವಜಾ ಮಾಡಿ ಕೂಡ ನೀವೇ ಹೇಳಿದಂತಹ ಇಷ್ಟೇ ಲ್ಯಾಂಡನ್ನು ಅಕ್ವೈರ್ ಮಾಡಿ ಕೊಡಿ ಅಂತ ಕೋರ್ಟ್ ಹೇಳಿದರೆ even after Court decision, around 10,000 acres land ನೀವು ಎಕ್ಸ್‌ಸ್ ಲ್ಯಾಂಡ್ ಅಕ್ವಿಜೆಶನ್‌ಗೆ ಪ್ರೋಸೆಸ್ ಮಾಡಿದ್ದು ಏಕೆ ಎನ್ನುವುದೇ ನನ್ನ ಪ್ರಶ್ನೆ. ಇದೇ ನನ್ನ ಮೂಲಭೂತ ಪ್ರಶ್ನೆ ಅಧ್ಯಕ್ಷರೇ. ಮೂಲಭೂತವಾದುದು, ತಾವು ಈಗ ಅರ್ಥ ಮಾಡಿಕೊಳ್ಳಬೇಕು. ಆ ಕೇಸ್ ಡಿಷಿಶನ್ ಇವತ್ತೂ ಇರುವುದು. The very decision is still existing. ಆ ಕೇಸ್‌ನಲ್ಲಿ ಡಿಸಿಷನ್ ಆಗಿದೆ. ನೀವು ಮತ್ತೆ ಬಂದು ಈ ಕೋರ್ಟ್ ಮುಂದೆ ವಾದ ಮಾಡುತ್ತಿರುವುದನ್ನು PIL ಹಾಕಿರುವುದು ತಪ್ಪು. There is already a decision of the Court. Res-judicata ಆಗುತ್ತದೆ. ಅವರು ಕೇಳಿದ್ದೇ ನೀವು ಕೇಳಿದ್ದೀರಿ, ಹಾಗಾಗಿ ಸಪರೇಟ್ ಡಿಸಿಷನ್ ಕೊಡುವುದಕ್ಕೆ ಆಗುವುದಿಲ್ಲ. You have wasted the Court's time. ಹಾಗಾಗಿ ಕಾಸ್ಟ್ ಕಟ್ಟಿ ಅಂತ ನಮಗೆ ಹೈಕೋರ್ಟ್ ಹೇಳಿದ್ದು. I think. ನಾವು ತಲೆತಗ್ಗಿಸುತ್ತೇವೆ. ಏಕೆಂದರೆ ನಾವು ನೋಡಿಕೊಳ್ಳಬೇಕಾಗಿತ್ತು. ಸೋಮಶೇಖರರೆಡ್ಡಿ ಕೇಸ್‌ನಲ್ಲಿ ಏನಾಗಿದೆ ಅಂತ. ನಾವು ಹೇಳಿದ್ದು ಏನು, ಇಲ್ಲಿ ನಮ್ಮದು ಒಂದು ಸಣ್ಣ ತಪ್ಪಾಯಿತು. ಅದನ್ನು ಮೀರಿ ಅಕ್ವಿಜೆಶನ್ ಆಗಿದೆ ಅಂತ ಕನ್‌ವಿನ್ಸ್ ಮಾಡುವುದಕ್ಕೆ we might have failed. ಅದನ್ನು ಮೀರಿ ಅಕ್ವಿಜೆಶನ್ ಆಗಿದೆ ಅದನ್ನು ನಾವು ಕ್ವೆಶ್ಚನ್ ಮಾಡುತ್ತೇವೆಂದು ಹೇಳುವುದಕ್ಕೆ ನಮ್ಮ ಕೈಯಲ್ಲಿ ಆಗಿಲ್ಲದೇ ಇರಬಹುದು ಅಧ್ಯಕ್ಷರೇ. But, I stand. I appreciate the decision of the High Court. I appreciate the decision of the Supreme Court. 20,193 ಎಕರೆಗೆ ಕನ್‌ಫೈನ್ ಮಾಡಿದೆ ಇವತ್ತು ಕೋರ್ಟ್. ನಮಗೆ ಅದರ ಪ್ರಕಾರ ನೀವು ಏನು ಪ್ರೊಸೀಡಿಂಗ್ಸ್‌ನ್ನು ಸ್ಟಾರ್ಟ್

ಮಾಡಿದ್ದೀರಿ 9 ಸಾವಿರ ಚಿಲ್ಲರೆ ಎಕ್ಸೆಸ್ ಲ್ಯಾಂಡನ್ನು ಈವತ್ತು ಕರ್ನಾಟಕಕ್ಕೆ ಉಳಿಸಿ ಕೊಡಬೇಕಾಗಿದೆ. ಉಳಿಸಿ ಕೊಡುತ್ತೀರಾ? ಗುರುತಿಸುತ್ತೀರಾ? ಅದನ್ನು ಏನು ಮಾಡುತ್ತೀರಿ ಎನ್ನುವ ಪ್ರಶ್ನೆಗೆ ನಾವು ಇವತ್ತು ಇಲ್ಲಿ ಇನ್ನೊಂದು ಅಡ್‌ಜರ್ನ್‌ಮೆಂಟ್ ಮೋಷನ್ ತೆಗೆದುಕೊಂಡು ಬಂದು ದರ್ಜೆಯನ್ನು ಆರಂಭ ಮಾಡಿದ್ದೇವೆ. ಏಕೆಂದರೆ ಕೋರ್ಟ್ ತೀರ್ಮಾನಕ್ಕೆ ವಿರುದ್ಧವಾಗಿ ಚರ್ಚೆ ಮಾಡುವ ಮಟ್ಟಕ್ಕೆ ನಾನು ಮತ್ತು ಶ್ರೀರಾಮರೆಡ್ಡಿ ಲಾಯರ್‌ಗಳಾಗಿ ಬರುವುದಕ್ಕೆ ಆಗುವುದಿಲ್ಲ ಸಾರ್. It is a decision. I have to oblige. It is my duty. ಇಲ್ಲಿ ನಮ್ಮ ಮುಂದೆ ಇರುವ ಪ್ರಶ್ನೆ ಮಾನ್ಯ ಅಧ್ಯಕ್ಷರೇ, ಈ 9 ಸಾವಿರ ಚಿಲ್ಲರೆ ಎಕರೆ ಜಮೀನನ್ನು ಏನು ಮಾಡಬೇಕು? ಸಾರ್, ನಮ್ಮ ಭಾವನೆ ಏನು ಎಂದು ಅವತ್ತಿನ ಇಂಡಸ್ಟ್ರೀಸ್ ಮಿನಿಸ್ಟರ್‌ರವರಿಗೂ ಗೊತ್ತಿತ್ತು. ಅವರು ಒಂದು ನೋಟ್ ಹಾಕಿದರು. 'It is in my knowledge'. 6 ಸಾವಿರ ಚಿಲ್ಲರೆ ಎಕರೆ ಜಾಸ್ತಿ ಅಕ್ವಿಜೆಶನ್ ಆಗಿದೆ ಅಂತ, if you permit, I will read out. 6 ಸಾವಿರ ಚಿಲ್ಲರೆ ಎಕರೆ ನೀವೇ ಹೇಳಿದಿರಿ ಅಸೆಂಬ್ಲಿಯಲ್ಲಿ ನಾನೇ ಹೇಳಿದ್ದೇನೆ ಎಕ್ಸಸ್ ಆಗಿದೆ ಅಂತ ಹೇಳಿ, ನನ್ನ ಏಕೆ ಚಾರ್ಜ್ ಮಾಡುತ್ತೀರಾ ಅಂತ ಹೇಳಿ. ನಿಜ. I appreciate. 6 ಸಾವಿರ ಚಿಲ್ಲರೆ.

> " I have gone through the letter of NICE 38/C. The contents of that letter are out of imagination and there is no necessity that they get a rude shock. I am told that as per the agreement with Government of Karnataka, we were required to acquire 20,000 acres of land for the project including about 5,000 acres of government land. But, now we have acquired more than 26,000 acres of land. How could we do this"?

This is written by Industries Minister, not me.

> " How could we do this? What NICE has to say about it? preliminary Notification under Section 28(1) of KIADB Act, has been issued about 5 years back. The owners have been left with high nad dry. Now, we are acquiring the land and taking possession and we have to wait for the of the NICE Company, with regard to final Dikthat notification. This cannot happen. The project has been fully supported by the Government of Karnataka and it has to come in time. However, the land acquisition has also to

be done in a stipulated time-bound period. Hence, it is necessary to re-examine the entire land acquisition process of this project. In a metting held recently, I have also instructed to identify the 5,000 acres of land acquired and whether there is such a necessity. This cannot be a real estate business".

ಇಂಡಸ್ಟ್ರೀಸ್ ಮಿನಿಸ್ಟರ್ ಬರೆದಿರುವುದು, ನಾನಲ್ಲ, ಮಾನ್ಯ ದೇಶಪಾಂಡೆಯವರು ಬರೆದಿರುವ ನೋಟ್ ಇದು, It was in his knowledge. ನಾನು ಯಾಕೆ ಅವರನ್ನು ಅಕ್ಯೂಸ್ ಮಾಡುತ್ತೇನೆ ಅಂದರೆ, he was very much aware. ಬರೆದಿದ್ದಾರೆ Official record.

" I am told that despity of repeated requests, the NICE Company has not deposited the amount for payment of compensation where already notifications under Section 28(4) of KIADB act have been issued".

Not even a single pie was deposited to acquire land. What was the law, Sir? 70 ಲಕ್ಷ ರೂ. ಸರ್ವಿಸ್ ಚಾರ್ಜ್ ಅವತ್ತು ಅವನು ಕೆಐಎಡಿಬಿಗೆ ಕೊಡಬೇಕಾಗಿತ್ತು. Plus whatever preliminary notification ನೀವು ಕೊಟ್ಟಿದ್ದೀರಿ ಹಣ ತುಂಬಬೇಕಾಗಿತ್ತು ಅವನು. ಒಂದು ವರ್ಷದೊಳಗೆ. In KIADB it is 3 years ಆಗದೇ ಇದ್ದರೆ ವಿಶಿಯೇಟ್ ಆಗುತ್ತಿತ್ತು ಅದು. ಅವತ್ತು Hon'ble Minister says not a pie was deposited. Not a pie.

" Hence the NICE should think twice before putting things in black and white and blame the Government. In the circumstances, suitable instructions be issued to KIADB to identify the excess lands acquired and whether these lands are necessary for project and NICE may be asked to deposit compensation amount to be paid to the land losers immediately. There is no question again in notifying the lands in question as they have been developed and they do not, in any way, affect the project of NICE, so also the NICE. These lands are required to them in second phase of the project and nobody knows as for when the second phase is to see the light of the day".

Hon'ble Minister, the then Minister says, 'Nobody knows as for when the second phase is to see the light of the day. ಎರಡನೇ ಹಂತ ಆಗುತ್ತೆ ಅಂತ ಯಾರಿಗೂ ಗೊತ್ತಿಲ್ಲ ಅಂತ ಅವರಿಗೆ ಗೊತ್ತಿತ್ತು. Then why did he not stop this? What did he do after that? Was it identified? Was it denotified? Was it given back to farmers? Or is it with the KIADB ಹೇಳಬೇಕಲ್ಲ ಸಾರ್, ಆಕಸ್ಮಿಕವಾಗಿ ಅವರಿಗೆ ಗೊತ್ತಿಲ್ಲದೆ ಒಂದು ಕೃತ್ಯ ನಡೆದರೆ I am not here to blame anybody. Yes. You are aware. You have given a note. It is in the office record, government record. ಯಾಕೆ ಬೆಟ್ಟು ಮಾಡಿ ತೋರಿಸುತ್ತೇವೆ ಅಂದರೆ ನಿಮ್ಮಂಥ ನಾಲೆಜ್ಡ್ ಇದ್ದ ಒಬ್ಬ ಮಂತ್ರಿ ಇಷ್ಟು ಅನುಭವ ಇದ್ದ ಮಂತ್ರಿ ಒಂದು ಪ್ರಾಜೆಕ್ಟ್ ಬಗ್ಗೆ ನಿಮ್ಮದೇ ಆದ ಅಭಿಪ್ರಾಯವನ್ನು ರೆಕಾರ್ಡ್ ಮಾಡಿದ ಮಂತ್ರಿ you have recorded your opinion on the file. Why have failed to take final action on NICE? Why have you failed to take acquisition proceedings to your control? ಹೇಳಬೇಕು ಸಾರ್. I have my doubts. ಇದಾದ ಮೇಲೆ ನಿಮಗೆಲ್ಲೋ ಒಂದು ಕಡೆ ಮನಸು ಕರಗಿರಬಹುದು. ನಿಮಗೆಲ್ಲೋ ಒಂದು ಕಡೆ ಹೋಗಲಿ ಬಿಡು ಎಂಬ ಭಾವನೆ ಬಂದಿರಬಹುದು, ಅದಕ್ಕೆ ಕಾರಣನಾದರೂ ಬೇಕಲ್ಲಾ ನನಗೆ. ಆದರೆ ಒಂದು ಕಡೆ ನೀವು ರೆಕಾರ್ಡ್ ಮಾಡುತ್ತೀರಿ, to see that you are in safer side. ಇನ್ನೊಂದು ಕಡೆ ಬಿಟ್ಕೊಂಡು ಹೋಗುವುದು. ನಾನು ಹೇಳೋದು ಹೇಳಿದ್ನಪ್ಪ, ಆಗೋದು ಆಗೋಯ್ತು ಅಂತ, ಯಾರಾದರೂ ಕೇಳಿದರೆ, 'No, no. I have my own opinion'. ಒಪೀನಿಯನ್ ಕೊಡುವುದಕ್ಕೆ ಅಲ್ಲ ಸಾರ್ ಮಂತ್ರಿಗಳಾಗುವುದು, ಆಕ್ಷನ್ ತೆಗೆದುಕೊಳ್ಳುವುದಕ್ಕೆ, ಒಪೀನಿಯನ್ ತೆಗೆದುಕೊಳ್ಳಬೇಕಾದವರು ನಾವು. ನೀವ್ಯಾಕೆ ಆಕ್ಷನ್ ತೆಗೆದುಕೊಳ್ಳಲಿಲ್ಲ ಅವತ್ತು? ಇದನ್ನು ಬರೆದ ನೀವು ಆಕ್ಷನ್ ತೆಗೆದುಕೊಂಡಿದ್ದರೇ ಈ ಸ್ಥಿತಿ ನಮ್ಮ ರಾಜ್ಯಕ್ಕೆ ನಿರ್ಮಾಣವಾಗುತ್ತಿತ್ತೇ? ಆಗಲಿಲ್ಲ. ಇದಾದಮೇಲೆ....

ಅಧ್ಯಕ್ಷರು : ಮಾಧುಸ್ವಾಮಿಯವರೇ, ಅವರು ನೋಟ್ ಹಾಕಿದರು, ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ, ಅದನ್ನು ಯಾರು ರೂಲ್ ಔಟ್ ಮಾಡಿದರು? See, the instructions of the Minister should be carried out by the officers. what has happened?

Sri J.C. Madhuswamy : Instructions, if they given to office, ಯಾಕೆ ಆಗಲಿಲ್ಲ ಅಂತಲೇ ತನಿಖೆ ಆಗಬೇಕು ಅಂತ ನಾವು ನಿಮ್ಮನ್ನು ಕೇಳ್ತಿರೋದು. ಅದಕ್ಕೇ ಅವತ್ತು ಸಿಬಿಐ ತನಿಖೆ ಅಗಲಿ ಅಂತ ಕೇಳಿದ್ದು. ಇನ್‌ಸ್ಟ್ರಕ್ಷನ್ಸ್ ಫೈಲ್ ಮೇಲೆ ಇತ್ತಾ? ಇನ್‌ಸ್ಟ್ರಕ್ಷನ್ಸ್ ಅವರ ಆಫೀಸರ್ಸ್‌ಗೆ ಹೋಯಿತಾ? ಏನಾಯ್ತು ಅಂತ ನನಗೆ ಬೇಕು. ಏಕೆಂದರೆ ಇಲ್ಲೊಂದು ಮಾತು ಕೊಟ್ಟಿದ್ರು ನನಗೆ, ನಾಳೆ ಬೆಳಿಗ್ಗೆ ಏನಿವಿಂಕ್ಸ್ ಸ್ಕ್ಯಾಡಲ್‌ಅನ್ನು ತನಿಖೆ ಮಾಡಿಸಿ ಸದನಕ್ಕೆ ಹೇಳ್ತೇನೆ ಅಂತ.

ಶ್ರೀ ಆರ್.ವಿ. ದೇಶಪಾಂಡೆ : ಮಾಧುಸ್ವಾಮಿಯವರು ನನ್ನ Notes ಬಗ್ಗೆ ಹೇಳಿದ್ದಾರೆ, ಸಂತೋಷ. At least, you have said, in a way the House to know the truth. ಈಗ ರೆಡ್ಡಿಯವರು ಅಕ್ಟೋಬರ್ 98ರಲ್ಲಿ ಕೆಐಡಿಬಿ ಮತ್ತು ನೈಸ್ ಮಧ್ಯೆ ಆದ ಫ್ರೇಮ್‌ವರ್ಕ್ ಕರಾರು ಪ್ರಕಾರ 13, 14 ಸಾವಿರ ಖಾಸಗಿ ಭೂಮಿ ಅಕ್ವೈರ್ ಮಾಡಬೇಕಾಗಿತ್ತು. ಆದರೆ AGreement was done for 21,000 acres ಅಂತ ಹೇಳಿದರು. ಅದೇ ಮಾತನ್ನು ಮಾಧುಸ್ವಾಮಿಯವರೂ ಹೇಳಿದರು. ಆ Frame work agreement ನಲ್ಲಿ ಇಷ್ಟು ಲ್ಯಾಂಡ್ ಅಕ್ವೈರ್ ಆಗಬೇಕು ಅಂತ ಅವರು ಬೇಡಿಕೆ ಇಟ್ಟಿದ್ದು ನಿಜ. But, the Government should reply, at the time of agreement, as to who was the man is charge of the government, whether it is Industries or something. The Government should reply from the records. In October, 1998, who was the Minister? whether Deshapande was there or Raya Reddy was there or Madhu Swamy? Government has to reply. I leave it to Government. I don't want to throw light on that. ಎರಡನೆಯದು ಮತ್ತೊಂದು ಮಾತು ಮಾಧುಸ್ವಾಮಿ ಹೇಳಿದರು, ತಾವೆಲ್ಲಾ ಇಂತಹ ಒಳ್ಳೆಯ ಆರ್ಡರ್ಸ್ ಮಾಡಿದಿರಿ, ನೀವೊಬ್ಬ ಜವಾಬ್ದಾರಿ ಇದ್ದ ಮಂತ್ರಿಗಳು, ನಿಮ್ಮ Intention ಒಳ್ಳೆಯದಿತ್ತು ಹಾಗಾದರೆ ತಾವು ಡಿಲೀಟ್ ಮಾಡಲು ಯಾಕೆ ಪ್ರಯತ್ನ ಮಾಡಲಿಲ್ಲ ಅಂತ, For your information, all these orders were passed sometime between 2003 and 2004 March. If I am right. And after my orders, 2700 ಎಕರೆ ಭೂಮಿ on the advice of PWD and KIADB was deleted. ಆವಾಗ ಫೈಲ್ ನನ್ನ ಕಡೆಗೆ ಕಳುಹಿಸುವುದು ಬೇಡ, ಪ್ರಿನ್ಸಿಪಾಲ್ ಸೆಕ್ರೆಟರಿ ಸಿಐ was authorised to denotify the excess land and asend the file to me for just ratification. It s also in records. So orders ಆದ ನಂತರ 2700 ಎಕರೆ ಡಿಲಿಟ್ ಆಗಿದೆ. Just I am giving information.

Sri J.C. Madhuswamy : Even after the noting of the PWD Secretary of ತಾವು ಅರ್ಜಿ ಮೇಲೆ ತಮಗೆ ಬಂದದ್ದನ್ನು ಮಾತ್ರ ಡಿನೋಟಿಫೈ ಮಾಡಿದ್ದೀರಿ. There is a noting of the PWD Secretary that the land which is once acquired cannot be denotified. ಅಂತ, ಆದರೂ ದೇಶಪಾಂಡೆಯವರು ಡಿನೋಟಿಫೈ ಮಾಡಿದ್ದಾರೆ. as he has rightly said 2,000 odd acres. ಅವತ್ತಿಲ್ಲಿ ನಿಂತ್ಕೊಂಡು ಹೇಳಿದರು ಬರೀ ನೂರು ಚಿಲ್ರೆ ಎಕರೆ ನಾನು ಮಾಡಿರುವುದು ಅಂತ. PWD Secretary writes on file ಆದರೆ 'You cannot denotify'. ಬರೆದಿದ್ದಾರೆ ಫೈಲ್‌ನಲ್ಲಿ, ಆದರೆ ತಾವು not on the advice of PWD, On the request of individuals, denotiy ಮಾಡಿದ್ದೀರಿ. ನಾನು ಅದನ್ನೇ ಹೇಳಿದ್ದು ಸ್ಕ್ಯಾಂಡಲ್ ಅಂತ. When you give a notice for acquisition,

ಅವರು ಬಂದು ನಿಮ್ಮನ್ನು ಅಪ್ರೋಚ್ ಮಾಡಲು ಬಿಟ್ಟುಕೊಳ್ಳುವುದು, ಆಮೇಲೆ ಡಿನೋಟಿಫೈ ಮಾಡುವುದು, ಇದು ಎಲ್ಲಿಗೆ ತೆಗೆದುಕೊಂಡು ಹೋಗುತ್ತೆ ಸಾರ್? Let me speak frankly. I feel it is mala fide intention. Intention was not clear. When alignment was there, ರಸ್ತೆ ಎಲ್ಲಿ ಹೋಗುತ್ತದೆ? ಫೆರಫೆರಲ್ ರಸ್ತೆ ಎಲ್ಲಿ ಹೋಗುತ್ತದೆ? ಲಿಂಕ್ ರಸ್ತೆ ಎಲ್ಲಿ ಹೋಗುತ್ತದೆ ಅಂತ ಗೊತ್ತಿಲ್ಲದೇನೇ ನೀವು ಪ್ರಾಜೆಕ್ಟ್ ಮಾಡಿದ್ದೀರಾ? ಗೊತ್ತಿಲ್ಲದೇ ಬೂಸ್ವಾಧಿನತೆಗೆ ಹೋಗಿದ್ರಾ ನಿವು? ಗೊತಿಲ್ಲದೇನೆ ಬಡ ರೈತರ ಜಮೀನನ್ನು ಕಿತ್ಕೊಂಡುಬಿಡ್ತೀರಾ? You were aware, as to where the road goes, where are the interchanges, where are the link roads, where are the peripheral roads. ಆ ಭಾಗ ಬಿಟ್ಟು ಲ್ಯಾಂಡ್ ಅಕ್ವೈರ್ ಮಾಡಿದ್ದು ಏತಕ್ಕೆಂದು ಯಾರಾದರೂ ಒಬ್ಬರು ಸಣ್ಣ ಅಧಿಕಾರಿ ಮೇಲೆ ಇವರು ಆ್ಯಕ್ಷನನ್ನು ತೆಗೆದುಕೊಂಡಿದ್ದರೆ ನಾನು ತಾರೀಫ್ ಮಾಡುತ್ತೇನೆ. ಹಾಗಾದರೆ ಇಲ್ಲಿ ಸರ್ಕಾರ ನಡೆದಿಲ್ಲ. Without finalising the alignment ನೀವು ಲ್ಯಾಂಡ್ ಅಕ್ವೈರ್ ಮಾಡಿದ್ದೇನೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲಿ ರೋಡು ಹೋದರೆ ಏಳು ಕಿಲೋಮೀಟರ್ ಆಚೆಯಲ್ಲಿ ಲ್ಯಾಂಡ್ ಅಕ್ವೈರ್ ಆಗಿದೆ. ನೆಲಮಂಗಲದ ಹತ್ತಿರ. 7 KMs away from the road. ಇದನ್ನು ನಾವು ಇಲ್ಲಿ ಕೇಳಿಬಿಟ್ಟರೆ ಆವೇಶದಲ್ಲಿ ಕೇಳಿಬಿಟ್ಟರೆ ಎಲ್ಲಾ ಒಂದಾಗಿ ಆಟ್ಯಾಕ್ ಮಾಡಬಹುದು ಇವರು ಹಳ್ಳಿಯಿಂದ ಬಂದವರು ಅಂತಲೇ ಇವರು ವರ್ತಿಸುವುದು?

ಅಧ್ಯಕ್ಷರು : ರೋಡು ಅಲೈನ್‌ಮೆಂಟ್ ಅದು ಮೊದಲೇ ಫಿಕ್ಸ್ ಆಗಿರಲಿಲ್ಲವೇ?

Sri J.C. Madhuswamy : yes, it was fixed.

ಅಧ್ಯಕ್ಷರು : ನ್ಯಾಚುರಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಫಿಕ್ಸ್ ಆಗಲೇಬೇಕು ಸಾರ್. ಅದು ಕಾನೂನು ಅಲೈನ್‌ಮೆಂಟ್ ಫಿಕ್ಸ್ ಆಗದೇ ಲ್ಯಾಂಡ್ ಅಕ್ವಿಜೆಷನ್‌ಗೆ ನೋಟಿಫಿಕೇಷನ್ ಹೇಗೆ ಕೊಡುತ್ತೀರಿ? ಅಲೈನ್‌ಮೆಂಟ್ ಫಿಕ್ಸ್ ಆದಮೇಲೆ ಈ ಲ್ಯಾಂಡ್ ಅನ್‌ನೆಸಸರಿ, ಈ ಲ್ಯಾಂಡ್ ನೆಸಸರಿ ಎಂದು ಹೇಗೆ ಹೇಳುತ್ತೀರಿ? ಅಲೈನ್‌ಮೆಂಟ್ ಫಿಕ್ಸ್ ಆದಮೇಲೆ ಡಿ ನೋಟಿಫಿಕೇಶನ್‌ನ್ನು ಹೇಗೆ ಮಾಡುತ್ತೀರಿ? ಇನ್ನೊಂದು ದುರಂತವನ್ನು ನಿಮಗೆ ಹೇಳಿಬಿಡುತ್ತೇನೆ. ನೋಟೀಸ್ ಕೊಡುವುದು. ಅಥವಾ ಯಾರ ಕಡೆಯಿಂದಲೋ ಲ್ಯಾಂಡ್ ಓನರ್ಸ್‌ಗೆ ಹೇಳುವುದು. ನಿನ್ನ ಲ್ಯಾಂಡ್ ಅಕ್ವೈರ್ ಆಗಿ ಬಿಡುತ್ತೆ ಪರಿಹಾರ ಎರಡು ಲಕ್ಷ ರೂ. ಬರುತ್ತೆ ಅಂತ. ಅವರು ಹೋಗುವುದು ನಂದಿ ಸಾಮ್ರಾಜ್ಯಶಾಹಿಗಳ ಹತ್ತಿರ, ಎರಡು ಲಕ್ಷಕ್ಕೆ ಏಕಪ್ಪ ಸರ್ಕಾರಕ್ಕೆ ಕೊಡುವುದಕ್ಕೆ ಹೋಗುತ್ತೀಯಾ, ನನ್ನ ಜೊತೆಗೆ ಬಂದು ಖಾಸಗಿಯಾಗಿ ರಿಜಿಸ್ಟರ್ ಮಾಡಿಕೊಡು ಎಂದು ಹೇಳುವುದು. ಹತ್ತು ಲಕ್ಷ ರೂ. ಕೊಡುತ್ತೇವೆಂದು ಹೇಳುವುದು. 12 ಲಕ್ಷ ರೂ. ಕೊಡುತ್ತೇವೆನ್ನುವುದು. ಬಡವರ ರೈತರ ಜಮೀನುಗಳನ್ನು ಕೊಂಡುಕೊಳ್ಳುವುದು. ಇದು ಇನ್ನೂ ಲೆಕ್ಕಕ್ಕೆ ಸಿಕ್ಕಿಲ್ಲ. ಆತ ಖಾಸಗಿಯಾಗಿ ಕೂಡ ಜಮೀನುಗಳನ್ನು ಕೊಂಡುಕೊಂಡಿದ್ದಾನೆ. ಅಕ್ವಿಜೆಷನ್ ಆದರೆ ಎರಡು ಲಕ್ಷ ರೂಪಾಯಿಗಳು ಬರುವುದು, ನನಗೆ ಆ ಜಮೀನನ್ನು ಅಕ್ವೈರ್

ಮಾಡಿ ಕೊಡುವುದು. ಅದರ ಬದಲು ನಾನು ನಿನಗೆ ದಾನ ಕೊಡುತ್ತೇನೆ ಆರು ಲಕ್ಷ ರೂ. ಕೊಡು ಎನ್ನುವುದು. ನೀನು ಹತ್ತು ಲಕ್ಷ ರೂ. ತೆಗೆದುಕೋ, ಬರೆದುಕೊಡು. ನಿನಗೆ ಒಂದು ಮನೆಯನ್ನು ಕಟ್ಟಿಕೊಡುತ್ತೇನೆ. ಇಂಟರ್‌ಛೇಂಜ್‌ನಲ್ಲಿ ನಿನಗೊಂದು ಸೈಟನ್ನು ಕೊಡುತ್ತೇನೆ. ಈ ದಂಧೆ ಕೂಡ ನಡೆದುಬಿಟ್ಟಿದೆ. ಈ ದಂಧೆಗಳೆಲ್ಲಾ ನಡೆಯುವುದಕ್ಕೆ ಯಾರು ಕಾರಣ? ನಾನು ಬೇರೆ ಯಾರೋ ಪಾಪ ಹೊಸ ಮಂತ್ರಿ ನಿಂತುಕೊಂಡು ಇಲ್ಲಿ ಉತ್ತರ ಹೇಳುವಹಾಗಿದ್ದರೆ ಕೆಲಸ ಮಾಡುವಹಾಗಿದ್ದರೆ ನಾನು ಕೇಳುತ್ತಿರಲಿಲ್ಲ. ಅಷ್ಟೊತ್ತಿಗಾಗಲೇ ದೇಶ್‌ಪಾಂಡೆಯವರಿಗೆ ಬಹಳ ಅನುಭವವಾಗಿಬಿಟ್ಟಿತ್ತು. ದೇಶ್‌ಪಾಂಡೆಯವರಿಗೆ ಬಹಳ ಅನುಭವವಾಗಿಬಿಟ್ಟಿತ್ತು. ದೇಶ್‌ಪಾಂಡೆಯವರು ಕೆಐಎಡಿಬಿ ಗೆ ಇದನ್ನು ತಕ್ಷಣ ಅವರು ಪ್ರಶ್ನೆ ಮಾಡಬೇಕಾಗಿತ್ತು. This is none of my business. ಇಂಡಸ್ಟ್ರೀಸ್ ಬಿಸಿನೆಸ್‌ಗೆ KIADBಗೆ ಇದು ಸಂಬಂಧಪಟ್ಟಿಲ್ಲ. There is PWD; there is Revenue Department. ಲ್ಯಾಂಡ್ ಅಕ್ವೈರ್ ಮಾಡಿಕೊಡುವವರು ಮಾಡಿಕೊಡುತ್ತಾರೆ, ನೀವು ಹೋಗ್ರಿ ಎನ್ನಬಹುದಾಗಿತ್ತು. No. They have deviated. ಪವರ್ ಪ್ರಾಜೆಕ್ಟ್ ಮಾಡುತ್ತೇನೆಂದು ಒಂದು ಕಂಡೀಷನ್ ಆಗಿ ಹೇಳಿದ್ದುಬಿಟ್ಟರೆ the entire thing is for road and Housing where KIADB has nothing to play. Just on the pretext - - ಒಂದು ಪವರ್ ಪ್ರಾಜೆಕ್ಟ್ ಆಗುತ್ತೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಇದನ್ನು ತೆಗೆದುಕೊಳ್ಳಬೇಕು, for the simple pretext. ನಾನು ಈಗ ಕೇಳುತ್ತೇನೆ, ಕೆಐಎಡಿಬಿ ಗೆ ನೀವು ಲ್ಯಾಂಡ್ ಅಕ್ವಿಜೇಷನ್ ಮಾಡುವ ಅಧಿಕಾರವನ್ನು ಕೊಡುವಾಗ land which is already acquired by BDA, acquired by City Corporation, acquired by PWD or and autority in Karnataka, KIADB acquisition will supersede those things ಎಂದು ನೀವು ಮಾಡಿದಿರಲ್ಲಾ, ಹಾಗಾದರೆ ಬಿಡಿಎ ನಲ್ಲಿ ಅಕ್ವೈರ್ ಮಾಡಿರುವವರ ಗತಿಯೇನು? ಆ ಪರ್‌ಪಸ್ ಏನಾಯಿತು? ಬಿಡಿಎ ನವರು ಅಕ್ವೈರ್ ಮಾಡಿರುವ ಜಮೀನನ್ನು ಇದರ ಕೆಳಗೆ ತಂದಿರಿ. ಮತ್ತೆ ಏನು ಮಾಡಿದಿರಿ? ಬಿಎಂಐಸಿಪಿಎ ಎಂದು ನೀವು ಮಾಡಿಕೊಂಡಿರಿ. ಬೆಂಗಳೂರು ಮೈಸೂರು ಇನ್‌ಫ್ರಾಸ್ಟಕ್ಚರ್ ಕಾರಿಡಾರ್ ಪ್ಲಾನಿಂಗ್ ಅಥಾರಿಟಿ ಎಂದು. Here the real problem has started. ಬಿಎಂಐಸಿಪಿಎ ಮುಂದೆ ಬರದೆ ಆ ಪ್ರಾಜೆಕ್ಟ್ ಆಗುವಷ್ಟು ಭಾಗದಲ್ಲಿ ಒಂದು ಮನೆ ಕೂಡ ಯಾರಿಗೂ ಕಟ್ಟಲಿಕ್ಕೆ ಅವಕಾಶ ಇಲ್ಲದಂತೆ ಆಗಿಹೋಯಿತು. Clearance of the BMICPA was vital, not BDA or Bangalore City / Corporation. ಬಿಎಂಐಸಿಪಿಎ ಅಥಾರಿಟಿ ಎಂದು ಮಾಡಿಕೊಂಡು ಅದರಲ್ಲಿ ನೈಸ್ ಕಂಪನಿಯವರನ್ನು ಇಟ್ಟುಕೊಂಡು ಅವನು ಹೂ ಅಂದರೆ ನೀವು ನಿಮ್ಮ ಜಮೀನಿನಲ್ಲಿ ತಂತಿ ಬೇಲಿಯನ್ನು ಹಾಕಬಹುದು. ಅವನು ಹೂ ಎಂದರೆ ನೀವು ಅಲ್ಲೊಂದು ಬಿಲ್ಡಿಂಗನ್ನು ಕಟ್ಟಬಹುದು. ನೋ, ಇನ್ ಫ್ಯೂಚರ್ ಅವನು ನನಗೆ ಆ ಜಾಗ ಬೇಕಾಗುತ್ತದೆ ಎಂದುಬಿಟ್ಟರೆ you are not supposed to do anything on your own land. ಹೇಳಬೇಕಲ್ಲಾ ಸಾರ್. What ws the need of this BMICP? ಬೆಂಗಳೂರು-ಮೈಸೂರು ಕಾರಿಡಾರ್

ಇನ್‌ಫ್ರಾಸ್ಟಕ್ಚರ್ ಪ್ಲಾನಿಂಗ್ ಅಥಾರಿಟಿಯನ್ನು ನೀವುಮಾಡಿ ಜನಗಳ ಬಾಯನ್ನು ದಬ್ಬಳ ಹಾಕಿ ಹೊಲಿದಿರಿ ಬಾಯಿ ಬಿಡದಹಾಗೆ ಮಾಡಿಬಿಟ್ಟಿರಿ. ಬೇಕಾದಾಗ ಛೇರ್ಮನ್ ಆಗಿ ಕೂತುಕೊಂಡಿರಿ. Who headed that committee? ಬಿಎಂಐಸಿಪಿಎ ಅಥಾರಿಟಿ ನೀವು ಜಡ್ಜ್‌ನ್ನು ಕೂಡಿಸಿದ್ದೀರಾ? ಡೆವಲಪ್‌ಮೆಂಟ್ ಕಮೀಷನ್‌ರವರನ್ನು ಕೂಡಿಸಿದ್ದೀರಾ? ರೆವಿನ್ಯೂ ಕಮೀಷನ್‌ರವರನ್ನು ಕೂಡಿಸಿದ್ದೀರಾ? You sat there. ನೀವೇ ಕುಳಿತುಕೊಂಡಿರಿ ನಿಮ್ಮ ಅನುಕೂಲಕ್ಕೆ. ಇದನ್ನೆಲ್ಲಾ ನಾವು ಇಲ್ಲಿ ಕೇಳಬಾರದಾ? ಏನಾಯಿತು? ಸಿಡಿ ಪ್ಲಾನ್‌ನಲ್ಲಿ ಇದ್ದ ಜಮೀನುಗಳೆಲ್ಲಾ ಛೇಂಜ್ ಆಗಿ ಹೋಯಿತು. ಯಾವುದ್ಯಾವುದನ್ನೋ ಬೆಂಗಳೂರು ಸಿಟಿ ಕಾರ್ಪೊರೇಷನ್, ಬಿಡಿಎ ಗ್ರೀನ್ ಬೆಲ್ಟ್‌ಗೆ ಸಿಡಿ ಪ್ಲಾನ್‌ನಲ್ಲಿ ಇಟ್ಟುಕೊಂಡು ರಿಸರ್ವ್ ಮಾಡಿದ್ದು ಅದೆಲ್ಲಾ ಪರ್‌ಪಸ್ ಛೇಂಜ್ ಆಗಿದೆ. That is a big scandal than thsi. ಅಥಾರಿಟಿ ಆದಮೇಲೆ. ಇದರ ಹೆಸರಿನಲ್ಲಿ ಇಲ್ಲೆಲ್ಲೋ ಇವನಿಗೆ ಕೊಡುತ್ತೇವೆಂದು ಹೇಳಿ ಅಲ್ಲಿ ನಿಮ್ಮ ರಿಸರ್ವ್ ಲ್ಯಾಂಡ್ ಬೆಂಗಳೂರಿನಲ್ಲಿ ಇರಬೇಕಾದ ವೇಕೆಂಟ್‌ಲ್ಯಾಂಡ್ ಅಲ್ಲಿ ತೆಗೆದುಕೊಂಡಿರಿ. ಓನರ್‌ಗೆ ನೀವು ರೀಕನ್ವೆ ಮಾಡಿದಿರಿ. ಕಟ್ಟಡ ಕಟ್ಟುವುದಕ್ಕೆ ಬಿಟ್ಟಿರಿ. Entire Bangalore, which was so beautiful fully planned. ರಿವರ್ಸ್ ಆಯಿತು. ಒಬ್ಬ ಇಂಡಿವಿಜ್ಯುಯಲ್‌ಗೋಸ್ಕರ ಇಷ್ಟೆಲ್ಲಾ ಮಾಡಬೇಕಾಗಿತ್ತಾ? ನಾನು ವರ್ಷಕ್ಕೋ ಆರು ತಿಂಗಳಿಗೋ ಒಂದು ಸಲ ಮೈಸೂರು ರೋಡ್‌ನಲ್ಲಿ ಹೋಗುತ್ತೇನೆ. ನೀವು ಮಂಡ್ಯಕ್ಕೆ ಹೋಗುವುದಕ್ಕೆ ಈ ಪ್ರಾಜೆಕ್ಟ್ ಯಾವತ್ತಾದರೂ ಬೇಕುಎಂದು ನಿಮಗೆ ಅನ್ನಿಸುತ್ತಾ? ಕೆ.ಆರ್. ಪೇಟೆಗೆ ಹೋಗುವುದಕ್ಕೆ ನಾನು ಅದನ್ನೂ ಕೊಶ್ಚನ್ ಮಾಡುವುದಿಲ್ಲ. ನಾನು ಇವರನ್ನು ಕೇಳುತ್ತೇನೆ, ನೀವು ಭಾರತ್‌ಫೋರ್ಜ್‌ನವರು ನಿಮಗೆ ಒಂದು ಕಾಗದವನ್ನು ಬರೆದರು. ಈ ಕೆಐಎಡಿಬಿಗೆ ಒಬ್ಬರು ಆಫೀಸರ್ ಬಂದರು. ಶ್ರೀಮಾನ್ ಅನೀಸ್ ಸಿ. ರಾಜ್ ಎಂದು. ಆತ ಒಳ್ಳೆಯವನೋ ಕೆಟ್ಟವನೋ I have to admire him standing here. ಒಂದು ಲೈನ್ ಬರೆಯುತ್ತಾನೆ. ನನಗೆ ಪ್ರಾಜೆಕ್ಟ್ ಡೀಟೈಲ್ಸ್ ಗೊತ್ತಿಲ್ಲ. I am acquiring and just giving the lands on the requirements placed by the NICE Company. No department has told me what is the extent required or not.

Mr. Speaker : Only on the request of the company he has acquired? No request from KIADB?

Sri J.C. Madhuswamy : He has written on the file ನಾನು ನಿಮಗೆ ಫೈಲನ್ನು ಕೊಡುತ್ತೇನೆ. He has written on the file ನಾನು on the request of the NICE Company ಈ ಜಮೀನುಗಳನ್ನೆಲ್ಲಾ ಅಕ್ವೈರ್ ಮಾಡಿಕೊಡುತ್ತಿದ್ದೇನೆ, I have no idea. ಆದರೆ ರಿಕ್ವೈರ್‌ಮೆಂಟ್ ಏನೇನು ಇರಬೇಕು, ಯಾರಿಗೆ ಇರಬೇಕು ಎಂಬುದು ನನಗೆ ಗೊತ್ತಿಲ್ಲ. ಈ ಕಂಪನಿಯ ರಿಕ್ವೆಸ್ಟ್ ಮೇಲೆ ನಾನು ಮಾಡಿಕೊಟ್ಟಿದ್ದೇನೆ. ಅಂತ ಹಾಗಾದರೆ ಅದು ತಮ್ಮ ಗಮನಕ್ಕೆ ಬಂದಿರಲಿಲ್ಲವಾ? ಒಂದು ಕಂಪನಿಯವರು ಎಲ್ಲೆಲ್ಲಿ ಬೇಕೋ ಅಲ್ಲೆಲ್ಲಾ ಜಮೀನುಗಳನ್ನು

ಕೊಡಿ ಎಂದು ಹೇಳಿ ನೀವು ಮಾಟಿಬಿಟ್ಟಿರಿ. ಇನ್ನು ಈ ಟ್ರೈಪಾರ್ಟೈಟ್ ಅಗ್ರಿಮೆಂಟ್ ಬಗ್ಗೆ ಅವರು ಹೇಳಿದರು. ಯಾರ ಕಾಲದಲ್ಲಿ ಆಗಿತ್ತು ನೋಡಿ ಎಂದು. It was not a government agreement. ರೆಡ್ಡಿಯವರು ಎಲ್ಲೋ ಒಂದು ಚೂರು ಹೇಳಬೇಕಾದರೆ ಹೆಚ್ಚು ಕಡಿಮೆ ಆಯಿತು ಎಂದು ಕಾಣುತ್ತದೆ. ಅವನೇ ಒಂದು ನೇಸಲ್ ಎಂದು ಒಂದು ಕಂಪನಿ ಮಾಡಿಕೊಂಡುಬಿಟ್ಟ ನೈಸ್ ಕಂಪನಿಯವನೇ. ಇದರಲ್ಲೂ ಡೈರೆಕ್ಟರ್ ಆಗಿ ಮಿ: ಅಶೋಕ್ ಖೇಣಿ ಎರಡು ಕಂಪನಿಗೂ ಆತನೇ ಡೈರೆಕ್ಟರ್ ಸಾರ್. ನೇಸಲಿ ಎಂದು ಒಂದು ಕಂಪನಿ ಮಾಡಿ ಫೇಸ್–1 ಆಫ್ ದಿ ಪ್ರಾಜೆಕ್ಟ್‌ಗೆ ನೀವು ಮಾನಿಟರಿಂಗ್ ಅಥಾರಿಟಿ, ನೀವು ಇಂಪ್ಲಿಮೆಂಟ್ ಅಥಾರಿಟಿ, ನೀವು toll collection ಅಥಾರಿಟಿ, ನಿಮಗೆ ನಮಗೆ ಅಗ್ರಿಮೆಂಟ್ ಒಂದನ್ನು ಮಾಡುತ್ತೇನೆಂದು ಹೇಳಿ ಅಲ್ಲಿ ಲ್ಯಾಂಡನ್ನು ಹೈಕ್ ಮಾಡಿಕೊಂಡ. ಅವನೇ ಅದನ್ನು ತೆಗೆದುಕೊಂಡು ಬಂದು ನಮ್ಮ ಪಿಡಬ್ಲ್ಯೂಡಿ ಆಫೀಸರ್ ಹತ್ತಿರ ಒಂದು ಸಹಿಯನ್ನು ಹಾಕಿಸಿಕೊಂಡುಬಿಟ್ಟ. It was never brought to the notice of Government or the cabinet. ಸ್ಯಾಂಕ್ಷನ್ ಇಲ್ಲ. ಒಬ್ಬ ಆಫೀಸರ್ ಸೈನ್ ಹಾಕುತ್ತಿದ್ದ ಹಾಗೆ didi KIADB enquire? ಎಲ್ಲಪ್ಪ, ಕ್ಯಾಬಿನೆಟ್ ಡಿಸಿಷನ್ ಆಗಿದೆಯಾ? ಗೌರ್ನಮೆಂಟ್ ಆರ್ಡರ್? How can you consider this agreement as a Tripartite Agreement ಅಂತ ಕೇಳಬೇಕಾಗಿತ್ತಲ್ಲಾ, It was not a Tripartite Agreement. It was a fraud. It was a real fraud created by Nandi MD. ನೇಸಲ್ ಎಂದು ಇನ್ನೊಂದು ಕಂಪನಿಯನ್ನು ಮಾಡಿಕೊಂಡು ಮಾಡಿದ. ಅಲ್ಲಿ ಹೇಳಿಕೊಂಡ. ನನಗೆ ಎಕ್ಸ್‌ಸ್ ಲ್ಯಾಂಡ್ ಬೇಕು. ಅದಕ್ಕೆ ನಮ್ಮವರು ಯಾರೋ ಒಬ್ಬರು ಆಫೀಸರ್ ಕಣ್ಣು ಮುಚ್ಚಿಕೊಂಡು not even Secretary of PWD, some officer of PWD, some officer of PWD ಇದಕ್ಕೆ ರುಜುವನ್ನು ಹಾಕಿಬಿಟ್ಟರೆ, is it binding on the governmet? Was it binding on the KIADB? ಹೇಳಬೇಕಲ್ಲಾ. ಹೇಳಲೇ ಇಲ್ಲ. ಇವರೇ ಹೇಳಿಕೊಟ್ಟರು. ಏನು ಅನುಮಾನ ಪಡಬೇಡಿ. ಇವರೇ ಅವನಿಗೆ ಹೇಳಿಕೊಟ್ಟರು. ಹೀಗೆ ಮಾಡಿಕೋ, ಹೀಗೆ ತೆಗೆದುಕೊಂಡು ಬಾ, ಹೀಗೆ ನಾವು ಜಮೀನನ್ನು ಕೊಡುತ್ತೇವೆ, ಮೋಜು ಮಾಡಿಕೊಂಡು ಹೋಗು ಅಂತ. ಇವರು ಹೇಳಿಕೊಡದೇ ಅದು ಗೌರ್ನಮೆಂಟ್‌ನಲ್ಲಿ ಅಕ್ಸೆಸ್ಟ್ ಆಗುವುದಕ್ಕೆ ಸಾಧ್ಯವೇ ಇಲ್ಲ. ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದುಬಿಟ್ಟರೆ ಯಾರೂ ನೋಡಲಿಲ್ಲವೆಂದು ಭಾವಿಸುವುದಕ್ಕಾಗುವುದಿಲ್ಲ. ಭಾವಿಸುವುದಕ್ಕೆ ಸಾಧ್ಯವೇ ಇಲ್ಲ ಸಾರ್. ಒಂದು ರೂಪಾಯಿ ಕೂಡ ಅಲ್ಲಿ ಡಿಪಾಸಿಟ್ ಹಾಕದೆ ನೀವು ಅಲ್ಲಿ ಲ್ಯಾಂಡ್ ಅಕ್ವಿಜೆಷನ್ ಪ್ರೋಸೀಡಿಂಗ್ಸ್ ಅನ್ನು ಸ್ಟಾರ್ ಮಾಡಿದ್ದೀರಿ. ಅದು ಸಾವಿರಾರು ಎಕರೆಯೆಂದರೆ ಯಾರ ಜೊತೆಗೆ ನೀವು ಕಾಂಟ್ರಾಕ್ಟ್ ಮಾಡಿದಿರಿ? What was the contractual obligation? ಅವನು ಅಷ್ಟೂ ಜಮೀನನ್ನು ಪರ್ಚೇಸ್ ಮಾಡಬೇಕಾಗಿತ್ತು. ಅಷ್ಟು ಜಮೀನನ್ನು ಅವನು ಮಾರ್ಕೆಟ್ ವ್ಯಾಲ್ಯುನಲ್ಲಿ ತೆಗೆದುಕೊಳ್ಳಬೇಕಾಗಿತ್ತು. ಅಷ್ಟೂ ಜಮೀನನ್ನು ಮಾರ್ಕೆಟ್ ವ್ಯಾಲ್ಯುನಲ್ಲಿ ತೆಗೆದುಕೊಳ್ಳುವುದು ಲೇಟ್ ಆಗುತ್ತೆ ಎಂದು ಸಬ್‌ಸಿಕ್ವೆಂಟ್ ಮೀಟಿಂಗ್‌ನಲ್ಲಿ ನೀವೇನು ಮಾಡಿದಿರಿ, ಕಾಸು ಕಟ್ಟಿಬಿಡು, ಅಕ್ವೈರ್ ಮಾಡಿಕೊಡುತ್ತೇವೆಂದಿರಿ. ಯಾವುದೇ ಅಕ್ವಿಜಿಷನ್

ಮೂರನೇಯವರ ಪರವಾಗಿ ತಾವು ಮಾಡಬೇಕೆಂದರೆ ಫಸ್ಟ್ ಫೇಸ್ he was to deposit the amount in full. He has to deposit with the Asst. Commissioner or KIADB. ಅಸಿಸ್ಟೆಂಟ್ ಕಮೀಷನರ್ ಹತ್ತಿರವೋ, ಕೆಐಎಡಿಬಿ ಯೋ ಎಲ್ಲೋ ಒಂದು ಕಡೆ ಅವನು ಅಮೌಂಟನ್ನು ಡಿಪಾಸಿಟ್ ಮಾಡಬೇಕು. ನೀವು ಅಕ್ವೈರ್ ಮಾಡಿಬಿಡುತ್ತಿದ್ದಿರಿ. ಅವನು ದುಡ್ಡು ಕಟ್ಟುತ್ತಿರಲಿಲ್ಲ. ಅವತ್ತು ಏನಾಗಬೇಕಾಗಿತ್ತು ಸಾರ್. ನಾನೊಂದು ಹೈಪಾಥಿಟಿಕಲ್ ಕ್ವೊಶ್ಚನ್ ಒಂದನ್ನು ಕೇಳುತ್ತೇನೆ. 20 ಸ್ಸಾವಿರ ಎಕರೆ ನೀವು ಅಕ್ವಯರ್ ಮಾಡಿಬಿಟ್ಟಿರಿ. ನೋಟೀಫಿಕೇಷನ್ನೂ ಕೊಟ್ಟುಬಿಟ್ಟಿರಿ. ನಂದಿ ಅವನು ಈ ಕಾಂಟ್ರಾಕ್ಟನ್ನು ನಾನು ಮಾಡುವುದಿಲ್ಲವೆಂದು ಹೋಗಿಬಿಡುತ್ತಿದ್ದ. What would have been the fate of the government? ಕೆಐಎಡಿಬಿ ಆ್ಯಕ್ಟ್ ಕೆಳಗೆ ನೀವು ರೀ-ಕನ್ವೆ ಮಾಡುವುದಕ್ಕೆ ಬರುವುದಿಲ್ಲ. ವಾಪಸ್ ಕೊಡುವುದಕ್ಕೆ ಬರುವುದಿಲ್ಲ. ನೀವು ಅದನ್ನು ಯಾವುದೇ industrial purpose ಗೆ acquire ಮಾಡಿಲ್ಲ. ಆತ ದುಡ್ಡು ತುಂಬಿಲ್ಲ. ತಾವೇ ನೋಟ್ ಹಾಕಿದ್ದೀರಿ. He has not deposited even a pie ಅಂತ. ಹೇಗೆ acquire ಮಾಡಿದಿರಿ? ಯಾವ ಆಫೀಸರ್ಸ್ ಶಾಮೀಲಾಗಿದ್ದಾರೆ? Please bring him here,I demand. ಒಂದು ಕಡೆ ರೈತರನ್ನು ತಿಂದಿರುವುದರ ಜೊತೆಗೆ ಇದರೊಳಗೆ ಶಾಮೀಲಾಗಿರುವ ಆಫೀಸರ್ಸ್ ಅನ್ನು ತಾವು ಇಲ್ಲಿ ಕಟಕಟೆ ಕಟ್ಟಿ ನಿಲ್ಲಿಸಬೇಕು. ಅವೊತ್ತು ಏನಾದರೂ ಈ ರಾಜ್ಯದ ಜನತೆಗೆ ಇದೊಂದು ಶಾಸನಸಭೆ, ಇಲ್ಲಿ ನ್ಯಾಯ ಸಿಗುತ್ತದೆಂಬ ಗೌರವ ಬರುತ್ತದೆ, ತನ್ನಿ. ಈಗ ಅವನು ಬರೆದರಲ್ಲಾ, ಪಾಪ, ಅವರು ತಪ್ಪಿತಸ್ಥರಲ್ಲವೆಂದು ಇಟ್ಟುಕೊಳ್ಳೋಣ. ಅವರು ಮಾಡಿದವರು ಯಾರು ಎಂಬುದನ್ನು ಇಲ್ಲಿ ತಂದು ನಿಲ್ಲಿಸಬೇಕು. ಒಂದು witness box stand ಹಾಕಿಸಿ. ನಾವು ನಿಂತುಕೊಂಡು ಮಾತನಾಡುತ್ತೇವೆ. ಇದೆಲ್ಲವನ್ನೂ intentional ಆಗಿ ಮಾಡಿದ್ದು. ಇದರಲ್ಲಿ ಏನೂ ಇಲ್ಲ ಎರಡನೆಯದಾಗಿ, ಏನು ಸರ್, What was the Company worth? 522 ಕೋಟಿ ರೂ. ನನ್ನದು Share Capital ಇದೆಯೆಂದು ನಿಮ್ಮ ಹತ್ತಿರ ಕಂಟ್ರಾಕ್ಟ್‌ಗೆ ಬಂದಿದ್ದಾರೆ. Plus ನಿಮ್ಮ ಹತ್ತಿರ ಜನರೇಟ್ ಮಾಡುವ ಒಂದು ಸಾವಿರ ಚಿಲ್ಲರೆ ಕೋಟಿ ರೂಪಾಯಿ ಇಟ್ಟುಕೊಂಡು, ನಾನು ಈ ರೋಡ್ ಮಾಡುತ್ತೇನೆ, ಪ್ರಾಜೆಕ್ಟ್ ಮಾಡುತ್ತೇನೆಂದು ಹೇಳಿಕೊಂಡು ಬಂದಿದ್ದಾರೆ. ಇವೊತ್ತಿನವರೆಗೂ ಆತನ ಅಕೌಂಟ್‌ನಲ್ಲಿ ಯಾವತ್ತಾದರೂ ದುಡ್ಡು ಇದೆಯೆಂದು ತಾವು ಕೇಳಿದ್ದೀರಾ? ಯಾವತ್ತಾದರೂ ಕೇಳಬೇಕಲ್ಲಾ. ಇಷ್ಟೆಲ್ಲಾ ಮಾಡುತ್ತೇನೆಂದರೆ, 'ಎಲ್ಲಪ್ಪ, ಅಗ್ರಿಮೆಂಟ್ ಪ್ರಕಾರ ತೋರಿಸು' ಎಂದು ಕೇಳಬೇಕಲ್ಲಾ. ನಾನು ನಿಮಗೆ ಚಾಲೆಂಜ್ ಮಾಡುತ್ತೇನೆ. ನಿಮ್ಮ ಸರ್ಕಾರಿ ಜಮೀನು 1,900 ಎಕರೆಯನ್ನು ಆತ ಐಸಿಐಸಿಐ ಬ್ಯಾಂಕ್‌ಗೆ pledge ಮಾಡುವುದಕ್ಕೆ ಮೊದಲೇ ಆತನ ಅಕೌಂಟ್‌ನಲ್ಲಿ 20 ಕೋಟಿ ರೂ. ಕೂಡ ಇರಲಿಲ್ಲ. Rs. 52 Crors he was supposed to be having Share Capital. ನನ್ನದು 522 ಕೋಟಿ ರೂಪಾಯಿಗಳಿದೆ, ನಾನು ಇಂತಾದ್ದರಲ್ಲಿ ಒಂದು ಸಾವಿರ ಚಿಲ್ಲರೆ ಕೋಟಿ ರೂ. ಜನರೇಟ್ ಮಾಡುತ್ತೇನೆ. ಹಾಗಾಗಿ, ಈ ಪ್ರಾಜೆಕ್ಟ್ ಮಾಡುತ್ತೇನೆಂದು ಅವರು ನಿಮ್ಮ ಹತ್ತಿರ ತೆಗೆದುಕೊಂಡಿರುವ ಪ್ರಾಜೆಕ್ಟ್ ಇದಾಗಿದೆ. ಇಲ್ಲವೇ ಇಲ್ಲ. ಆತ ಸರ್ಕಾರಕ್ಕೆ ಒಂದು ಕಾಗದ ಕೊಡುತ್ತಾನೆ.

'ನೀವೇನಾದರೂ ಈ ಜಮೀನನ್ನು pledge ಮಾಡುವುದಕ್ಕೆ ಪರ್ಮಿಟ್ ಕೊಡದೇ ಹೋದರೆ ನನಗೆ ಕೆಲಸ ಮಾಡುವುದಕ್ಕೆ ದುಡ್ಡಿಲ್ಲ. ನೀವೇನಾದರೂ Letter of Comfort ಕೊಡದೇ ಹೋದರೆ, ನಾನು ಕೆಲಸ ಮಾಡುವುದಿಲ್ಲ'. ನಿಮ್ಮದೇ ಜಾಗ, ಸರ್ಕಾರಿ ಜಾಗ, ಐಸಿಐಸಿಐ ಬ್ಯಾಂಕ್‌ನ ದುಡ್ಡು, ನಿಮ್ಮದೇ Letter of Comfort. ನಿಮ್ಮ ದುಡ್ಡು ಕೊಟ್ಟು, ನಿಮ್ಮ ಜಾಗ ಕೊಟ್ಟು, ನಿಮ್ಮ ಗ್ಯಾರಂಟಿ ಕೊಟ್ಟು, ಅವರನ್ನು ಕರೆದುಕೊಂಡು ಬಂದು ನಮ್ಮ ರೈತರ ತಲೆ ಬೋಳಿಸುವ ಕೆಲಸ ಮಾಡಬೇಕಾಗಿತ್ತೇ ಎಂಬುದೇ ನಮ್ಮ ಪ್ರಶ್ನೆ. When he had no investment to make. ದುಡ್ಡಿಗೆ ನೀವೇನು ಮಾಡುತ್ತೀರೆಂದು ಅವರು ಹೇಳುತ್ತಾರೆ. ರೆಡ್ಡಿಯವರು ಓದುತ್ತಿದ್ದರು. UTI ನವರು ಆತನಿಗೆ assist ಮಾಡಿದ್ದಾರೆ. Funds generation ಗೆ ಏನು ಹೇಳುತ್ತಾರೆ? ಎಲ್ಲೆಲ್ಲಿ ಎಂದು ಅವರು ಆಗಲೇ ಹೇಳಿದರಲ್ಲಾ ಬೆಂಗಳೂರು ಸಿಟಿಯಲ್ಲಿ I have a total area of 1,019 acres of saleable land. It is on record. ಆತನ financial background ಇರುವ ಪ್ರಾಜೆಕ್ಟ್ ರಿಪೋರ್ಟ್ ಇದಾಗಿದೆ. 1,019 ಎಕರೆ ಮತ್ತು ಟೌನ್‌ಶಿಪ್‌ನಲ್ಲಿ Grand Total 1,998 ಎಕರೆ saleable area ನನ್ನ ಹತ್ತಿರ ಇದೆ. I will sell this. ಏನು ಸರ್, ಈಗ ನಡೆಯುತ್ತಿದೆ? ಆತನ requirements, Out of the total Government land of 2,446 acres, 2.021 acres have been leased by the Government to the Company for a period of 40 years from due date for financial closure. The company would be buying the balance of 315 acres of Government land by paying the guidance value for such land applicable for the year 1999-2000. ಇದೊಂದು ದೊಡ್ಡ ದುರಂತ. The guideline value of 1999-2000 upto 2014 ಎಂದು ಕೊಟ್ಟಿದ್ದಾರಲ್ಲಾ, ಸರ್ಕಾರದವರು ಇವರಿಗೆ ಆದೇಶ ಕೊಡುತ್ತಾರೆ. 2014ನೇ ಇಸವಿಯವರೆಗೆ ಆತ ಜಮೀನು ತೆಗೆದುಕೊಂಡರೆ, 1999–2000ನೇ ಇಸವಿಯ guideline value ನಲ್ಲೇ ಅವರಿಗೆ ನಾವು ಜಾಗ ಕೊಡಬೇಕಂತೆ! ರಮೇಶ್‌ಕುಮಾರ್‌ರವರೆ, ರೈತರದು ಮನೆ ಇದೆಯೇ? ನಮ್ಮದೇನಾದರೂ ಮನೆ ಉಳಿದುಕೊಳ್ಳುತ್ತದೆಯೇ? Even after 15 years, I havae to take the guideline value of 1999. ಇಂತಹ ಅಗ್ರಿಮೆಂಟ್‌ಗಳನ್ನು ನೀವು ಮಾಡಿ majority of the land involved in phase-I of the project have been notified under-Section 28(4) KIADB Act. ಇಲ್ಲಿ ಆತ ಕ್ಲೀನ್ ಆಗಿ ಹೇಳಿಕೊಂಡು ಬರುತ್ತಾನೆ. ನಾನು ಇಲ್ಲಿಂದ ಬರುತ್ತೇನೆ, ನಾನು ಹೀಗೆ ದುಡ್ಡು ಮಾಡುತ್ತೇನೆ, ನನ್ನ ಹತ್ತಿರ ಈ ಪ್ರಾಜೆಕ್ಟ್‌ನಲ್ಲಿ ಏನಿದೆಯೆಂದು ಹೇಳುತ್ತಾನೆ. ಆತ ಯಾವತ್ತೂ 522 ಕೋಟಿ ರೂ. ಇದೆಯೆಂದು ತೋರಿಸಲೇ ಇಲ್ಲ. ಆಥ maximum ತೋರಿಸಿರುವುದು 122 ಕೋಟಿ ರೂ. ಮಾಡಬಹುದೆಂದು. ನಾನು ಮಾಡುತ್ತೇನೆಂದು ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದರಲ್ಲಿ ಎರಡು ಮಾತಿಲ್ಲ. Assumptions in calculating the revenue from the advance sale of land. Details of revenue to be realised

from advance sale of developed land during the construction period is provided below. The means of finance also involves from advance sale of real estate during the implementation period. This is estimated at Rs. 13,615 million based on the land development plan prepared by NICE Company. This would be realised by sale of developed land at various inter changes carved out of released space for plazas and other amenities. Details of revenue to be realised from advance sale of developed land during the constructionperiod provided as under:

"Hosur Road 27.64 acres, rate 11.93 million per acre; Bannerghatta Road 41.62 acres, rate 9.80 million per acre; Mysore Road 49.05 acre, realisation at Rs. 11 million per acre; Link Road 16.93 acres, rate 17.65 million per acre, Kanakapura Road 37.24 acre, rate 8.58 million per acre, Tumkur Road 39.39 acres, rate 8.5 acres, Magadi Road 33.41 acres, rate 8.33. Assumptions:- It has been assumed that the sale would be conducted over nine months period and 50% booking amount would be realised at the beginning and remaining amout would be paid at the end of six months, when registration would be over"

ನೈಸ್ ಕಂಪನಿಯವರಿಗೆ ಇಷ್ಟು ಜಮೀನು ಮಾರುವುದಕ್ಕೆ ಅಧಿಕಾರ ಕೊಟ್ಟವರ್ಯಾರು? ಹೇಗೆ ಬಂತು? Project appraisal ನಲ್ಲಿ ಆತ ಓಪನ್ ಆಗಿ ಹೇಳಿದನೆಂದರೆ, ಈ ದಾಖಲೆ ಮುಂದೆ ಇರಲಿಲ್ಲವೇ? MoU ನಲ್ಲಾಗಲಿ, ಅಗ್ರಿಮೆಂಟ್‌ನಲ್ಲಾಗಲಿ, Framework ನಲ್ಲಾಗಲಿ, ಮತ್ತೊಂದು ಕಡೆಯದಾಗಲಿ, ಆತ ಸೈಟ್ ಮಾಡುವುದಾಗಲಿ, real estate business ಮಾಡುವುದಾಗಲಿ, ಪ್ರಶ್ನೆ ಇಲ್ಲ. ನಾನು ಮೊದಲೇ ಹೇಳಿದೆ: Only 45% of the Housing, ಎಲ್ಲಿ ಆತ ಟೌನ್‌ಶಿಫ್ ಮಾಡುತ್ತಿದ್ದನೋ, ಅಲ್ಲಿ ಬಿಟ್ಟು ಇನ್ನ್ಯಾವುದೋ ಅಧಿಕಾರ ಯಾವುದೇ ಅಗ್ರಿಮೆಂಟ್ ಕೆಳಗೆ ಆತ ಬರದಿದ್ದರೆ he places a document. ಇಷ್ಟು ನಾನು saleable property ಇಟ್ಟುಕೊಂಡಿದ್ದೇನೆ, ನನಗೆ ಇಷ್ಟು ಹಣ ಬರುತ್ತಿದೆ ಹೀಗೆ ಮಾಡುತ್ತೇನೆಂದು ಹೇಳುತ್ತಾನೆ. ಐವತ್ತು ಪರ್‌ಸೆಂಟ್ ಅಪ್ಲಿಕೇಷನ್ ಕೊಟ್ಟಾಗ ಕೊಟ್ಟುಬಿಡಬೇಕಂತೆ, ನೋಡಿ ಒಂದು ಐದು ಹತ್ತು ಎಕರೆ ಬೇಕು ಎಂದರೆ ನೀವು ಅಪ್ಲಿಕೇಷನ್ register ಮಾಡುವಾಗ ಅರ್ಧ ಕಟ್ಟಿ ಒಂದು ಅಪ್ಲಿಕೇಷನ್ register ಮಾಡಿಸಿ. ಒಂಭತ್ತು ತಿಂಗಳ ಒಳಗೆ ಇನ್ನು ಅರ್ಧ ಕೊಟ್ಟು register ಮಾಡಿಸಿಕೊಳ್ಳಿ. Is it noa a fraud? ಇದು fraud ಅಲ್ಲವೇ? ಇದನ್ನು ಕೇಳಬಾರದೆ? ಇದು ಶಾಸನ ಸಭೆಯಲ್ಲವೆ?

ಅಧ್ಯಕ್ಷರು : ಇದರ ಬಗ್ಗೆ ಏನಾದರೂ ಕೋರ್ಟ್‌ನಲ್ಲಿ ಅಥವಾ ಸೋಮಶೇಖರ ರೆಡ್ಡಿ ಕೇಸ್‌ನಲ್ಲಿ ನ್ಯಾಯಾಲಯದ ಗಮನಕ್ಕೆ ತಂದಿದ್ದರೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ. ನಾವು ತರಲಿಲ್ಲ. ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದೇನೆ. ಯಾವುದೇ contractual obligations ಅನ್ನು ನಾವು ಕೋರ್ಟ್‌ನಲ್ಲಿ question ಮಾಡಲಿಲ್ಲ. ನಮಗೆ intension ಇರಲಿಲ್ಲ ಅವರ contract ನಿಲ್ಲಬೇಕು ಮೈಸೂರು ಬೆಂಗಳೂರು ಕಾರಿಡಾರ್ ಕೆಲಸವನ್ನು ನಿಲ್ಲಿಸಬೇಕು ಎಂಬ intension honest ಆಗಿ ನಮಗೆ ಇರಲಿಲ್ಲ. ನಮಗೆ ಇದ್ದದ್ದು ಲ್ಯಾಂಡ್ ಜಾಸ್ತಿ ಏನು ಅಕ್ವೈರ್ ಆಗಿದೆ, ಅನ್ಯಾಯ ರೈತರಿಗಾಗಿದೆ, ಅನಗತ್ಯವಾದ ಜಾಗಗಳನ್ನು ನೀವು ಅಕ್ವೈರ್ ಮಾಡಿದ್ದೀರಿ ಅದನ್ನು ವಾಪಸ್ ಕೊಡಿ ಎಂಬ ಡಿಮ್ಯಾಂಡ್ ಬಿಟ್ಟರೆ ಇನ್ನಾವುದನ್ನೂ ನಾವೂ ಕೋರ್ಟ್ ಮುಂದೆ ಹೇಳುವುದಕ್ಕೆ ಹೋಗಿಲ್ಲ. And we had no case before court to say all these. ಏಕೆಂದರೆ ಕೋರ್ಟ್ ಈಗಾಗಲೇ ಹೇಳಿಬಿಟ್ಟಿದೆ. Framework agreement ಪ್ರಕಾರವೇ ನೀವು ಆ ಜಮೀನನ್ನು ಕೊಡಬೇಕು, Framework agreement ಪ್ರಕಾರನೇ ಅವರು ಕೆಲಸ ಮಾಡಬೇಕೆಂದು.

Mr. Speaker : Framework agreement ಪ್ರಕಾರ ಅಕ್ವೈರ್ ಆಗಬೇಕು, ಅಷ್ಟನ್ನೇ ಅಕ್ವೈರ್ ಮಾಡಿ ಆತನಿಗೆ ಕೊಡಬೇಕು. ಇದು ಒಂದನೆಯ point. Nearly 2000 acres, ಆಥ ಮಾರಿಕೊಳ್ಳಲು ಅವಕಾಶ ಇದೆಯೆಂದು ಅವರ ಬ್ಯಾಂಕರ್ಸ್ ಹೇಳಿದ್ದಾರೆಂದು ಹೇಳುತ್ತಿದ್ದೀರಿ. ಅದರ ಬಗ್ಗೆ ಕೋರ್ಟಿನ ಗಮನಕ್ಕೆ ಏನಾದರೂ ತಂದಿದ್ದೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಇದ್ಯಾವುದನ್ನೂ ನಾವು ತರಲಿಲ್ಲ. ಏಕೆ ತರಲಿಲ್ಲ Even after court decision, ಅವರು ಮಾನ್ಯ ಕುಮಾರ್‌ಸ್ವಾಮಿಯವರಿಗೆ ಕಾಗದ ಬರೆಯುತ್ತಾರೆ, ಬಾರಿ ಚೆನ್ನಾಗಿ ಅವರು ಪತ್ರವನ್ನು ಬರೆಯುತ್ತಾರೆ. ಅವರು ಅದನ್ನೇನು ಹೇಳುವುದೇ ಇಲ್ಲ. ನೋಡಿ. Hon'ble High Court of Karnataka, on May 3rd 2005, and has affirmed by the Hon'ble Supreme Court on April 20, 2006 are not being implemented much in lateral spirit. A copy of the judgment of the Hon'ble Supreme Court and a copy of the judgment of Hon'ble Court are enclosed. ಏನು Hon'ble Court ಹೇಳಿದೆ ಆ ಜಮೀನನ್ನು ನಮಗೆ ಕೊಡಿ ಎಂದಷ್ಟೇ ಬರೆಯುತ್ತಾರೆ ಬಿಟ್ಟರೆ ಈ ಯಾವುದೇ ವಿಷಯವನ್ನು ಅವರು ಹೇಳಲಿಲ್ಲ. ಅವರು ಹೇಳಿದ್ದಿದ್ದರೆ ನಾವು ಚಾಲೆಂಜ್ ಮಾಡುತ್ತಿದ್ದೆವು.

ಶ್ರೀ ಕೆ.ಎನ್. ರಾಜಣ್ಣ : ;ಮಾನ್ಯ ಅಧ್ಯಕ್ಷರೆ, ಅದರಲ್ಲಿ ಬರೀ ಜಮೀನು ಕೊಡಿ ಎಂದು ಬರೆಯುವುದಲ್ಲ. ಯಾವ್ಯಾವ ಜಮೀನನ್ನು ಎಷ್ಟೆಷ್ಟು ಅವಧಿಯಲ್ಲಿ ನೀವು ಕೊಡಬೇಕು ಎನ್ನತಕ್ಕದ್ದನ್ನು ಸರ್ಕಾರವು ಆ ರೀತಿ ಆದೇಶ ಮಾಡುವುದಿಲ್ಲ. ಅದಕ್ಕಿಂತ ಹೆಚ್ಚು ಕಟ್ಟುನಿಟ್ಟಾಗಿ ಅದರಲ್ಲಿ ಅವರು ಬರೆಯುತ್ತಾರೆ. 27 ಪೇಜಿನಷ್ಟು ಬರೆದಿದ್ದಾರೆ. ಆ 27 ಪೇಜಿನಲ್ಲಿ ನೀವು ಇಂತಿಂಥ ಜಮೀನನ್ನು ಇಷ್ಟು ದಿವಸದಲ್ಲೇ ಅಕ್ವೈರ್ ಮಾಡಿ ಹ್ಯಾಂಡ್ ಓವರ್ ಮಾಡಬೇಕು. That is the High Court order ಎಂದು ಅದರಲ್ಲಿ ಬರೆಯುತ್ತಾರೆ. ಅವರಿಗೆ ಎಷ್ಟು adamancy ಇದೆ ಎಂಬುದು ಆ ಪತ್ರವನ್ನು ಓದಿದರೆ ಗೊತ್ತಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆತನ ಮಾತಿನ ಪ್ರಕಾರವೇ Under closure 4(1)(i) of the FWA ಅದೇ Framework agreement ಪ್ರಕಾರ ಆತ ಕೇಳುತ್ತಾನೆ. ಈ Framework agreement ಪ್ರಕಾರ ಈಗಾಗಲೇ ಅವನಿಗೆ ಬೆಂಗಳೂರಿನಲ್ಲಿ 430 ಎಕರೆ excess land ಇದೆ. Framework agreement ಪ್ರಕಾರ ಏನು ಆತನಿಗೆ ಬೆಂಗಳೂರಿನಲ್ಲಿ ಲ್ಯಾಂಡ್‌ನ್ನು ನಾವು ಕೊಡಬೇಕಾಗಿದೆ, I am sure, 430 acres are in excess possession. 430 ಎಕರೆ ವಾಪಸ್ ಕೊಡಬೇಕಾಗಿದ್ದ ಮನುಷ್ಯ ಇನ್ನೂ ಬಹುಶಃ 1000 ಚಿಲ್ಲರೆ ಎಕರೆಯನ್ನು ಬೆಂಗಳೂರಿನಲ್ಲಿ ಡಿಮ್ಯಾಂಡ್ ಮಾಡುತ್ತಿದ್ದಾನೆ. ಇಂತಿಂಥ ಭಾಗದಲ್ಲಿ ನಮಗೆ ಇಷ್ಟು ಜಾಗವನ್ನು ನಮಗೆ ಅಕ್ವೈರ್ ಮಾಡಿಕೊಡಿ. ಇಲ್ಲಿ ಅದರ ಡೀಟೇಲ್ಸ್ ಇದೆ. ಮಾನ್ಯ ರಾಜಣ್ಣನವರು ಹೇಳಿದಂತೆ he has written everything. ಎಲ್ಲೆಲ್ಲಿ ಏನೇನು ಕೊಡಬೇಕು ಎಂದು. ಏನಾಯಿತು ಸರ್ಕಾರ? ಕೋರ್ಟ್ ಆರ್ಡರ್ ಆಗಿದೆ ಎಂದು ಆತ ಹೆದರಿಕೊಂಡು ಬಂದುಬಿಟ್ಟರೆ ಏನಾಗಿದೆ ಎಂಬುದನ್ನೂ ಸಹ ತೆಗೆದು ನೋಡದೆ ನಾವು ಹೆದರಿಕೊಂಡು ಸರ್ಕಾರ ನಡೆಸತಕ್ಕ ಸ್ಥಿತಿ ಬರಬೇಕೆ? ಏನಾಗಿದೆ ಕೋರ್ಟ್ ಆರ್ಡರ್? ಆತನೇ ಬರೆಯುತ್ತಿದಾನಲ್ಲಾ. ಆತನೇ ಕೋರ್ಟ್‌ಗೆ ನಮಗೆ ಇಷ್ಟಿಷ್ಟು ಜಾಗ ಬೇಕೆಂದು ಅಫಿಡವಿಟ್ ಹಾಕಿದ್ದಾನಲ್ಲಾ. ಆ ಜಾಗದಲ್ಲೇ ಆತ excess ಇದ್ದಾನೆಂದರೆ, ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಡಿಮ್ಯಾಂಡ್ ಮಾಡುತ್ತೇನೆ, ಮೊಟ್ಟಮೊದಲನೆಯ ಕೆಲಸ ಆ 430 ಎಕರೆಯನ್ನು ಸರ್ಕಾರದ ಪೊಜಿಷನ್‌ಗೆ ತೆಗೆದುಕೊಳ್ಳಬೇಕು. We are aware, 430 acres is in excess possession. ಬೆಂಗಳೂರಿನಲ್ಲಿ ಆತನಿಗೆ ಇನ್ನೂ ಜಮೀನು ಕೊಡುವ ಪ್ರಶ್ನೆ ಎಲ್ಲಿ ಬರುತ್ತದೆ? ಬರೆಯುತ್ತಿದ್ದಾರೆ. ನಮಗೆ ನೀವೇನಾದರೂ ಕೊಡದೇ ಹೋದರೆ ನಿಮ್ಮನ್ನು contempt ಹಾಕಿಬಿಡುತ್ತೇವೆ. ಕುಮಾರಸ್ವಾಮಿಯವರು ಲಾಯರ್‌ಗಿರಿ ಮಾಡಿಲ್ಲ. contempt ಎಂದ ತಕ್ಷಣ ಹೆದರಿಕೊಂಡುಬಿಡುತ್ತೀರಿ, ನಾನು ರಾಜೀನಾಮೆ ಕೊಟ್ಟುಬಿಡುತ್ತೇನೆ, ನಾನಿರುವುದು ಇನ್ನು 15 ದಿವಸ ಎಂದು ಹೇಳುತ್ತೀರೆಂದು ಆತನಿಗೆ ಗೊತ್ತು. ಹೆದರಿಸುತ್ತಾರೆ. ಹೆದರಿಕೊಳ್ಳಿ ಸಾರ್. What is contempt? ನಮಗೂ ಸಹ ಲಾಯರ್‌ಗಿರಿ ಮಾಡಿ ಓದಿ enroll ಆಗಿ ಅನುಭವವಿದೆ. ಸುಪ್ರೀಂಕೋರ್ಟ್ ಡಿಸಿಷನ್, ಹೈಕೋರ್ಟ್‌ನ ಡಿಸಿಷನ್ ಅದರ ಮೆರಿಟ್, ಅವರು ಕೊಟ್ಟಿರುವುದು ಸರಿಯೋ ತಪ್ಪೋ ಎಂಬ ಬಗ್ಗೆ ಖಂಡಿತ ನಾವ್ಯಾರೂ ಚರ್ಚೆ ಮಾಡುವುದಿಲ್ಲ It is Hon'ble court ನಮಸ್ಕಾರ. ಆ ಡಿಸಿಷನ್ ಪ್ರಕಾರ ನೀವು ತೆಗೆದುಕೊಂಡರೆ ಕರ್ನಾಟಕ ರಾಜ್ಯದ ಜನರಿಗೆ ನೀವು ಹೆದರಿಕೊಂಡು ಅನ್ಯಾಯ ಮಾಡುತ್ತಿದ್ದೀರೆಂದು ನಾನು ಚಾರ್ಜ್ ಮಾಡುತ್ತೇನೆ. ನೀವು ಆತನ ಕಾಗದಕ್ಕೆ ಹೆದರಿ ರೈತನ ಜಮೀನನ್ನು ವಾಪಸ್ ಪಡೆಯುವಲ್ಲಿ ವಿಫಲರಾಗುತ್ತಿದ್ದೀರಿ. ನೀವು ಯಾವುದೋ ಒಂದು ಕೋರ್ಟ್ ಆರ್ಡರ್‌ನ್ನು ಭೂತಪ್ಪ ಎಂದು ತಿಳಿದುಕೊಂಡು ಆತನ ಹತ್ತಿರ ಇರುವ excess ಲ್ಯಾಂಡ್‌ನ್ನು ತೆಗೆದುಕೊಳ್ಳದೆಯೇ ಅನ್ಯಾಯ ಮಾಡುತ್ತಿದ್ದೀರಿ. ನೀವು ಆತ ಕಾಂಕ್ರೀಟ್ ಮಾಡುತ್ತೇವೆ ಎನ್ನುವ ರೋಡನ್ನು ಆಸ್ಫಾಲ್ಟ್ ಮಾಡಿದರೂ ಕೂಡ contract ಅನ್ನು violate ಮಾಡಿದ್ದೀಯಾ ಎಂದು ಕೇಳುವುದರಲ್ಲಿ ಹಿಂಜರಿಯುತ್ತಿದ್ದೀರಿ ಏಕೆ? Entire condition of the road, cement concrete road ಸರ್ ಇದು? ಇಲ್ಲಿ cement concrete road inaugurate ಆಯಿತೆ?

ಶ್ರೀ ಹೆಚ್. ಆಂಜನೇಯ : ಡಾಂಬಾರ್‌ದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನೇನೂ ನೋಡಲಿಲ್ಲ. ಅದೇನು ಸಿಮೆಂಟ್ ರೋಡ್‌ನ ಕಲರ್ ಕಾಣಲಿಲ್ಲ. ಅದೇನೋ ಸ್ವಲ್ಪ ಕಪ್ಪಾಗಿ ಕಂಡುಬಂತು. ಏನೋ ಹೊಸ ಸಿಮೆಂಟ್‌ನ್ನು ತಂದು ಆ ಬಣ್ಣದಲ್ಲೇನಾದರೂ ಹಾಕಿದ್ದಾರೋ ಗೊತ್ತಿಲ್ಲ! ಆಸ್ಫಾಲ್ಟ್ ಹಾಕಿದ್ದಂತೆ ಕಂಡುಬಂತು.

ಶ್ರೀ ಸಿದ್ದು ಸವದಿ : ಇಷ್ಟೊಂದು ಜಮೀನನ್ನು ಅಕ್ವೈರ್ ಮಾಡಿಕೊಂಡು ಆತನಿಗೆ ಏತಕ್ಕಾಗಿ ಹ್ಯಾಂಡ್‌ಓವರ್ ಮಾಡಿದರೊ, ಆತ ಖಾಸಗಿಯಾಗಿ ಮಾರಾಟ ಮಾಡಿಕೊಳ್ಳಲು ಸರ್ಕಾರವೇನಾದರೂ ಪರವಾನಗಿ ಕೊಟ್ಟಿತ್ತೇ ಅಥವಾ frame work agreement ನಲ್ಲಿ ಆ ಕಂಡೀಷನ್ ಇತ್ತೇ? ಆ ರೀತಿ ಪರ್ಮಿಷನ್ ಅವರಿಗೆ ಯಾರು ಕೊಟ್ಟರು?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸವದಿಯವರೇ, ಹೋದ ಸಲ ನಾನು ಅದರ ಬಗ್ಗೆ ಮಾತನಾಡುವಾಗ ಹೇಳಿದ್ದೆ. ಒಂದು ಮೀಟಿಂಗ್‌ನಲ್ಲಿ ಆತ ಒಂದು ಪ್ರಪೋಸಲ್ ಕೊಡುತ್ತಾರೆ. ನನಗೆ ಈ ಪ್ರೊಜೆಕ್ಟ್ ಮಾಡುವುದು ಬಹಳ ಕಷ್ಟವಾಗಿಬಿಟ್ಟಿದೆ. ಹೇಗಾದರೂ ಮಾಡಿ ನನ್ನ ಹತ್ತಿರ ಇರುವ excess land ನ್ನು ಸೈಟ್ ಮಾಡಿ ಹಂಚಲು ಒಂದು ಅವಕಾಶ ಮಾಡಿಕೊಡಿ. ಹಾಗಾದರೆ ನನಗೆ ಸ್ವಲ್ಪ realization ಚೆನ್ನಾಗಿ ಆಗುತ್ತದೆ. ನಾವು ಸ್ವಲ್ಪ ದುಡ್ಡು ಮಾಡಿಕೊಂಡು ಈ ಕೆಲಸವನ್ನು ಮಾಡಬಹುದು ಎಂದು. With due respect, ಎಸ್.ಎಂ. ಕೃಷ್ಣರವರು ಆ ಮೀಟಿಂಗ್‌ನ್ನು chair ಮಾಡಿದ್ದರು. ಅವರು ಅದಕ್ಕೆ ಹೂಂ ಎಂದು ಹೇಳಲಿಲ್ಲ ಉಹೂಂ ಎಂದು ಹೇಳಲಿಲ್ಲ. It was taken as agreed.

ಶ್ರೀ ಆರಗಜ್ಞಾನೇಂದ್ರ : ಮೌನಂ ಸಮ್ಮತಿ ಲಕ್ಷಣಂ ಅಂತಲೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಎಂ.ಎಸ್. ಕೃಷ್ಣರವರು ಮತ್ತು ಬಿ.ಎಸ್. ಪಾಟೀಲ್‌ರವರು ಆ ಮೀಟಿಂಗ್‌ನಲ್ಲಿ present. ಆ ಮೀಟಿಂಗ್‌ನಲ್ಲಿ ಆತ ಒಂದು ಮನವಿಯನ್ನು ಕೊಡುತ್ತಿದ್ದಾನೆ.

Sri R. Dinesh Gundu Rao : Excess land ಬಗ್ಗೆ ಇಷ್ಟು ಸ್ಪಷ್ಟವಾಗಿ ಮಾನ್ಯ ಮಾಧುಸ್ವಾಮಿಯವರು ಹೇಳುತ್ತಿದ್ದಾರೆ. ಈ ರೀತಿ excess land ಇದೆ ಎಂದು ಸುಪ್ರೀಂಕೋರ್ಟ್ ಮುಂದೆ ಏಕೆ ಕನ್‌ವಿನ್ಸ್ ಮಾಡುವುದಕ್ಕಾಗಲಿಲ್ಲ? ಸುಪ್ರೀಂಕೋರ್ಟ್‌ನ ಜಡ್ಜ್‌ರವರೇಕೆ ಇದಕ್ಕೆ ಕನ್‌ವಿನ್ಸ್ ಆಗಲಿಲ್ಲ? Why was he not convinced? ಇಷ್ಟೊಂದು documentation ತಾವು ಚೆನ್ನಾಗಿ ಹೇಳುತ್ತಿದ್ದೀರಿ. ಯಾವ ಕಾರಣಕ್ಕಾಗಿ ಸುಪ್ರೀಂ ಕೋರ್ಟ್ ಆ ರೀತಿ ಜಡ್ಜ್‌ಮೆಂಟ್ ಕೊಟ್ಟಿತು ಎಂಬ ಬಗ್ಗೆ ಸಹ ತಾವು ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಆವತ್ತಿನಿಂದ ಬಿಚ್ಚಿ ಬಿಚ್ಚಿ ಹೇಳುತ್ತಿದ್ದೇನೆ. ನಾವು ಸುಪ್ರೀಂ ಕೋರ್ಟ್ ಮುಂದೆ ಏನು ಅರ್ಜಿಯನ್ನು ಹಾಕಿದ್ದೆವೋ It is an identical petition of Somashekara Reddy. ಸುಪ್ರೀಂ ಕೋರ್ಟ್ ಮುಂದೆ ನಾನು ಹಾಕುವುದಕ್ಕೂ ಮೊದಲೇ

ಸೋಮಶೇಖರ ರೆಡ್ಡಿಯವರು ಇಲ್ಲಿ ಒಂದು ಕೇಸನ್ನು ಹಾಕಿದ್ದರು. Contract question ಮಾಡಿದ್ದರು Excess land question ಮಾಡಿದ್ದರು. ಆ ಕೇಸ್‌ನಲ್ಲಿ High Court of Karnataka Frame work agreement ಸರ್ಕಾರ ಮಾಡಿರುವುದರಿಂದ wisdom of the government ಯಾರೂ question ಮಾಡುವುದಕ್ಕಾಗುವುದಿಲ್ಲ Government has taken a decision in the interest of the state ಎಂದು ಒಂದು ಡಿಸಿಷನ್ ಕೊಟ್ಟಿತು.

ಶ್ರೀ ಆರ್. ದಿನೇಶ್ ಗುಂಡೂರಾವ್ : ಸರ್, Framework agreement ತಾನೇ ಹೇಳುತ್ತಿರುವುದು. It is going beyond the framework agreement. Senior Counsel ಸರ್ಕಾರದ ಪರವಾಗಿ ಯಾರಾದರೊಬ್ಬರು ಮಾತನಾಡಬಹುದಿತ್ತು. ತಾವು ಒಬ್ಬರೇ ಅಲ್ಲ, ಸರ್ಕಾರದ Counsel ಕೂಡ ಮಾತನಾಡಬಹುದಾಗಿತ್ತಲ್ಲಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಸೋಮಶೇಖರ್‌ರೆಡ್ಡಿಯವರು framework agreement ನ್ನೇ ಚಾಲೆಂಜ್ ಮಾಡಿದ್ದರು Try to understant. ನಾನು framework agreement ಚಾಲೆಂಜ್ ಮಾಡಲಿಲ್ಲ. Framework agreement ನ್ನೇ ಚಾಲೆಂಜ್ ಮಾಡಿ ಸೋಮಶೇಖರರೆಡ್ಡಿಯವರು ಕೇಸ್ ಹಾಕಿದ್ದರು. The entire agreement has to be nullified ಎಂದು ಅವರು ಕೇಳಿದ್ದರು. ರಾಜ್ಯಕ್ಕೆ ಮಾರಕವಾಗುತ್ತದೆ ಇದನ್ನು ಕಾಂಟ್ರಾಕ್ಟ್ ಕೊಡಕೂಡದು ಎಂದು ಹೇಳಿದ್ದರು. ಆಗ ಕೋರ್ಟ್ ಒಂದು ಡಿಸಿಷನ್ ಕೊಟ್ಟಿತು. ನಾವೇನು ಮಾಡಿದ್ದೇವೆ framework agreement ನಲ್ಲಿ ಅವರಿಗೆ ಎಷ್ಟು ಜಮೀನಾಗಿದೆ ಎಂಬುದನ್ನು ಹೇಳಲು ಹೋಗದೆ excess land ಏನು ಅಕ್ವೈರ್ ಆಗಿದೆ ಅದನ್ನು ಬಿಟ್ಟುಕೊಡಿ ಎಂದೆವು. res judicata ಎಂಬ ಒಂದು ಪದ ಬಳಸುತ್ತೀರಿ. A decision already taken by the Court cannot be reopened by the same court ಎಂದು ಹೈಕೋರ್ಟ್ ಡಿಸಿಷನ್ ಕೊಟ್ಟಿತು. ಸೋಮಶೇಖರರೆಡ್ಡಿಯವರ ಕೇಸ್‌ನಲ್ಲಿ ಕೊಟ್ಟುಬಿಟ್ಟಿದ್ದೇವೆ.

11.30 A.M.

ಇಲ್ಲಿ res judicata. ಮಾಡಿಕೊಂಡೆವು ಎಂದು, ಇಲ್ಲೇನಾಯಿತು ಎಂದರೆ, ಇಲ್ಲ, ಈಗಾಗಲೇ ಈ ಕೋರ್ಟ್ ತೀರ್ಮಾನವೊಂದನ್ನು ಕೊಟ್ಟಿರುವುದರಿಂದ both the parties ಅಷ್ಟಕ್ಕೇ confine ಆಗಬೇಕು ಎಂದು ಹೇಳಿದರು. ಇದನ್ನು ನಾವು appeal ಮಾಡಿದೆವು. I have no reason to interfere in the Hon'ble High Court's order ಎಂದಷ್ಟೇ ಸುಪ್ರೀಂ ಕೋರ್ಟ್ ಹೇಳಿತು. High Court order ನಲ್ಲಿ interfere ಆಗಲಿಕ್ಕೆ ನನಗೆ ಕಾರಣವಿಲ್ಲ ಎಂದು ಅಲ್ಲಿ ಸ್ಪಷ್ಟವಾಗಿ ಹೇಳಿ ಬಿಟ್ಟಿದ್ದಾರೆ. ಸೋಮಶೇಖರ್ ರೆಡ್ಡಿಯವರ ಕೇಸ್‌ನಲ್ಲಿ ಇಷ್ಟು ಜಮೀನನ್ನು ಅವರಿಗೆ ಕೊಡಬೇಕು, you cannot prevent him ಎಂದು, ಆ framework agreement ಪ್ರಕಾರ ಹೋಗಿರಿ ಎಂದು ಹೇಳಿದೆ. ಸೋಮಶೇಖರ್ ರೆಡ್ಡಿ ಕೇಸ್‌ನಲ್ಲಿ ಇರುವುದನ್ನು ಬಿಟ್ಟರೆ, Supreme Court framework agreement ತರಲಿಲ್ಲ. I have no reason to

interfere ಎಂದು ಅದು ಹೇಳಿತು. High Court order is final. They have taken a decision on par with law. ಇಲ್ಲಿ ಬಂದು ನೀವು ಕೇಳುವುದು ಸರಿಯಲ್ಲ ಎಂದು ಅದು ಹೇಳಿತು. ನಾವು ಇಲ್ಲಿಂದ ಹೋಗಿ ಅಲ್ಲಿ ಅದರ ಟೈಮ್ ವೇಸ್ಟ್ ಮಾಡಿದೆವು ಎಂದು ನಮಗೆ cost ಭರಿಸುವಂತೆ ಕೋರ್ಟ್ ಸೂಚಿಸಿತು. Petitioner will never be penalized or levied fine. Petitioner ಗೆ cost ಹಾಕುತ್ತಾರೆ. ನಮಗೆ ದಂಡ ಹಾಕಿದ್ದಾರೆ ಎಂದರೆ ನೋವಾಗುತ್ತದೆ, strictures ಆಗುತ್ತದೆ. ಮಾನ್ಯ ದಿನೇಶ್‌ರವರೇ, Petitioner ಗೆ ಯಾವ ಕೋರ್ಟ್ ಸಹಾ ದಂಡ ಹಾಕಲಿಕ್ಕೆ ಬರುವುದಿಲ್ಲ. Cost ಭರಿಸುವಂತೆ ಸೂಚಿಸಬಹುದು. ಯಾವುದೇ ಸಿವಿಲ್ ಕೇಸ್ ಅನ್ನು ನೀವು ಹಾಕಿದರೂ, ನೀವು ಎದುರುಗಡೆ ಪಾರ್ಟಿಯವನಿಗೆ ಅವರು assess ಮಾಡಿದ cost ಕೊಡಬೇಕಾಗುತ್ತದೆ. ಇದು ಬಿಟ್ಟು ಅಲ್ಲಿ ಬೇರೇನೂ ಆಗಲಿಲ್ಲ. ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಈಗ ಕೇಳುವುದೇನೆಂದರೆ, ಸರ್ಕಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ನಾನು ನಿಮ್ಮ ಮುಂದಿನ ಚರ್ಚೆಗೆ ಹೋಗುವುದಿಲ್ಲ. ಕಾಂಟ್ರಾಕ್ಟ್ ಮುಂದುವರೆಸುತ್ತೀರೋ, ಬಿಡುತ್ತೀರೋ? ನೀವೇನಾದರೂ ಅವರನ್ನೇ ಇಟ್ಟುಕೊಂಡು ಕೆಲಸ ಮಾಡಿಸಿಕೊಳ್ಳುತ್ತೀರೋ? ಬಿಡುತ್ತೀರೋ? ಮುಖ್ಯಮಂತ್ರಿಗಳಾಗಿ ಇರುತ್ತೀರೋ? ಬಿಡುತ್ತೀರೋ?

ಶ್ರೀ ಸಿದ್ದು ಸವದಿ : ಖಾಸಗಿಯಾಗಿ ಮಾರಾಟ ಮಾಡಲಿಕ್ಕೆ ಮೀಟಿಂಗ್‌ನಲ್ಲಿ ಅವರು ಪರವಾನಿಗೆ ಕೊಟ್ಟರೋ, ಇಲ್ಲವೋ? ಸರ್ಕಾರಿ ಜಮೀನನ್ನು ಅವನಿಗೆ acquire ಮಾಡಿಕೊಟ್ಟು, ಖಾಸಗಿಯಾಗಿ ಮಾರಾಟ ಮಾಡಿಕೊಳ್ಳುವುದಕ್ಕೆ ಪರ್ಮಿಷನ್ ಕೊಡಲಾಯಿತೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ. ಇಲ್ಲವೆಂದು ನಾನು ಆಗಲೇ ಹೇಳಿದೆ.

ಶ್ರೀ ಸಿದ್ದು ಸವದಿ : ಇಲ್ಲವೆಂದು ನೀವು ಸ್ಪಷ್ಟವಾಗಿ ಹೇಳಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ನಿಮಗೆ ಸ್ಪಷ್ಟವಾಗಿ ಹೇಳಿದೆ. ನಾನು ಆ ಮೀಟಿಂಗ್‌ನಲ್ಲಿ ಇದ್ದಾಗ, ಇವರು approval ಸಹ ಕೊಟ್ಟಿಲ್ಲ, reject ಸಹ ಮಾಡಿಲ್ಲ. It's approved ಎಂದು conceive ಮಾಡಿಕೊಂಡು ಅವರು ಮಾಡುವುದಕ್ಕೆ brochures ತಂದು ಬಿಟ್ಟರು, advertisement ಕೊಟ್ಟು ಬಿಟ್ಟರು. Real estate business wih Nandi INfrastruture Corridor ಎಂದು advertisement ಕೊಟ್ಟು ಕೊಂಡು ಬಿಟ್ಟರು. ಅದರ ಬಗ್ಗೆ GO ಆಗಿಲ್ಲ. Intel ರವರಿಗೆ ಮೊದಲು ಅದರಲ್ಲಿ 30 ಎಕರೆ ಜಮೀನು ಕೊಟ್ಟರು. ಈ ರೀತಿ ಜಮೀನು ಕೊಡಲಿಕ್ಕೆ ಶುರು ಮಾಡಿದಾಗ, ಈತನಿಗೆ ಯಾರು ಅಧಿಕಾರ ಕೊಟ್ಟರು ಎನ್ನುವ ಪ್ರಶ್ನೆ ಇಲ್ಲಿ start ಆಯಿತು. ಈ ಸ್ಥಿತಿ ಏನು ನಿರ್ಮಾಣವಾಗಿದೆ.........ಮಾನ್ಯ ಅಧ್ಯಕ್ಷರೆ, ಇದನ್ನು ಈಗಲೇ ಮುಗಿಸಲೋ ಅಥವಾ ಮಧ್ಯಾಹ್ನದ ಮೇಲೆ ಮಾತನಾಡಲೋ?

ಶ್ರೀ ಎಂ.ಪಿ. ವೆಂಕಟೇಶ್ : ಈ ರಾಜ್ಯದ ಜನತೆಗೆ ಗೊತ್ತಾಗಬೇಕು, ತಾವು ಇನ್ನೂ ಮಾತನಾಡಿ.

ಅಧ್ಯಕ್ಷರು : ಈಗಾಗಲೇ ಒಂದೂವರೆ ಗಂಟೆಯಾಯಿತು. ಮಾನ್ಯ ಮಾಧುಸ್ವಾಮಿಯವರೆ, ನಿಮಗೆ ಇನ್ನೂ ಎಷ್ಟು ಕಾಲ ಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ : ನನಗೆ ಮಾತನಾಡಲು ಇನ್ನೂ ಟೈಮ್ ಬೇಕು. ಊಟ ಮಾಡಿ ಬಂದು ಮಾತನಾಡುತ್ತೇನೆ ಸಾರ್.

ಅಧ್ಯಕ್ಷರು : ಊಟ ಮಾಡಿ ಬಂದು ಮಾತನಾಡುತ್ತೀರಾ? ಈಗ ಸುಸ್ತಾಗಿದ್ದೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಹೌದು.

ಅಧ್ಯಕ್ಷರು : ಆಯಿತು, ತಾವು ಆಮೇಲೆ ಮಾತನಾಡುತ್ತೇನೆ ಎನ್ನುವುದಾದರೆ ಆಮೇಲೆಯೇ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಯಿತು ಸಾರ್. ಊಟ ಮಾಡಿ ಬಂದ ಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಜೀವಿಜಯರಿಗೆ ಅತಿ ಮುಖ್ಯವಾದ ವಿಚಾರವೊಂದನ್ನು ಪ್ರಸ್ತಾಪಿಸಲು ಬೆಳಿಗ್ಗೆಯೇ ಅವಕಾಶ ಕೊಡಬೇಕಾಗಿತ್ತು. ನಮ್ಮ ರೈತರನ್ನು ಕೆಲವು ಗೊಬ್ಬರ ಕಂಪೆನಿಗಳು ಲೂಟಿ ಮಾಡುತ್ತಿವೆ ಎಂದು ಅವರು ಸ್ಯಾಂಪಲ್‌ವೊಂದನ್ನು ತಂದಿದ್ದರು. ಜೇಡಿ ಮಣ್ಣನ್ನು ಹೇಗೆ ಗೊಬ್ಬರವನ್ನಾಗಿ ಮಾಡಿದ್ದಾರೆ ಎಂದು ಅವರು ನನಗೆ ತೋರಿಸಿದರು. ಮಾನ್ಯ ಜೀವಿಜಯರವರೆ, ಅದರ ಬಗ್ಗೆ ತಾವು ಈಗ ಪ್ರಸ್ತಾಪಿಸಿ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಕೋಟ್ಯಂತರ ರೂಪಾಯಿಗಳ ಅವ್ಯವಹಾರವಾಗಿದೆ, ಲೂಟಿ ಮಾಡುತ್ತಿದ್ದಾರೆ ಎಂದು ಹೇಳಿದಿರಿ, ಅದರ ಬಗ್ಗೆ ಈಗ ಪ್ರಸ್ತಾಪಿಸಿ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಸೋಮವಾರ ಪೇಟೆ ತಾಲ್ಲೂಕಿನಲ್ಲಿ ನಕಲಿ ರಸಗೊಬ್ಬರದ ಮಾರಾಟ ಜಾಲ ಕಾರ್ಯನಿರ್ವಹಿಸುತ್ತಿರುವ ಕುರಿತು.

ಶ್ರೀ ಬಿ.ಎ. ಜೀವಿಜಯ (ಸೋಮವಾರಪೇಟೆ) : ಮಾನ್ಯ ಅಧ್ಯಕ್ಷರೆ, ನನಗೆ ಅತ್ಯಂತ ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನನ್ನ ಸೋಮವಾರಪೇಟೆ ಕ್ಷೇತ್ರದಲ್ಲಿ ಈಗ ಪ್ರಾಯಶಃ ಬರೇ ಸೋಮವಾರಪೇಟೆ ಒಂದೇ ಅಲ್ಲ, ಇಡೀ ಕರ್ನಾಟಕ ರಾಜ್ಯದಲ್ಲಿ ನಕಲಿ ರಸಗೊಬ್ಬರವನ್ನು ಈಗ ಮಾರಾಟ ಮಾಡುತ್ತಿದ್ದಾರೆ. ಇದು ಬಹಳ ಗಂಭಿರವಾದಂತಹ ಸಮಸ್ಯೆಯಾಗಿದೆ. ಇದು ರೈತರ ಬದುಕಿಗೆ ಆಘಾತವನ್ನು ಉಂಟು ಮಾಡತಕ್ಕಂಥ ಮತ್ತು ಅವರ ಜೀವನದ ಭವಿಷ್ಯವನ್ನು ಮಾರಣ ಹೋಮ ಮಾಡತಕ್ಕಂಥ ಒಂದು ಕೃತ್ಯ ಆಗಿ ಹೋಗಿ ಬಿಟ್ಟಿದೆ. ಈ ರಾಜ್ಯದಲ್ಲಿ ಯಾವ ರೀತಿಯಲ್ಲಿ ನಕಲಿ ಛಾಪಾ ಕಾಗದದ ಹಗರಣವಾಯಿತೋ, ಅದೇ ರೀತಿಯಲ್ಲಿ ಈ ನಕಲಿ ರಸಗೊಬ್ಬರದ ಜಾಲ ಈ ಕೊಡಗಿನಲ್ಲಿ ಮಾತ್ರವಲ್ಲ ಹಾಸನ, ತುಮಕೂರು, ಚಿಕ್ಕಮಗಳೂರು, ಚಿತ್ರದುರ್ಗ ಮತ್ತಿತರ ರಾಜ್ಯದ ಎಲ್ಲಾ ಜಿಲ್ಲೆಗಳಾದ್ಯಂತ